ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 6 ಭಾನುವಾರ 2024

₹4

ಸಂಪುಟ: 45 | ಸಂಚಿಕೆ: 171 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com









ಮೈಸೂರು ಮಿತ್ರ ಭಾನುವಾರ 6 ಅಕ್ಟೋಬರ್ 2024

ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ವಿಶ್ವ ಹೃದಯ ದಿನಾಚರಣೆ



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ವಿಶ್ವ ಹೃದಯ ದಿನ ಆಚರಿಸಲಾಯಿತು.

ಮೈಸೂರು,ಅ.5–ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸೆ.27ರಿಂದ ಅ.3 ರವರೆಗೆ ಜನಸಾಮಾನ್ಯರಲ್ಲಿ ಹೃದಯದ ಆರೋಗ್ಯ, ಆರೋಗ್ಯಕರ ಜೀವನಶೈಲಿ ಮತ್ತು ತುರ್ತು ಸನ್ನಿವೇಶಗಳಲ್ಲಿ ಜೀವ ಉಳಿಸುವ ಕೌಶಲಗಳನ್ನು ಉತ್ತೇಜಿಸುವ ಗುರಿಯೊಂದಿಗೆ ವಿಶ್ವ ಹೃದಯ ಸಪ್ತಾಹವನ್ನು ಆಚರಿಸಲಾಯಿತು.

ಹೃದಯ ಆರೋಗ್ಯವನ್ನು ಕಾಪಾಡಿಕೊಳ್ಳಲು ಎಂತಹ ಚಟುವಟಿಕೆಗಳು ಅಗತ್ಯ ಎಂಬ ವಿಷಯಗಳ ಬಗ್ಗೆ ಸಪ್ತಾಹದಲ್ಲಿ ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ಮತ್ತು ಆಸ್ಪತ್ರೆ ನಿರ್ದೇಶಕ ಪ್ರಮೋದ್ ಕುಂದರ್ ಮಾರ್ಗದರ್ಶನ ನೀಡಿದರು.

ಸೆ.27ರಂದು ಚಾಮುಂಡಿಬೆಟ್ಟದಲ್ಲಿ ಹೃದಯ ಆರೋಗ್ಯಕ್ಕೆ ಮೀಸಲಾದ 3ಡಿ ಮ್ಯೂರಲ್ ಕಲಾಕೃತಿಯ ಅನಾವರಣದೊಂದಿಗೆ ಪ್ರಾರಂಭವಾಯಿತು. ಕಾರ್ಯಕ್ರಮದಲ್ಲಿ ಕಲಾವಿದ ಬಾದಲ್ ನಂಜುಂಡಸ್ವಾಮಿ ಭಾಗವಹಿಸಿದ್ದರು. ಸಪ್ತಾಹದ ಅಂಗವಾಗಿ ನೆಕ್ಸಲ್ ಮಾಲ್‌ನಲ್ಲಿ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜಾಗೃತಿ ಕಾರ್ಯಕ್ರಮ, ಚಾಮುಂಡಿಬೆಟ್ಟದಲ್ಲಿ ಸಾರ್ವಜನಿಕರ ಜೊತೆಗೂಡಿ ಕ್ಲೈಂಬಾಥಾನ್ ಹಮ್ಮಿಕೊಳ್ಳಲಾಗಿತ್ತು.

ಅ.9ರಂದು ಕೋಟೇರ ಯಾಮಿನಿ ಮುತ್ತಣ್ಣ ಅವರಿಂದ 'ದೇವಿಮಾರ್ಗ' ಶಾಸ್ತ್ರೀಯ ನೃತ್ಯರೂಪಕ

ಮಡಿಕೇರಿ, ಅ.5– ಮಡಿಕೇರಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಲಾಸಿಂಚನ ನೃತ್ಯಾಲಯದ ವತಿಯಿಂದ ಮಡಿಕೇರಿ ಗಾಂಧಿ ಮೈದಾನದಲ್ಲಿ ಅ.9ರಂದು ಸಂಜೆ 7 ಗಂಟೆಗೆ ಕೋಟೇರ ಯಾಮಿನಿ ಮುತ್ತಣ್ಣ ಮತ್ತು ಅವರ ಶಿಷ್ಯಂದಿರಿಂದ 'ದೇವಿ ಮಾರ್ಗ' ಶಾಸ್ತ್ರೀಯ ನೃತ್ಯ ರೂಪಕ ಮತ್ತು ಇತರೆ ಸಾಂಸ್ಕೃತಿಕ ತಂಡಗಳಿಂದ ಕಾರ್ಯಕ್ರಮ ಏರ್ಪಡಿಸಲಾಗಿದೆ. ಚೆಡ್ತಿಮಾಡ ರಾಜಾ ಮತ್ತು ಸುಂದರಿ ದಂಪತಿ ಪುತ್ರಿಯಾದ ಯಾಮಿನಿ ಮುತ್ತಣ್ಣ ಅವರು ಶಾಸ್ತ್ರೀಯ ನೃತ್ಯ ಮತ್ತು ಅಸ್ತಂಗ ಯೋಗದಲ್ಲಿ ಪ್ರಾವೀಣ್ಯತೆ ಹೊಂದಿದ್ದಾರೆ. ಇವರು ಭರತನಾಟ್ಯದಲ್ಲಿ ಉನ್ನತ ದರ್ಜೆ ಹೊಂದಿರುವುದಲ್ಲದೆ, ಪ್ರಮುಖ ಹಬ್ಬಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಲವಾರು ಪ್ರದರ್ಶನಗಳನ್ನು ನೀಡಿದ್ದಾರೆ. ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ ವತಿಯಿಂದ ಸಾಂಸ್ಕೃತಿಕ ರಾಯಭಾರಿಯಾಗಿ ವಿಶ್ವದಾದ್ಯಂತ ಸಂಚರಿಸಿ ನಮ್ಮ ಸಂಸ್ಕೃತಿಯನ್ನು ಪಸರಿಸಿದ್ದಾರೆ. ಯಾಮಿನಿ ಅವರು ಅಂತರರಾಷ್ಟ್ರೀಯ ಖ್ಯಾತಿ ಲೇಖಕರಾಗಿದ್ದು, 3 ಅತ್ಯುತ್ತಮ ಯೋಗಾ ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕಗಳು ಬೇರೆ ಬೇರೆ ಭಾಷೆಗಳಲ್ಲೂ ಅನುವಾದಗೊಂಡಿವೆ.



ನಿಧನ

ಸೂರಜ್ ಚೆಂಗಪ್ಪ ಕೊಡಂದೇರ



ಮೈಸೂರು,ಅ.5–ಮೈಸೂರಿನ ಬೋಗಾದಿಯ ಆಕಾರ್ ಅಪಾರ್ಟ್‌ಮೆಂಟ್ ನಿವಾಸಿ ಸೂರಜ್ ಚೆಂಗಪ್ಪ ಕೊಡಂದೇರ (74) ಸುದೀರ್ಘ ಅನಾರೋಗ್ಯದ ನಂತರ ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಬೃಂದಾ ಚೆಂಗಪ್ಪ (ಕೊಕ್ಕಲೇರ), ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಸಂಜೆ ವೇಳೆಗೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ದಸರಾದಲ್ಲಿ ಯೋಗ ಲೋಕ ಅನಾವರಣ

ರಾಜ್ಯದ ನಾನಾ ಕಡೆಗಳಿಂದ ಆಗಮಿಸಿದ ಸಾವಿರಾರು ಯೋಗ ಪಟುಗಳಿಂದ ಯೋಗ ಪ್ರದರ್ಶನ



ಯೋಗಪಟುಗಳು ನಾನಾ ರೀತಿಯ ಯೋಗ ಭಂಗಿ ಪ್ರದರ್ಶಿಸುವ ಮೂಲಕ ಯೋಗ ಲೋಕ ಅನಾವರಣಗೊಳಿಸಿದರು.

ಮೈಸೂರು, ಅ.5(ಜಿಎ)–ಮೈಸೂರು ದಸರಾ ಮಹೋತ್ಸವದಲ್ಲಿ ರಾಜ್ಯದ ವಿವಿಧ ಭಾಗದಿಂದ ಆಗಮಿಸಿದ್ದ ಯೋಗ ಪಟುಗಳು ನಾನಾ ರೀತಿಯ ಯೋಗ ಭಂಗಿ ಪ್ರದರ್ಶಿಸುವ ಮೂಲಕ ಯೋಗ ಲೋಕ ಅನಾವರಣಗೊಳಿಸಿದರು.

ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಯೋಗ ದಸರಾ ಉಪ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ, ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಿರಿಯ ಕಿರಿಯರು ಸೇರಿದಂತೆ 2 ಸಾವಿರಕ್ಕೂ ಹೆಚ್ಚು ಯೋಗಪಟುಗಳು ಭಾಗವಹಿಸಿ, ಯೋಗದ ಮಹತ್ವ ಸಾರಿ, ನಗದು ಬಹುಮಾನ ಪಡೆದುಕೊಂಡರು.

ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರಿನ ಯೋಗಕ್ಕೆ ವಿಶ್ವ ಪರಂಪರೆ ಇದೆ. ಮೈಸೂರಿನ ಯೋಗ ವಿಶ್ವ ಪ್ರಸಿದ್ಧಿಯನ್ನು ಪಡೆದಿದ್ದು, ಎಲ್ಲಾ ವಯೋಮಾನದವರು ಯೋಗದಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ರಾಜ್ಯಮಟ್ಟದಲ್ಲಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಯೋಗದಲ್ಲಿ ಹೆಸರು ಮಾಡಿದವರು ಮೈಸೂರಿನಲ್ಲಿ ಯೋಗ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆ ಎಂದು ಹೇಳಿದರು.

ಯಾವುದೇ ವಯಸ್ಸಿನವರು ಬೇಕಾದರೂ ಯೋಗವನ್ನು ಅಭ್ಯಾಸ ಮಾಡಬಹುದು. ಆರೋಗ್ಯದ ಕಡೆಗೆ ಗಮನ ಕೊಡಬೇಕು ಎಂಬುವುದರ ಸಲುವಾಗಿ ಮೈಸೂರಿನಲ್ಲಿ ಯೋಗ ದಸರಾವನ್ನು ಪ್ರಾರಂಭ ಮಾಡಲಾಗಿದೆ. ಯೋಗ ದಸರಾವನ್ನು ಗಿನ್ನೆಸ್ ದಾಖಲೆಗೆ ತೆಗೆದುಕೊಂಡು ಹೋಗಬೇಕು ಎಂದು ಹೇಳಿದೆ. ಆದರೆ, ಕಾರಣಾಂತರಗಳಿಂದ ಅದು ಆಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದಸರಾ ಮಹೋತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಕಲಾವಿದರಿಗೆ ವಿವಿಧ ರೀತಿಯ ಸ್ಪರ್ಧೆಗಳನ್ನು ಆಯೋಜಿಸಿ ಕಲಾವಿದರ ಪ್ರತಿಭೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಅದೇ ರೀತಿಯಲ್ಲಿ ಸ್ಪರ್ಧೆಯಲ್ಲಿ ವಿಶೇಷಚೇತನ ಮಕ್ಕಳು, ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿ ವಿವಿಧ ಆಸನಗಳನ್ನು ಪ್ರದರ್ಶಿಸಿ, ಮೆಚ್ಚುಗೆ ಗಳಿಸಿದರು.

ಕಾರ್ಯಕ್ರಮದಲ್ಲಿ ಯೋಗ ದಸರಾ ಉಪ ಸಮಿತಿಯ ಅಧ್ಯಕ್ಷ ಎಂ.ಮಹೇಶ್, ಉಪಾಧ್ಯಕ್ಷ ಜಮೀರ್ ಅಹ್ಮದ್, ಪ್ರಕಾಶ್, ಸಿದ್ದರಾಜು, ಚಿಕ್ಕಸ್ವಾಮಿ, ಸದಸ್ಯರಾದ ಕೆ.ವಿ.ಭರತ್ ರಾಜ್, ಎಚ್.ಯೋಗೇಶ್, ಪ್ರಭು, ಹರೀಶ್, ಎಂ.ಬಿ.ವಿಕೇಶ್ ಶರ್ಮ, ಪುಟ್ಟಸ್ವಾಮಿ, ಶ್ರೀಕಂಠ, ಜಗದೀಶ್, ಸಮಿತಿ ಉಪವಿಶೇಷಾಧಿಕಾರಿ ರಮ್ಯ, ಸಮಿತಿಯ ಅಧಿಕಾರಿ ಡಾ.ಪುಷ್ಪ ಉಪಸ್ಥಿತರಿದ್ದರು.

ವಾಹನ ವಿಮೆ ಪೊಲೀಸರ ಭಯದಿಂದ ಮಾಡದೇ ಸುರಕ್ಷತೆಗಾಗಿ ಮಾಡಿಸಬೇಕು

ಮೈಸೂರು ಪ್ರಧಾನ ಜಿಲ್ಲಾ ನ್ಯಾಯಾಧೀಶ ರವೀಂದ್ರ ಹೆಗ್ಡೆ ಕಿವಿಮಾತು



ಎನ್.ಸುಂದರಾಜ್ ನಿರ್ದೇಶನ, ರಚನೆಯ 'ಅಪಘಾತ' ನಾಟಕ ಪ್ರದರ್ಶನದಲ್ಲಿ ಪಾಲ್ಗೊಂಡು ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರವೀಂದ್ರ ಹೆಗ್ಡೆ ಮಾತನಾಡಿದರು.

ಮೈಸೂರು, ಅ.5(ಎಸ್‌ಪಿಎನ್)– ಸವಾರರು ವಾಹನ ವಿಮೆಯನ್ನು ಪೊಲೀಸರ ಭಯದಿಂದ ಮಾಡಿಸಬಾರದು. ಬದಲಾಗಿ ತಮ್ಮ ಸುರಕ್ಷತೆ, ಕಾನೂನು ಪಾಲನೆಗೆ ವಾಹನ ವಿಮೆ ಮಾಡಿಸಬೇಕು ಎಂದು ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರವೀಂದ್ರ ಹೆಗ್ಡೆ ಕಿವಿಮಾತು ಹೇಳಿದರು.

ಮೈಸೂರು ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಸರಾ ಸಾಂಸ್ಕೃತಿಕ ಉಪಸಮಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಪ್ರಸ್ತುತ ಪಡಿಸುವ ಕಾನೂನು ನೆರವು–ಅರಿವು ಕುರಿತಾದ ಕಿರುನಾಟಕ ಹಾಗೂ ಎನ್.ಸುಂದರಾಜ್ ನಿರ್ದೇಶನ, ರಚನೆಯ 'ಅಪಘಾತ' ನಾಟಕ ಪ್ರದರ್ಶನದಲ್ಲಿ ಪಾಲ್ಗೊಂಡು ಮಾತನಾಡಿದರು.

ನಾನು, ಬೇರೆ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಅಪಘಾತವೊಂದರ ಪ್ರಕರಣ ನನ್ನ ಮುಂದೆ ಬಂತು. ಆ ಪ್ರಕರಣದಲ್ಲಿ ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿದ್ದರು. ಪ್ರಕರಣದ ಎರಡು ಕಡೆ ಕುಟುಂಬದವರು ಕಡು ಬಡವರು. ಅಪಘಾತದಿಂದ ಮೃತಪಟ್ಟ ಕುಟುಂಬಕ್ಕೆ ನೆರವು ನೀಡುವುದು ಅವಶ್ಯಕ. ಆದರೆ, ಮತ್ತೊಂದು ಕುಟುಂಬ ನೆರವು ನೀಡುವಷ್ಟು ಶಕ್ತವಾಗಿರಲಿಲ್ಲ. ಇದರ ಮಧ್ಯೆ ವಿಮಾ ಕಂಪನಿಯವರು ಚಾಲನೆ ಮಾಡುತ್ತಿದ್ದವ ಅಪ್ರಾಪ್ತ ಎಂಬ ನೆಪವೊಡ್ಡಿ ಪರಿಹಾರ ನೀಡದೆ ಹಿಂದೆ ಸರಿದ ಪ್ರಕರಣವನ್ನು ಉಲ್ಲೇಖಿಸಿ ಮಾತನಾಡಿದರು.

ಹಾಗಾಗಿ ಅಪ್ರಾಪ್ತರಿಗೆ ಚಾಲನೆ ನೀಡುವುದರಿಂದ ಮುಂದಾಗುವ ಪರಿಣಾಮಗಳ ಬಗ್ಗೆ ಸಮಾಜ ಯೋಚಿಸಬೇಕು ಮತ್ತು ಅಪ್ರಾಪ್ತರಿಗೆ ಚಾಲನೆ ಮಾಡಲು ಅವಕಾಶ ಮಾಡಿಕೊಟ್ಟರೆ, ಇದರ ನೇರ ಪರಿಣಾಮ ಪೋಷಕರು ಅನುಭವಿಸಬೇಕು. ಅಪಘಾತ ನಾಟಕದಲ್ಲಿ ಭಾರತೀಯ ಮೋಟಾರ್ ಕಾಯ್ದೆಗಳ ಕುರಿತು ಜನರಿಗೆ ತಿಳಿಸುವ ಪ್ರಯತ್ನವಾಗಿದೆ ಎಂದರು.

'ಅಪಘಾತ'ದ ನಾಟಕ ತಾರಾಗಣದಲ್ಲಿ ತಂದೆಯ ಪಾತ್ರದಲ್ಲಿ ಎಸ್.ಮಂಜುನಾಥ್, ತಾಯಿಯ ಪಾತ್ರದಲ್ಲಿ ಶೋಭಾ, ವೈ.ಆರ್. ಧ್ರುವ(ಮಗ), ಎನ್.ತುಳಸಿ(ಮಗಳು), ಎಸ್.ಎಸ್.ತೇಜಸ್ವಿನಿ (ಅಜ್ಜಿ), ಆರ್.ಜಗದೀಶ್(ಸ್ನೇಹಿತ ಪಾತ್ರ), ಟಿ.ಎನ್.ನಾಗನಂದ (ಕಾರ್ಪೋರೇಷನ್ ಅಧಿಕಾರಿ), ಟಿ.ಪಿ.ಬಸವ ಶೆಟ್ಟಿ (ಎಸ್‌ಐ ಪಾತ್ರ), ಜಿ.ಎಸ್. ಶಿವಸ್ವಾಮಿ (ಅಮಿನ್) ಇದ್ದಾರೆ. ನೇಪಥ್ಯದಲ್ಲಿ ವಿದ್ವಾನ್ ಮಹಾಲಿಂಗ ಸಂಗೀತ, ನಾಗೇಶ್ (ಮೇಕಪ್) ಸೇವೆ ಸಲ್ಲಿಸಿದ್ದಾರೆ. ಈ ವೇಳೆ ಕಲಾವಿದರ ದಸರಾ ಉಪಸಮಿತಿ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ. ದಿನೇಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ ಸೇರಿದಂತೆ ಇತರರಿದ್ದರು.

ಹಲವು ಮಕ್ಕಳ ಹೊಂದುವುದು,ಬಡತನವೂ ಮಹಿಳಾ ಸಬಲೀಕರಣಕ್ಕೆ ಅಡ್ಡಿ : ಚಿಂತಕಿ ಸಾವಿತ್ರಿ ಮಜುಂದಾರ



ಮೈಸೂರು, ಅ.5(ಎಸ್‌ಪಿಎನ್)– 'ಹಲವು ಮಕ್ಕಳು ಹೊಂದುವುದು' ಹಾಗೂ 'ಬಡತನ' ಇವೆರಡು ಅಂಶಗಳು ಮಹಿಳಾ ಸಬಲೀಕರಣಕ್ಕೆ ಹಿನ್ನಡೆಯಾಗುತ್ತವೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಬಲವಾಗಿ ನಂಬಿದ್ದರು ಎಂದು ಕೊಪ್ಪಳದ ಮಹಿಳಾ ಚಿಂತಕಿ ಸಾವಿತ್ರಿಮಜುಂದಾರ ಅಭಿಪ್ರಾಯಪಟ್ಟರು.

ಮೈಸೂರು ಜೆ.ಕೆ.ಮೈದಾನದಲ್ಲಿ ಮಹಿಳಾ ದಸರಾ ಅಂಗವಾಗಿ ದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ 'ಮಹಿಳಾ ಸಬಲೀಕರಣದಲ್ಲಿ– ಡಾ.ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳು' ವಿಷಯ ಕುರಿತು ಮಾತನಾಡಿದರು.

ಬಡ ಮಹಿಳೆಯರ ಬಗ್ಗೆ ಡಾ.ಬಿ.ಆರ್. ಅಂಬೇಡ್ಕರ್ ಕಾಳಜಿ ಹೊಂದಿದ್ದರು. ಭಾರತದಲ್ಲಿ ಮಹಿಳಾ ಸಬಲೀಕರಣಕ್ಕೆ ಮಹಿಳೆಯರು ಹಲವು ಮಕ್ಕಳನ್ನು ಹೊಂದುವುದು ಹಾಗೂ ಬಡತನ ಅಡ್ಡಿಯಾಗಿದೆ. ಈ ನಿಟ್ಟಿನಲ್ಲಿ ಕುಟುಂಬ ಯೋಜನೆ ಜಾರಿಗೊಳಿಸುವ ಬಗ್ಗೆ ಒತ್ತು ಕೊಡಬೇಕು ಎಂದಿದ್ದರು. ಅಲ್ಲದೆ, ದಂಪತಿಗೆ ಒಂದು ಮಗುವಿದ್ದರೆ, ತಾಯಿಯ ಆರೋಗ್ಯವು ಚೆನ್ನಾಗಿರುತ್ತದೆ. ಹೆರಿಗೆ ಕ್ರಮ–ಸಮಯ ಎರಡೂ ಉಳಿಯುತ್ತದೆ. ಇದರಿಂದ ಮಹಿಳೆಯರು ಸಾರ್ವಜನಿಕ ಕೆಲಸದಲ್ಲಿ ತೊಡಗಿಸಿಕೊಂಡು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ತಿಳಿಸಿದ್ದರು ಎಂದರು.

ಸಂತಾನಹರಣ ಶಸ್ತ್ರಚಿಕಿತ್ಸೆ ಎಂದರೆ, ಗಂಡು–ಹೆಣ್ಣು ಇಬ್ಬರಿಗೂ ಆಗಬೇಕು. ಪ್ರಸ್ತುತ ಸಂದರ್ಭಕ್ಕೆ ನೋಡುವುದಾದರೆ ಶೇ.97 ರಷ್ಟು ಹೆಣ್ಣು ಮಕ್ಕಳು ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಾರೆ. ಆದರೆ, ಗಂಡಸರು ಇದಕ್ಕೆ ಒಪ್ಪದಿರುವುದು ಬೇಸರದ ಸಂಗತಿ. ಈ ದೇಶದಲ್ಲಿ ಮಹಿಳಾ ಸಮಾನತೆ ಮತ್ತು ಮಹಿಳಾ ಸಬಲೀಕರಣವನ್ನು 3 ಕಾಲಘಟ್ಟಗಳಲ್ಲಿ ಕಾಣಬಹುದು. ಒಂದು ಬುದ್ಧನ ಕಾಲದಲ್ಲಿ ಮತ್ತೊಂದು 12ನೇ ಶತಮಾನದಲ್ಲಿ ಅದಾದ 800 ವರ್ಷಗಳ ನಂತರ ಅಂದರೆ ಡಾ.ಅಂಬೇಡ್ಕರ್ ಅವರ ಕಾಲಘಟ್ಟದಲ್ಲಿ ಎಂದು ಕೆಲ ಘಟನೆಗಳನ್ನು ವಿವರಿಸಿದರು.

ಸಮಾನ ಶಿಕ್ಷಣ ಕೊಡಬೇಕು. ಅಂತರ ಜಾತಿ ಮದುವೆ ಕಾನೂನು ಬದ್ಧಗೊಳಿಸಬೇಕು. ಒಬ್ಬ ಪುರುಷನಿಗೆ ಒಂದೇ ಮದುವೆ, ಎರಡನೇ ಮದುವೆ ನಿಷೇಧಿಸಬೇಕು. ಹಿಂದೂ ಕೋಡ್ ಬಿಲ್ ಜಾರಿಗೆ ಒತ್ತಾಯಿಸಿದ್ದ ಸಂದರ್ಭವನ್ನು ವಿವರಿಸಿದರಲ್ಲದೆ, ಪ್ರಸ್ತುತ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆ ಸೇರಿದಂತೆ ಯೋಜನೆಗಳು ಮಹಿಳಾ ಸಬಲೀಕರಣದ ಮೊದಲ ಮೆಟ್ಟಿಲು ಎಂದರು.

ಮಹಿಳಾದಸರಾ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಾದ ಜಾನಪದ ನೃತ್ಯದಲ್ಲಿ ಹದಿನಾರು ಗ್ರಾಮದ ಮಹಿಳಾ ತಂಡ(ಪ್ರ) ಸುತ್ತೂರು ಗ್ರಾಮದ ಮಹಿಳಾ ತಂಡ(ದ್ವಿ), ಹೆಡತಲೆ ಗ್ರಾಮದ ಮಹಿಳಾ ತಂಡ(ತೃ)ಸ್ಥಾನ ಪಡೆದಿದ್ದಾರೆ. ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಪಿರಿಯಾಪಟ್ಟಣದ ಕಾವೇರಮ್ಮ ಮತ್ತು ತಂಡ(ಪ್ರ), ತಿ.ನರಸೀಪುರದ ನಂದಿನಿ ಮತ್ತು ತಂಡ(ದ್ವಿ), ಮೈಸೂರು ಶೋಭಾ ಮತ್ತು ತಂಡ (ತೃ) ಸ್ಥಾನಗಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಪಿರಮಿಡ್ ಸ್ಪಿರಚ್ಯುಯಲ್ ಸೊಸೈಟಿ ಮೂವ್‌ಮೆಂಟ್, ಕಾವೇರಿ ಪಿರಮಿಡ್ ಧ್ಯಾನ ಕೇಂದ್ರ :** ಮೈಸೂರು ಧ್ಯಾನ ದಸರಾ ಕಾರ್ಯಕ್ರಮ, ಸಾಮೂಹಿಕ ಸಂಗೀತ ನಾದ ಧ್ಯಾನ, ದಸರಾ ಹಬ್ಬದ ಮಹತ್ವ ಮುಖ್ಯ ಅತಿಥಿಗಳ ಸಂದೇಶ, ಸಾಂಸ್ಕೃತಿಕ ಕಾರ್ಯಕ್ರಮಗಳು, ಹಿರಿಯ ಪಿಎಸ್‌ಎಸ್‌ಎಂ ಮಾಸ್ಟರ್‌ಗಳ ಸಂದೇಶಗಳು, ಸ್ಥಳ: ಶ್ರೀ ಹೊಸಮಠದ ನಟರಾಜ ಪ್ರತಿಷ್ಠಾನ, ಬೆಳಗ್ಗೆ 8.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಪಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 9 ಗಂಟೆಗೆ ಶ್ರೀ ಮಹಾಗಣಪತಿ ಹೋಮ, ಅನ್ನಪೂರ್ಣೇಶ್ವರಿ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ.

■ **ಮೈಸೂರು ಆಕಾಶವಾಣಿ :** ಆಯಿಷ್ ಯಶೋಗಾಥೆ ಸರಣಿ ಕಾರ್ಯಕ್ರಮ ಪ್ರಸಾರ, ಪ್ರತಿ ಭಾನುವಾರ ಬೆಳಗ್ಗೆ 9.05 ರಿಂದ 9.35ರವರೆಗೆ

■ **ಕರಕುಶಲ ಕಲೆ ಉಪಸಮಿತಿ:** ದಸರಾ ಪ್ರಯುಕ್ತ ಮಕ್ಕಳಿಗಾಗಿ ಮಣ್ಣಿನ ಕಲಾಕೃತಿ ರಚಿಸುವ ಹಾಗೂ ಚಿತ್ರ ಬರೆಯುವ ಸ್ಪರ್ಧೆ, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಆವರಣ, ಸಿದ್ದಾರ್ಥನಗರ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಮೈಸೂರು ಸೈನ್ಸ್ ಫೌಂಡೇಷನ್, ಬಿಎಸ್‌ಎಸ್ ವಿದ್ಯೋದಯ:** ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ದೂರದರ್ಶಕ ತಯಾರಿಕೆ ಕಾರ್ಯಾಗಾರ ಕಾಸ್ಮೋಸ್–2024, ಸ್ಥಳ: ಬಿಎಸ್‌ಎಸ್ ವಿದ್ಯೋದಯ ಶಾಲೆ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ರಿಂದ.

■ **ಅಮೃತವಿದ್ಯಾಪೀಠಂ:** 14ನೇ ಪದವಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಎಫ್‌ಎಫ್‌ಎಐ ಲಾಜಿಸ್ಟಿಕ್ಸ್ ಇಂಡಿಯಾ ಪ್ರೈ.ಲಿ.ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಿಇಓ ಕಾರ್ತಿ ಭಾಸ್ಕರ್, ಗೌರವ ಅತಿಥಿಗಳು: ಅಮೃತ ವಿಶ್ವವಿದ್ಯಾಪೀಠಂನ ಶೈಕ್ಷಣಿಕ ವಿಭಾಗದ ಡೀನ್ ಹಾಗೂ ಕುಲಪತಿಗಳ ಸಲಹಾ ಮಂಡಳಿ ಸದಸ್ಯರಾದ ಡಾ. ಸಸಾಂಗನ್ ರಾಮನಾಥನ್, ಮಾತಾ ಅಮೃತಾನಂದಮಯಿ ಮಠದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಪೂರ್ಣಾಮೃತಾನಂದಪುರಿ ಅವರಿಂದ ಆಶೀರ್ವಚನ, ಸ್ಥಳ: ಅಮೃತ ವಿಶ್ವವಿದ್ಯಾಪೀಠಂನ ಆವರಣ, ಬೋಗಾದಿ 2ನೇ ಹಂತ, ಬೆಳಗ್ಗೆ 10ಕ್ಕೆ

■ **ಮೈಸೂರು ಮೃಗಾಲಯ:** 70ನೇ ವನ್ಯಜೀವಿ ಸಪ್ತಾಹ–2024 ಕಾರ್ಯಕ್ರಮ, ಸ್ಥಳ: ಮೃಗಾಲಯದ ಆವರಣ, ಬೆಳಗ್ಗೆ 10ಕ್ಕೆ.

■ **ಕೆ.ಎಸ್. ರಾಘವೇಂದ್ರ:** ಪೇಪರ್ ಪಲ್ಪ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ ಎರಡನೇ ಹಂತ, ಬೆಳಗ್ಗೆ 10 ರಿಂದ.



ಇಂದಿನ ಪಂಚಾಂಗ

06.10.2024 ಭಾನುವಾರ, ಮಳೆ ನಕ್ಷತ್ರ: ಹಸ್ತ, 27.09.2024ರಿಂದ 09.10.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ವಿಶಾಖ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ–2024 ಅಂಗವಾಗಿ ಪತ್ರಿಕಾ ಛಾಯಾಗ್ರಾಹಕರ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10 ರಿಂದ.

■ **ಸ್ವರ್ಣ ನೃಸಿಂಹ ದತ್ತಸಾಯಿ ಪೀಠಿಕ ಸೇವಾ ಟ್ರಸ್ಟ್:** ಶರನ್ನವರಾತ್ರಿ ವೈಭವ–2024, ಬೆಳಗ್ಗೆ 10ಕ್ಕೆ ಚೌತಿ, ಬಾಲಾ ತ್ರಿಪುರ ಸುಂದರಿ ಹೋಮ, ಸ್ಥಳ: ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ, ಸಂಜೆ 6 ಗಂಟೆಗೆ ಲಲಿತಾ ಸಹಸ್ರನಾಮ ಪಾರಾಯಣ, ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀಮತಿ ವೈಷ್ಣವಿ ಹಾನಗಲ್ ಅವರಿಂದ ಸಂಗೀತ, ಸ್ಥಳ: ಗುರು ನಿವಾಸ, ಸೋನಾರ್ ಸ್ಟ್ರೀಟ್, ನಾರಾಯಣಶಾಸ್ತ್ರಿ ರಸ್ತೆ.

■ **ದಸರಾ ರಾಷ್ಟ್ರೀಯ ಸಮ್ಮೇಳನ ಉಪಸಮಿತಿ, ಜಿಲ್ಲಾಡಳಿತ, ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಸಂವಿಧಾನ ಅಂಗೀಕಾರದ ಅಮೃತ ಮಹೋತ್ಸವದ ಅಂಗವಾಗಿ ಪ್ರಭುತ್ವ ಮತ್ತು ಸಂವಿಧಾನದ ಆಶಯ ಕುರಿತು ರಾಷ್ಟ್ರೀಯ ಸಮ್ಮೇಳನ, ಬೆಳಗ್ಗೆ 10ರಿಂದ ಸಮಗ್ರ ಗೋಷ್ಠಿ–2, ಹಿರಿಯ ನ್ಯಾಯವಾದಿ ಪ್ರೊ. ರವಿವರ್ಮ ಕುಮಾರ್ ಅವರಿಂದ ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಯ ಕಾರ್ಯನಿರ್ವಹಣೆ ಕುರಿತು ವಿಚಾರ ಮಂಡನೆ, ಅಧ್ಯಕ್ಷತೆ: ರಾಷ್ಟ್ರೀಯ ಕಾನೂನು ಶಾಲೆ ಇಂಡಿಯಾ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಸುಧೀರ್ ಕೃಷ್ಣಸ್ವಾಮಿ, 11.45ರಿಂದ ಮೂರನೇ ಗೋಷ್ಠಿ, ದೆಹಲಿ ವಿಶ್ವವಿದ್ಯಾಲಯದ ಪ್ರೊ. ಎನ್.ಸುಕುಮಾರ್ ಅವರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಸಂವಿಧಾನ ಕುರಿತು ವಿಚಾರ ಮಂಡನೆ, ಅಧ್ಯಕ್ಷತೆ: ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ.ಆನಂದ್, ಮಧ್ಯಾಹ್ನ 2ರಿಂದ ನಾಲ್ಕನೇ ಗೋಷ್ಠಿ, ಆಯವ್ಯಯ ಮತ್ತು ನೀತಿ ಅಧ್ಯಯನ ಕೇಂದ್ರದ ಅಧ್ಯಕ್ಷ ಪ್ರೊ.ವಿನೋದ್ ವ್ಯಾಸುಲು ಅವರಿಂದ ಸಂವಿಧಾನ ಆಶಯ ಮತ್ತು ಭಾರತದ ಆರ್ಥಿಕತೆ ಕುರಿತು ವಿಚಾರ ಮಂಡನೆ, ಆರ್ಥಿಕ ತಜ್ಞ ಪ್ರೊ. ಟಿ.ಆರ್.ಚಂದ್ರಶೇಖರ್ ಅವರಿಂದ ಕರ್ನಾಟಕದ ಆರ್ಥಿಕ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಕುರಿತು ವಿಚಾರ ಮಂಡನೆ, ಅಧ್ಯಕ್ಷತೆ : ಚೆನ್ನೈ ಅಭಿವೃದ್ಧಿ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಪ್ರೊ.ವಿ.ಕೆ. ನಟರಾಜ್, ಮಧ್ಯಾಹ್ನ 3.45ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಸಂಸ್ಕೃತಿ ಚಿಂತಕ ಡಾ.ರಂಜಾನ್ ದರ್ಗಾ, ಅಧ್ಯಕ್ಷತೆ: ಕರ್ನಾಟಕ ಮಹಿಳಾ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಸೆನೆಟ್ ಭವನ, ಮಾನಸಗಂಗೋತ್ರಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಮಾರುತಿ ಪ್ರಸನ್ನ ಬಿ.ಎನ್, 6.15 ದಸರಾ ಗೀತಾರಾಧನ, 6.30 ದಸರಾದಲ್ಲಿ ಇಂದು–ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ರಾಜಮಾರ್ಗ–ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ವಿಕಾಸ ಅಕಾಡೆಮಿ, ಕಲಬುರ್ಗಿ, 7.45 ಶರಣ ಸಂಸ್ಕೃತಿ ಉತ್ಸವ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಶ್ರೀಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30 ಚಿತ್ರಗೀತೆಗಳು, 9.05ನಮ್ಮ ಆರೋಗ್ಯ 'ಆಯಿಷ್ ಯಶೋಗಾಥೆ' ಸರಣಿಯ ಕುರಿತು ಪ್ರಾಸ್ತಾವಿಕ ಮಾತುಗಳನ್ನಾಡುತ್ತಾರೆ ಮೈಸೂರು ಆಕಾಶವಾಣಿ ನಿಲಯದ ಉಪನಿರ್ದೇಶಕ ಉಮೇಶ್ ಎಸ್.ಎಸ್. ನಂತರ ವಾಕ್ ಶ್ರವಣ ಸಮಸ್ಯೆಗಳಿಗೆ ಲಭ್ಯವಿರುವ ಪರಿಹಾರಗಳು ಮತ್ತು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಚಟುವಟಿಕೆಗಳು' ಕುರಿತು ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್ ಪ್ರಾಯೋಜಕರು: ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಚಾಮುಂಡಿ ಹಬ್ಬ–ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ–ಡಾ.ಪಿ.ಕೆ.ರಾಜಶೇಖರ್, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.00 ದಸರಾ ಪ್ರಯುಕ್ತ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ–ನಮೋ ಜಗತ್ತಾರಿಣಿ, ನಿರ್ವಾಣ–ಮೈಸೂರು. ಎಸ್. ರಾಜಲಕ್ಷ್ಮಿ, 10.30 ಮಕ್ಕಳ ಮಂಟಪ : ಮೈಸೂರಿನ ಎಂ.ಐ.ಟಿ ಪಬ್ಲಿಕ್ ಶಾಲೆಯ ಮಕ್ಕಳಿಂದ 'ದಸರಾ' ಕುರಿತ ಕಾರ್ಯಕ್ರಮ ವೈವಿಧ್ಯ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ದಸರಾ ನೆನಪು–ಅಭಿಪ್ರಾಯ ಆಧರಿಸಿದ ಕಾರ್ಯಕ್ರಮ, ಭಾಗವಹಿಸುತ್ತಾರೆ : ಎಸ್.ವಿಜಯಮ್ಮ, ಬಿ.ಯು.ಗೀತಾ, ಪ್ರಸ್ತುತಿ: ಚಂದ್ರಮ್ಮ, 12.30 ದೇವರನಾಮ–ಸುನಿತಾ ಆಚಾರ್ಯ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಜಿ.ಸಿಂಚನಾ, 2.40 ಏಳುತಲೆ ನೆನೆದೇವು–ದಸರಾ ಸಂದರ್ಭದಲ್ಲಿ ಜನಪದ ಶಕ್ತಿ ದೇವತೆಯನ್ನು ಕುರಿತ ವಿಶೇಷರೂಪಕ ಮಾಲಿಕೆ,ಪ್ರಸ್ತುತಿ: ಡಾ.ಮೈಸೂರು ಉಮೇಶ್, 3.00 ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣ, ದುಬೈಯಲ್ಲಿ ನಡೆಯಲಿರುವ ಐಸಿಸಿ ಮಹಿಳೆಯರ ಟಿ20 ವರ್ಲ್ಡ್ ಕಪ್ ಕ್ರಿಕೆಟ್ ಪಂದ್ಯಾವಳಿಯ ನೇರ ವೀಕ್ಷಕ ವಿವರಣೆ, 7.45 ಜಾತ್ರಾ ವಿಶೇಷ ಬಾನುಲಿ ಮಾಲಿಕೆಯಲ್ಲಿ ಬಿಳಿಗಿರಿರಂಗನ ಬೆಟ್ಟದ ಜಾತ್ರೆಯ ಕುರಿತು ಮಾತನಾಡುತ್ತಾರೆ ಡಾ.ಕೃಷ್ಣಮೂರ್ತಿ ಹನೂರು ಮತ್ತು ಡಾ.ಮೈಸೂರು ಗುರುರಾಜ್, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಮೈಸೂರು ಸುಣ್ಣದ ಕೇರಿಯ ಗರಡಿ ಮಾಸ್ಟರ್, ಪೈಲ್ವಾನ್ ರಂಗಯ್ಯ ಹಾಗೂ ಅವರ ಶಿಷ್ಯ ಪೈಲ್ವಾನ್ ಡಿ.ವಿ.ಪ್ರಹ್ಲಾದ್‌ರಾವ್ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 8.30 ಅರಮನೆ ಸಂಗೀತ ವೈಭವ–ಸಂಗೀತ ರೂಪಕ, 9.15 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00 ರವಿವಾರದ ಅಖಿಲ ಭಾರತ ಸಂಗೀತ ಸಭೆ, ಷಡಜ್ ಗೋಡ್ಕಿಂಡಿ–ಕೊಳಲು ವಾದನ

■ **ಬಸವ ಸಮಿತಿ, ಶರಣ ಸಾಹಿತ್ಯ ಪರಿಷತ್ತು ಚಾಮರಾಜ ಕ್ಷೇತ್ರ ಘಟಕ :** ಅಧ್ಯಾಪಕಿ ಜೆ.ಪುಷ್ಪಲತಾ ಅವರಿಂದ ಕಾಯಕ ಮತ್ತು ದಾಸೋಹ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಹಿನಕಲ್, ಮುಖ್ಯ ಅತಿಥಿಗಳು: ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು.ಸದಾನಂದಯ್ಯ, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ನಿರಂತರ ಫೌಂಡೇಷನ್ :** ಉಮೇಶ ತೆಂಕನಹಳ್ಳಿ ಅವರ ಕಪ್ಪು ಹಲ್ಲಿನ ಕಥೆ ಕಾದಂಬರಿ ಲೋಕಾರ್ಪಣೆ ಸಮಾರಂಭ, ಉಪಸ್ಥಿತರು: ಕವಯತ್ರಿ ಪ್ರೊ ಚ.ಸರ್ವಮಂಗಳ, ಮಂಡ್ಯ ಅಪರ ಜಿಲ್ಲಾಧಿಕಾರಿ, ನಾಗರಾಜ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಚಲನಚಿತ್ರ ನಟ ಮಂಡ್ಯ ರಮೇಶ್, ಲೇಖಕ ಉಮೇಶ್ ತೆಂಕನಹಳ್ಳಿ, ಸ್ಥಳ: ಸುರುಚಿ ರಂಗಮನೆ ಚಿತ್ರಭಾನು ರಸ್ತೆ ಕುವೆಂಪುನಗರ, ಬೆಳಗ್ಗೆ 11ಕ್ಕೆ.

■ **ಚಿನ್ಮಯ ಮಿಷನ್ :** ಶರನ್ನವರಾತ್ರಿ ಕಾರ್ಯಕ್ರಮ, ಪ್ರತಿದಿನ ಬೆಳಗ್ಗೆ 11.30ರಿಂದ ಸ್ವಾಮಿನಿ ಕಾಶಿಕನಂದ ಅವರಿಂದ ಲಲಿತ ಸಹಸ್ರನಾಮದಲ್ಲಿ ಬರುವ ದೇವಿಯ ಕೆಲವು ನಾಮಾವಳಿಗಳು ಕುರಿತು ವಿಶೇಷ ಪ್ರವಚನ, ಸ್ಥಳ: ಚಿನ್ಮಯ ಮಿಷನ್, ಶ್ರೀ ಧತ್ತ ಸನ್ನಿಧಿ, ಗೋಕುಲಂ ಮೂರನೇ ಹಂತ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಮಹಾಪೂಜೆ, ವಿವಿಧ ಹೋಮಗಳು, ಶ್ರೀ ವೈಷ್ಣವಿ (ಗರುಡವಾಹಿನಿ), ಸಹಸ್ರ ಮೋದಕ ಗಣಪತಿ ಹೋಮ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ರಂಗಾಯಣ:** ದಸರಾ ಮಹೋತ್ಸವದ ಅಂಗವಾಗಿ ನವರಾತ್ರಿ ಜನಪದ ರಂಗ ಉತ್ಸವ, ಶ್ರೀ ವೀರಭದ್ರೇಶ್ವರ ಕಲಾ ಸಂಘ ಹಾಗೂ ಶ್ರೀ ಕೃಷ್ಣ ಪಾರಿಜಾತ ಕಂಪನಿ, ಸವದಿ, ಬೆಳಗಾವಿ ಜಿಲ್ಲೆ ಅವರಿಂದ ಶ್ರೀ ಕೃಷ್ಣ ಪಾರಿಜಾತ ನಾಟಕ ಪ್ರದರ್ಶನ, ಸ್ಥಳ: ರಂಗಾಯಣದ ವನರಂಗ, ಸಂಜೆ 6.30ಕ್ಕೆ.

■ **ಶ್ರೀ ಶ್ರೀ ಸುಬ್ಬರಾಯದಾಸರ ಪ್ರಸನ್ನ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಚತುರ್ಥಿ ಧ್ವಜಾರೋಹಣ, ಮಂಟಪೋತ್ಸವ, ಸಂಜೆ ಭೇರಿ ತಾಡನ, ಹಂಸವಾಹನೋತ್ಸವ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.

■ **ಮೈಸೂರು ಯೂತ್ ಹಾಸ್ಟೆಲ್ ಗಂಗೋತ್ರಿ ಘಟಕ:** ಸರ್ವಸದಸ್ಯರ ವಾರ್ಷಿಕ ಮಹಾಸಭೆ ಹಾಗೂ 2024–2027ರ ಪದಾಧಿಕಾರಿಗಳ ಸ್ಥಾನಕ್ಕೆ ಚುನಾವಣೆ, ಉಪಸ್ಥಿತರು: ಗಂಗೋತ್ರಿ ಘಟಕದ ಅಧ್ಯಕ್ಷ ಎಂ.ಜಗದೀಶ್, ಛೇರ್ಮನ್ ಎಂ.ವಿ.ಪರಶಿವಮೂರ್ತಿ, ಸ್ಥಳ: ಸರಸ್ವತಿಪುರಂನ ಶ್ರೀ ಶಂಕರ ಸಭಾ ಸಮುದಾಯ ಭವನ (ತೆಂಗಿನ ತೋಪು), ಸಂಜೆ 4.30 ಗಂಟೆಗೆ

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶರನ್ನವರಾತ್ರಿ ಪ್ರಯುಕ್ತ ಪಂಡಿತ್ ಶ್ರೀ ಪ್ರಭಂಜನಾಚಾರ್ಯ ವಿದ್ಯಾಪತಿ ಅವರಿಂದ ಶ್ರೀನಿವಾಸ ಕಲ್ಯಾಣ ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಸಂಜೆ 5.30 ರಿಂದ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ಪೂಜಾ ಕಾರ್ಯಕ್ರಮ, ಸಂಜೆ 5.30ಕ್ಕೆ ಭಜನೆ, ಸಂಜೆ 7.30 ರಿಂದ ಶ್ರೀ ರವಿಕಾಂತಾನಂದ ಸ್ವಾಮಿಯವರಿಂದ ಪ್ರವಚನ, ಸ್ಥಳ: ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ, ಅಶೋಕ ರಸ್ತೆ.

■ **ಕಲಾಂದಿಕಾ ಕಲಾ ಅಕಾಡೆಮಿ :** ವಿದುಷಿ ಪ್ರಮಿತಾ ಗೋವಿಂದ್ ಅವರಿಂದ ಭರತನಾಟ್ಯ, ಮುಖ್ಯ ಅತಿಥಿಗಳು: ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ನಿರಂಜನ ವಾನಳ್ಳಿ, ಗೌರವ ಅತಿಥಿಗಳು: ಶ್ರೀಮತಿ ಪದ್ಮ ಮುರಳಿ, ಸ್ಥಳ: ಕಲಾನಿಧಿಕಾ ಕಲಾ ಅಕಾಡೆಮಿ, ಸರಸ್ವತಿಪುರಂ, ಸಂಜೆ 6ಕ್ಕೆ

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಕೂಷ್ಮಾಂಡದೇವಿ, ಶ್ರೀ ವಿದ್ಯಾ ಶಾಂತಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ, ಸಂಜೆ 5.30ಕ್ಕೆ ಶ್ರೀ ದಶಗಣಪತಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಸ್ಪಂದನ ಸಾಂಸ್ಕೃತಿಕ ಪರಿಷತ್ತು ಅದಮ್ಯ ರಂಗಶಾಲೆ:** ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಹಾಗೂ ನಾಟಕ ಪ್ರದರ್ಶನ, ಉದ್ಘಾಟನೆ: ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ: ಗಾಂಧಿ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಡಾ.ಎಸ್.ಶಿವರಾಜಪ್ಪ, ಆಶಯ ನುಡಿ: ಸ್ಪಂದನ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪುರಸ್ಕೃತರು: ಸಾಹಿತಿ ಮಿರ್ಲೆ ಚಂದ್ರಶೇಖರ್, ವರದಿಗಾರ ಆರ್.ಕೃಷ್ಣ, ಶ್ರೀಮತಿ ಎಂ.ಸಿ.ಚೋಂದಮ್ಮ, ಪ್ರಕಾಶಕ ಹಾಲತಿ ಲೋಕೇಶ್, ಆರ್. ನರಸಿಂಹಮೂರ್ತಿ, ಜಿ. ಮಹೇಶ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆವರಣ, ವಿಜಯನಗರ 1ನೇ ಹಂತ, ಸಂಜೆ 5.30ಕ್ಕೆ.

■ **ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿಯವರ 50ನೇ ಬ್ರಹ್ಮೋತ್ಸವ, ಹಗಲು ಪುಣ್ಯಾಹವಾಚನ, ಕಲಶಾರಾಧನೆ, ನಿತ್ಯ ಹೋಮ, ಉತ್ಸವ, ಧ್ವಜಾರೋಹಣ, ನೈವೇದ್ಯ ಬಲಿ ಪ್ರಧಾನ ಮಂಗಳಾರತಿ, ವೈನತೇಯ ಪ್ರಸಾದ ಪ್ರಕ್ಷೇಪಣ, ವಿನಿಯೋಗ; ಸಂಜೆ ಪುಣ್ಯಾಹವಾಚನ, ಭೇರೀತಾಡನ, ದೇವತಾ ಆವಾಹನೆ, ಯಾಗಶಾಲಾ ಪ್ರವೇಶ, ವೇದ ಪ್ರಬಂಧಾದಿ ಪಾರಾಯಣಗಳ ಉಪಕ್ರಮ, ಹಂಸವಾಹನೋತ್ಸವ, ನಿವೇದನ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಾಣಿ ವಿಲಾಸ ಮೊಹಲ್ಲಾ.

■ **ನಟನ ರಂಗಶಾಲೆ:** ದಸರಾ ಮಹೋತ್ಸವದ ಅಂಗವಾಗಿ ನಟನ ರೆಪರ್ಟರಿ ಕಲಾವಿದರಿಂದ ಖ್ಯಾತ ನಾಟಕಕಾರ, ರಾಷ್ಟ್ರ ಪ್ರಶಸ್ತಿ ವಿಜೇತ, ನಿರ್ದೇಶಕ, ನಿರ್ಮಾಪಕ, ನಟ ಬಿ.ಸುರೇಶ ಅವರ 'ಅಡುಗೆ ಮನೆಯಲ್ಲೊಂದು ಹುಲಿ' ನಾಟಕ ಪ್ರದರ್ಶನ, ನಿರ್ದೇಶನ: ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 6 ಭಾನುವಾರ 2024

ಸಂಪುಟ: 45 | ಸಂಚಿಕೆ: 171 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇಂದಿನಿಂದ ಯುವ ದಸರಾ: ಐದು ದಿನ ಸಂಗೀತ ರಸದೌತಣ



ಅಶ್ವಿನಿ ಪುನೀತ್ ರಾಜ್‌ಕುಮಾರ್



ಮೈಸೂರು ಹೊರವಲಯದ ಉತ್ತನಹಳ್ಳಿ ಬಳಿಯ ವಿಶಾಲ ಮೈದಾನದಲ್ಲಿ 'ಯುವ ದಸರಾ' ಕಾರ್ಯಕ್ರಮಕ್ಕೆ ವೇದಿಕೆ ಸಜ್ಜುಗೊಳ್ಳುತ್ತಿದೆ.

ಮೈಸೂರು, ಅ.5(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ ಮೆಗಾ ಇವೆಂಟ್ 'ಯುವ ದಸರಾ' ಭಾನುವಾರ ಆರಂಭವಾಗಲಿದೆ.

ಮೈಸೂರು ಹೊರವಲಯದ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಬಳಿಯ ವಿಶಾಲ ಮೈದಾನದಲ್ಲಿ ಆಯೋಜಿಸಲಾಗಿರುವ ಐದು ದಿನಗಳ ಸಂಗೀತ ಧಮಾಕ 'ಯುವ ದಸರಾ'ಗೆ ಸಿದ್ಧತೆ ಬಹುತೇಕ ಪೂರ್ಣಗೊಂಡಿದೆ. ಭಾನುವಾರ ಸಂಜೆ 6ಕ್ಕೆ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಚಾಲನೆ ನೀಡಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರಲಿದ್ದಾರೆ.

ಸಕಲ ಸಿದ್ಧತೆ: ಮೊದಲ ಬಾರಿಗೆ ಹೊರವಲಯದಲ್ಲಿ ಕಾರ್ಯಕ್ರಮ ಆಯೋಜಿಸಿರುವ ಹಿನ್ನೆಲೆಯಲ್ಲಿ ಭದ್ರತೆಗೆ ಆದ್ಯತೆ ನೀಡಲಾಗಿದೆ. ಬೃಹತ್ ಭವ್ಯ ವೇದಿಕೆ, ಲೈಟಿಂಗ್ ವ್ಯವಸ್ಥೆ ಪೂರ್ಣಗೊಂಡಿದೆ. ಕಾರ್ಯಕ್ರಮ ವೀಕ್ಷಣೆಗೆ ಬರುವವರ ಸುರಕ್ಷತೆ ದೃಷ್ಟಿಯಿಂದ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಸೂಕ್ತ ರೀತಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.

ಭಾರೀ ಭದ್ರತೆ: ಭದ್ರತೆಗೆ ನಾಲ್ವರು ಎಸ್ಪಿಗಳು, 12 ಡಿವೈಎಸ್‌ಪಿ, 37 ಸಿಪಿಐ ಸೇರಿದಂತೆ 1200ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ನೂರಕ್ಕೂ ಹೆಚ್ಚು ಮಹಿಳಾ ಸಿಬ್ಬಂದಿ ಕಾರ್ಯ ನಿರ್ವಹಿಸಲಿದ್ದಾರೆ. ■6ನೇ ಪುಟಕ್ಕೆ

ಇಂದು ಶ್ರೇಯಾ ಘೋಷಾಲ್ ಸಂಗೀತ ಸುಧೆ



'ಯುವ ದಸರಾ'ದ ಮೊದಲ ದಿನ ಭಾನುವಾರ ಜನಪ್ರಿಯ ಬಹುಭಾಷಾ ಗಾಯಕಿ ಶ್ರೇಯಾ ಘೋಷಾಲ್ ತಂಡ 'ಬಾಲಿವುಡ್ ನೈಟ್ಸ್' ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಲಿದೆ. ಅ.7ರಂದು ಸಂಗೀತ ಸಂಯೋಜಕ ಕೆಜಿಎಫ್ ಖ್ಯಾತಿಯ ರವಿ ಬಸ್ರೂರು ತಂಡದಿಂದ ರಸಸಂಜೆ ಹಾಗೂ ಸ್ಯಾಂಡಲ್‌ವುಡ್ ನೈಟ್ಸ್ ಜರುಗಲಿದೆ. ಅ.8ರಂದು ಬಾಲಿವುಡ್ ಗಾಯಕ ರಾಪರ್ ಬಾದ್ ಷಾ ಹಾಗೂ ತಂಡದಿಂದ, ಅ.9ರಂದು ಮ್ಯೂಸಿಕ್ ಮಾಂತ್ರಿಕ ಎ.ಆರ್.ರೆಹಮಾನ್ ಹಾಗೂ ಅ.10ರಂದು ಹಿರಿಯ ಸಂಗೀತ ನಿರ್ದೇಶಕ ಇಳಯರಾಜ ಅವರಿಂದ ಸಂಗೀತ ರಸಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಐದೂ ದಿನಗಳ ಕಾರ್ಯಕ್ರಮಗಳಿಗೂ ಟಿಕೆಟ್ ವ್ಯವಸ್ಥೆ ಜೊತೆಗೆ ಉಚಿತ ವೀಕ್ಷಣೆಗೂ ಅನುವು ಮಾಡಿಕೊಡಲಾಗಿದೆ.


ಛತ್ರಿ, ರೇನ್‌ಕೋಟ್ ಕೊಂಡೊಯ್ಯುವುದು ಒಳಿತು



ಸಂಗೀತ ದಿಗ್ಗಜರ ಕಾರ್ಯಕ್ರಮವನ್ನೊಳಗೊಂಡ ಈ ಭಾರಿಯ 'ಯುವ ದಸರಾ' ಭಾರಿ ದುಬಾರಿ. ಲಕ್ಷಕ್ಕೂ ಹೆಚ್ಚು ಜನ ಕಾರ್ಯಕ್ರಮ ವೀಕ್ಷಿಸುವಷ್ಟು ಸ್ಥಳಾವಕಾಶ ಇರುವುದರಿಂದ ಆಸನ ವ್ಯವಸ್ಥೆ ಹಾಗೂ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗುತ್ತಿದೆ. ಈ ಕಾರಣದಿಂದ ವೇದಿಕೆ ಹೊರತುಪಡಿಸಿ, ಯಾವ ಪ್ರೇಕ್ಷಕರ ಗ್ಯಾಲರಿಗಳಿಗೂ ಮೇಲ್ಛಾವಣಿ(ರೂಫ್) ವ್ಯವಸ್ಥೆ ಮಾಡಲಾಗಿಲ್ಲ. ಆದ್ದರಿಂದ ಕಾರ್ಯಕ್ರಮಕ್ಕೆ ಬರುವವರು ಮುಂಜಾಗ್ರತೆಯಿಂದ ಛತ್ರಿ, ರೇನ್ ಕೋಟ್ ಇನ್ನಿತರ ಅಗತ್ಯ ಪರಿಕರಗಳನ್ನು ತೆಗೆದುಕೊಂಡು ಹೋಗುವುದು ಸೂಕ್ತ.

ರೈತರು ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿ ಸಕ್ರಮ

ರಾಜ್ಯ ಸರ್ಕಾರದ ನಿರ್ಧಾರ





ಬೆಂಗಳೂರು, ಅ.5–ಸರ್ಕಾರಿ ಭೂಮಿಯಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ರೈತರಿಗೆ ಆ ಭೂಮಿಯ ಸಕ್ರಮಗೊಳಿಸಲು ರಾಜ್ಯ ಸರ್ಕಾರ ನಿರ್ಧಾರ ಮಾಡಿದೆ.

ಬಗರ್ ಹುಕುಂ ಯೋಜನೆಯಡಿ ಸಲ್ಲಿಸಲಾಗಿದ್ದ ಬಹುತೇಕ ಅರ್ಜಿಗಳು ತಿರಸ್ಕೃತಗೊಂಡಿದ್ದು, ಈ ಅರ್ಜಿಗಳನ್ನು ಪುನರ್ ಪರಿಶೀಲಿಸಲಾಗುವುದು ಎಂದು ಇತ್ತೀಚೆಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ಹೇಳಿದ್ದರು. ಅದರಂತೆ ಇದೀಗ ಬಹಳ ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿಯನ್ನು ರೈತರಿಗೆ ಸಕ್ರಮಗೊಳಿಸುವ ಅರ್ಜಿಗಳ ಇತ್ಯರ್ಥಕ್ಕೆ ನಿರ್ಧಾರ ಮಾಡಲಾಗಿದೆ ಎಂದು ಇಂದು ಕಂದಾಯ ಸಚಿವರು ತಿಳಿಸಿದ್ದಾರೆ. ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ 14 ಲಕ್ಷ ರೈತರು ಬಗರ್ ಹುಕುಂ ಯೋಜನೆಯಡಿ ಭೂಮಿ ಸಕ್ರಮಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಸಂಬಂಧ ತಹಸೀಲ್ದಾರರ ಜೊತೆ ಸಭೆ ನಡೆಸಿದ್ದು, ನಾಲ್ಕೈದು ತಿಂಗಳಲ್ಲಿ ಎಲ್ಲಾ ರೈತರ ಅರ್ಜಿಗಳನ್ನು ಇತ್ಯರ್ಥ ಮಾಡುವಂತೆ ಸೂಚನೆ ನೀಡಿರುವುದಾಗಿ ಅವರು ಹೇಳಿದ್ದಾರೆ. ಬಗರ್ ಹುಕುಂ ಕಮಿಟಿ ಮೂಲಕ ರೈತರಿಗೆ ಭೂಮಿಯನ್ನು ಸಕ್ರಮ ಮಾಡುವುದರ ಜೊತೆಗೆ ಸಾಗುವಳಿ ಚೀಟಿಯನ್ನು ನೀಡಲಾಗುವುದು ಹಾಗೂ ಭೂಮಿಯನ್ನು ಸರ್ವೆ ಮಾಡಿ ರೈತರ ಹೆಸರಿಗೆ ನೋಂದಣಿಯನ್ನೂ ಮಾಡಿಕೊಡುತ್ತೇವೆ. ರೈತರ ಎಲ್ಲಾ ದಾಖಲೆಗಳನ್ನು ಡಿಜಿಟಲೀಕರಣ ಕೂಡ ಮಾಡಲಾಗುವುದು ಎಂದು ಕೃಷ್ಣಭೈರೇಗೌಡ ತಿಳಿಸಿದರು.

ಈ ಹಿಂದೆಯೂ ಬಗರ್ ಹುಕುಂ ಯೋಜನೆಯಡಿ ಭೂಮಿಯನ್ನು ರೈತರಿಗೆ ಸಕ್ರಮಗೊಳಿಸಲಾಗುತ್ತಿತ್ತು. ಆದರೆ ಕೆಲವು ವೈಜ್ಞಾನಿಕ ಕಾರಣಗಳಿಂದ ಬಹುಪಾಲು ರೈತರ ಅರ್ಜಿಗಳು ತಿರಸ್ಕೃತಗೊಂಡಿದ್ದವು. ಭೂಮಿ ಸಕ್ರಮಗೊಳಿಸಬೇಕಾದರೆ ರೈತರು ಸದರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದರು ಎಂಬುದಕ್ಕೆ ಯಾವುದಾದರೂ ದಾಖಲೆ ಅವಶ್ಯಕತೆ ಇತ್ತು. ಆದರೆ ರೈತ ತಾನು ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದರೂ ಅದಕ್ಕೆ ಪೂರಕವಾದ ಒಂದೂ ದಾಖಲೆಯನ್ನು ■6ನೇ ಪುಟಕ್ಕೆ

ಪಂಜಿನ ಕವಾಯತು ಮೈದಾನದಲ್ಲಿ ಇಂದು, ನಾಳೆ 'ಡ್ರೋನ್ ಶೋ'

ಅ.11, 12 ರಂದೂ ಪ್ರದರ್ಶನ ವ್ಯವಸ್ಥೆ





ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದಸರಾ ವಿದ್ಯುತ್ ದೀಪಾಲಂಕಾರ ಉಪ ಸಮಿತಿ(ಅಧಿಕಾರೇತರ) ಅಧ್ಯಕ್ಷ ಸೈಯದ್ ಇಕ್ಬಾಲ್ ಮಾತನಾಡಿದರು. ಉಪಾಧ್ಯಕ್ಷರಾದ ಸೋಯೆಲ್ ಬೇಗ್, ಕಾಂತರಾಜು, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ತಾಂತ್ರಿಕ ವಿಭಾಗದ ನಿರ್ದೇಶಕ ಮುನಿಗೋಪಾಲರಾಜು ಉಪಸ್ಥಿತರಿದ್ದರು.



ಮೈಸೂರು, ಅ.5(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಇತಿಹಾಸದಲ್ಲೇ ಮೊದಲ ಬಾರಿಗೆ ಆಯೋಜಿಸಿರುವ ಅತ್ಯಾಕರ್ಷಕ 'ಡ್ರೋನ್ ಶೋ' ವೀಕ್ಷಣೆಗೆ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು, ಮೈಸೂರಿಗರು ಆಗಮಿಸುವಂತೆ ದಸರಾ ವಿದ್ಯುತ್ ದೀಪಾಲಂಕಾರ ಉಪ ಸಮಿತಿ(ಅಧಿಕಾರೇತರ) ಅಧ್ಯಕ್ಷ ಸೈಯದ್ ಇಕ್ಬಾಲ್ ಮನವಿ ಮಾಡಿದರು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಅ.6ಮತ್ತು 7 ರಂದು ರಾತ್ರಿ 8 ಗಂಟೆಗೆ ನಡೆಯುವ ಡ್ರೋನ್ ಶೋ ವೀಕ್ಷಣೆ ಉಚಿತವಾಗಿದ್ದು, ಏಕಕಾಲದಲ್ಲಿ 1500 ಡ್ರೋನ್‌ಗಳು 15 ನಿಮಿಷಗಳ ಕಾಲ ಆಗಸದಲ್ಲಿ ಬೆಳಕಿನ ಚಿತ್ತಾರ ಮೂಡಿಸಲಿವೆ. ಹಾಗೆಯೇ ಅ.11 ಮತ್ತು 12 ರಂದು ಪಂಜಿನ ಕವಾಯತು ಪ್ರದರ್ಶನದ ಜೊತೆಗೆ ಡ್ರೋನ್ ಶೋ ವೀಕ್ಷಣೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಸೆಸ್ಕ್ ತಾಂತ್ರಿಕ ವಿಭಾಗದ ನಿರ್ದೇಶಕ ಮುನಿಗೋಪಾಲರಾಜು ಮಾತನಾಡಿ, ಈ ಬಾರಿಯ ದಸರಾ ವಿದ್ಯುತ್ ದೀಪಾಲಂಕಾರವನ್ನು ಆಕರ್ಷಕವಾಗಿ ಮಾಡಲಾಗಿದೆ. ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಹೆಚ್ಚು ಮುತುವರ್ಜಿಯಿಂದ ದೀಪಾಲಂಕಾರ ■6ನೇ ಪುಟಕ್ಕೆ

ವಿದ್ಯುತ್ ದೀಪಗಳನ್ನು ಮುಟ್ಟದಿರಿ

❝ ನಿತ್ಯವೂ ಸಾಕಷ್ಟು ಮಳೆಯಾಗುತ್ತಿದೆ. ಇದರಿಂದಾಗಿ ಕೆಲವೊಮ್ಮೆ ವಿದ್ಯುತ್ ಸೋರಿಕೆ ಉಂಟಾಗುವ ಸಾಧ್ಯತೆ ಇರಲಿದ್ದು, ಸಾರ್ವಜನಿಕರು ವಿದ್ಯುತ್ ದೀಪಾಲಂಕಾರ ವೀಕ್ಷಿಸುವ ಹಾಗೂ ಫೋಟೋಗಳನ್ನು ತೆಗೆಸಿಕೊಳ್ಳುವ ಸಂದರ್ಭದಲ್ಲಿ ವಿದ್ಯುತ್ ದೀಪಗಳನ್ನು ಮುಟ್ಟದೆ ಎಚ್ಚರವಹಿಸಬೇಕು.

– ಮುನಿಗೋಪಾಲರಾಜು, ಸೆಸ್ಕ್ ತಾಂತ್ರಿಕ ವಿಭಾಗದ ನಿರ್ದೇಶಕ

ಮುಡಾದ 50:50 ನಿವೇಶನ ಸರ್ಕಾರದ ವಶಕ್ಕೆ?

ಕೃಷಿ ಸಚಿವ ಚೆಲುವರಾಯಸ್ವಾಮಿ ಸುಳಿವು

ಮೈಸೂರು, ಅ.5(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ 50:50 ಅನುಪಾತದಡಿ ನಿವೇಶನ ಮಂಜೂರು ಪ್ರಕ್ರಿಯೆ ಕಾನೂನು ಬಾಹಿರವಾಗಿದ್ದು, ಬೈಲಾ ನಿಯಮಕ್ಕೆ ವಿರುದ್ಧವಾಗಿ ನಿವೇಶನ ಪಡೆದಿರುವವರು ಕೂಡಲೇ ನಿವೇಶನ ಹಿಂದಿರುಗಿಸಬೇಕು. ಇಲ್ಲದಿದ್ದರೆ, ಸರ್ಕಾರವೇ ವಶಕ್ಕೆ ಪಡೆಯಲು ಮುಂದಾಗಲಿ ಎಂದು ಸಚಿವ ಎನ್.ಚೆಲುವರಾಯಸ್ವಾಮಿ ಮಹತ್ವದ ಹೇಳಿಕೆ ನೀಡಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಡಾ ವಿಚಾರದಲ್ಲಿ ಬಹಳಷ್ಟು ಹಗರಣಗಳಿವೆ. ಈಗಾಗಲೇ ಸತ್ಯಾಸತ್ಯತೆ ಪರಿಶೀಲಿಸಲು ಸರ್ಕಾರ ಕಮಿಟಿ ರಚಿಸಿದೆ. ಆ ಕಮಿಟಿಯಿಂದ ಸತ್ಯ ಹೊರಬರುತ್ತದೆ. ಕಮಿಟಿ ತನಿಖೆಯಿಂದ ಯಾರ್‍ಯಾರು ಬೈಲಾ ವಿರುದ್ಧ ನಿವೇಶನ ಪಡೆದಿದ್ದಾರೆ ಎಂದು ಗೊತ್ತಾಗುತ್ತದೆ. ಅವೆಲ್ಲವನ್ನು ವಾಪಸ್ ತೆಗೆದುಕೊಳ್ಳಲಾಗುತ್ತದೆ ಎಂದರು. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ತಮಗೆ ಮಂಜೂರಾಗಿದ್ದ 14 ಸೈಟ್‌ಗಳನ್ನು ವಾಪಸ್ ಕೊಟ್ಟಿದ್ದಾರೆ. ಆದರೆ, ಅವರು ನಿವೇಶನ ಪಡೆದಿದ್ದ ಕ್ರಮ ಸರಿಯಾಗಿದೆ ಎಂಬುದು ನಾನೂ ಸೇರಿದಂತೆ ಎಲ್ಲರಿಗೂ ಗೊತ್ತಿದೆ. ತನಿಖೆಯಲ್ಲೂ ನಿವೇಶನ ನೀಡಿದ ಕ್ರಮದ ಸ್ಪಷ್ಟತೆ ಕುರಿತು ಗೊತ್ತಾಗಲಿದೆ ಎಂದು ತಿಳಿಸಿದರು. ಮುಡಾದಲ್ಲಿ ಶಾಸಕ ಜಿ.ಟಿ.ದೇವೇಗೌಡರಿಗೂ ಬೇನಾಮಿ ನಿವೇಶನಗಳಿರುವುದರಿಂದ ಅವರು, ಸಿಎಂ ಸಿದ್ದರಾಮಯ್ಯ ಪರವಾಗಿ ಮಾತನಾಡಿರಬಹುದೇ ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಮುಡಾದಲ್ಲಿ ಕೇವಲ ಜಿ.ಟಿ.ದೇವೇಗೌಡರದ್ದು ಮಾತ್ರವಲ್ಲ, ಬೇಕಾದಷ್ಟು ಜನರದ್ದು ಇದೆ. ನಾನು ಹೆಸರು ಯಾಕೆ ಹೇಳಲಿ. ಅವರೆಲ್ಲರೂ ■6ನೇ ಪುಟಕ್ಕೆ



ದೇವನೂರು 3ನೇ ಹಂತದ 40x60 ಅಳತೆಯ ಆರು ನಿವೇಶನಗಳ ಮೂಲ ದಾಖಲೆಗಳು ನಾಪತ್ತೆ!

ಹೆಲಿಕಾಪ್ಟರ್‌ನಲ್ಲಿ ಬಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಕೊಂಡೊಯ್ದ 100 ಕಡತಗಳಲ್ಲಿ ಇವು ಸೇರ್ಪಡೆ; ಮುಡಾ ಸಿಬ್ಬಂದಿ ಸುಳಿವು!

● ಎಸ್.ಟಿ.ರವಿಕುಮಾರ್




ಭೈರತಿ ಸುರೇಶ್

ಮೈಸೂರು, ಅ. 5–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿದೆ ಎನ್ನಲಾದ ಬ್ರಹ್ಮಾಂಡ ಭ್ರಷ್ಟಾಚಾರ ಸಂಬಂಧ ಹೈಕೋರ್ಟ್ ಹಾಗೂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶದಂತೆ ಅತ್ತ ಲೋಕಾಯುಕ್ತ ಎಸ್ಪಿ ಉದೇಶ್ ನೇತೃತ್ವದಲ್ಲಿ ತನಿಖೆ ಪ್ರಗತಿಯಲ್ಲಿದೆ. ಇತ್ತ ಮುಡಾದಲ್ಲಿ ಶೇ.50:50ರ ಅನುಪಾತದಡಿ ಮಂಜೂರಾಗಿರುವ ನಿವೇಶನಗಳ ಮೂಲ ಕಡತಗಳೇ ನಾಪತ್ತೆಯಾಗುತ್ತಿವೆ!

ಸಿಎಂ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮಂಜೂರು ಮಾಡಲಾಗಿದ್ದ ವಿಜಯನಗರ 3 ಮತ್ತು 4ನೇ ಹಂತದ ಕೋಟ್ಯಾಂತರ ರೂ. ಬೆಲೆ ಬಾಳುವ, ವಿವಿಧ ಅಳತೆಯ 14 ನಿವೇಶನಗಳನ್ನು ಪ್ರಾಧಿಕಾರಕ್ಕೆ ವಾಪಸ್ ನೀಡಿದ್ದಾರೆ. ಇದೀಗ ಮುಡಾ ಕಚೇರಿಯ ಅಭಿಲೇಖಾಲಯದಲ್ಲಿರಬೇಕಾದ ನಿವೇಶನಗಳ ಮೂಲ ಕಡತಗಳೇ ನಾಪತ್ತೆಯಾಗಿವೆ. ಅವುಗಳು ಏನಾದವು ಎಂಬುದರ ಬಗ್ಗೆ ಕಚೇರಿ ದಾಖಲೆಗಳ ಟ್ರ್ಯಾಕ್ ರೆಕಾರ್ಡ್ ಮಾಯವಾಗಿದೆ. ಸ್ಥಿರಾಸ್ತಿ ಮತ್ತು ರೇರಾ ವಿಶ್ಲೇಷಕರೂ ಆದ ಸಾಮಾಜಿಕ ಕಾರ್ಯಕರ್ತ ಎಂ.ಡಿ. ಆದೀಶ ಸಾಗರ, 2024ರ ಸೆಪ್ಟೆಂಬರ್ 5ರಂದು ಮುಡಾ ಅಧ್ಯಕ್ಷ ಕೆ.ಮರೀಗೌಡ, ಆಯುಕ್ತ ಎ.ಎನ್. ರಘುನಂದನ್ ಅವರಿಗೆ ಲಿಖಿತ ದೂರು ನೀಡಿದ್ದು, ನಿವೇಶನಗಳ ಮೂಲ ಕಡತಗಳು ಕಣ್ಮರೆಯಾಗಿರುವ ಸಂಬಂಧ ಪೊಲೀಸ್ ಠಾಣೆಗೆ ದೂರು ನೀಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಮನವಿ ಮಾಡಿದ್ದಾರೆ.

ಮೈಸೂರಿನ ಎನ್‌ಆರ್ ಮೊಹಲ್ಲಾದ ರಾಜೇಂದ್ರನಗರ, ಕೆಸರೆ 4ನೇ ಕ್ರಾಸ್ ನಿವಾಸಿಗಳಾದ ಕಾಂತ ಮತ್ತು ಶಾಂತ ಕುಮಾರ್ ಎಂಬುವರ ಜಂಟಿ ಹೆಸರಿಗೆ ಮಂಜೂರಾಗಿದ್ದ, ದೇವನೂರು 3ನೇ ಹಂತದ 40x60 ಅಡಿ ಅಳತೆಯ, 1/83, 1/84, 1/85, 1/86, 1/87 ಮತ್ತು 633/ಬಿ– ಒಟ್ಟು 6 ನಿವೇಶನಗಳ ಮಂಜೂರಾತಿ ಮೂಲ ಕಡತಗಳನ್ನು ಕದ್ದು, ನಾಶಪಡಿಸಲಾಗಿದ್ದು, ಈ ಬಗ್ಗೆ ತುರ್ತು ಇಲಾಖಾ ವಿಚಾರಣೆ ನಡೆಸಿ ಕಾರಣರಾದ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಲಕ್ಷ್ಮೀಪುರಂ ಠಾಣೆಗೆ ದೂರು ನೀಡಿ, ಎಫ್‌ಐಆರ್ ದಾಖಲಿಸಬೇಕೆಂದೂ ಒತ್ತಾಯಿಸಿದ್ದಾರೆ.



ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಿ ತಿಂಗಳಾದರೂ ಕೋರಿರುವ ಮಾಹಿತಿ ನೀಡಲಿಲ್ಲ. ಕೊನೆಗೆ ಮುಡಾ ವಲಯ ಕಚೇರಿ–5ಬಿ ನಿವೇಶನ ಶಾಖೆ ವಿಶೇಷ ತಹಸೀಲ್ದಾರ್ ಮೋಹನ ಕುಮಾರಿ ಅವರನ್ನು ಸಂಪರ್ಕಿಸಿದಾಗ ಕಚೇರಿ ಸಹಾಯಕಿ ರತ್ನ ಇಲ್ಲವೇ ವಿಷಯ ನಿರ್ವಾಹಕ ಕೆ.ಸಿ. ಉಮೇಶ್‌ರನ್ನು ವಿಚಾರಿಸುವಂತೆ ತಿಳಿಸಿದರು ಎಂದು ಆದೀಶ ಸಾಗರ ದೂರಿನಲ್ಲಿ ತಿಳಿಸಿದ್ದಾರೆ.

ಅದರಂತೆ ಸದರಿಯವರನ್ನು ಸಂಪರ್ಕಿಸಿದಾಗ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಆಪ್ತರಾದ ಬೆಂಗಳೂರಿನ ಸುರೇಶ್, ಉಪೇಂದ್ರ ಸಿಂಗ್, ಮೈಸೂರಿನ ರಮೇಶ ಹಾಗೂ ಇತರರು ಸಚಿವರೊಂದಿಗೆ ಹೆಲಿಕಾಪ್ಟರ್‌ನಲ್ಲಿ ಬಂದು ಕಡತ ಕೊಂಡೊಯ್ದರೆಂಬುದು ತಿಳಿಯಿತು ಎಂದು ದೂರುದಾರರು ತಮ್ಮ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

2024ರ ಮೇ 30ರಂದು ಅಂದಿನ ಆಯುಕ್ತರಾಗಿದ್ದ ಜಿ.ಟಿ. ದಿನೇಶ್‌ಕುಮಾರ್ ಆಪ್ತ ಶಾಖೆಯ ಪ್ರಥಮ ದರ್ಜೆ ಸಹಾಯಕ ಎಂ. ಪ್ರಶಾಂತ್ ಪ್ರಾಧಿಕಾರದ ಅಭಿಲೇಖಾಲಯ (ರೆಕಾರ್ಡ್ ರೂಂ)ದಿಂದ ಅನಧಿಕೃತವಾಗಿ 1384ರಿಂದ 14141ರವರೆಗಿನ ಕ್ರಮ ಸಂಖ್ಯೆಯ ಮಂಜೂರಾತಿ ಪತ್ರಗಳ ನಮೂನೆಯನ್ನು, ಸರಕು ಪಟ್ಟಿ ಸಂಖ್ಯೆ 0869, ರಶೀದಿ ಸಂಖ್ಯೆ 1161, ವಿತರಣಾ ಸಂಖ್ಯೆ 300ರಂತೆ ಶೇ. 50:50ರ ಅನುಪಾತದಲ್ಲಿ ಕಾನೂನು ಬಾಹಿರವಾಗಿ ಮಂಜೂರು ಮಾಡಿರುವ 6 ನಿವೇಶನಗಳ ಮೂಲ ಕಡತಗಳನ್ನು ತರಿಸಿಕೊಂಡಿದ್ದಾರೆ ಎಂದು ಆದೀಶ ಸಾಗರ ತಿಳಿಸಿದ್ದಾರೆ.

ಈ ನಿವೇಶನಗಳ ಮಂಜೂರಾತಿ ಪ್ರಕ್ರಿಯೆ ಪೂರ್ಣ ನಡಾವಳಿಯ ಮೂಲ ದಸ್ತಾವೇಜುಗಳ ಕಡತಗಳು ವಿಶೇಷ ತಹಸೀಲ್ದಾರ್, ವಲಯ 5ಬಿ ಕಚೇರಿಯಲ್ಲಿ ಶಾಶ್ವತವಾಗಿ ರಕ್ಷಿಸಬೇಕಾದ ದಾಖಲೆಗಳಾಗಿವೆ. ಆದರೆ ಈಗ ಮುಡಾ ಕಚೇರಿಯಲ್ಲಿ ಈ ಕಡತಗಳೇ ಕಣ್ಮರೆಯಾಗಿದ್ದು, ಅದಕ್ಕೆ ಕಾರಣರಾದ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಬಿಎನ್‌ಎಸ್‌ಎಸ್ ಸೆಕ್ಷನ್ 238, ಅಪರಾಧದ ಸಾಕ್ಷಿ ಕಣ್ಮರೆಯಾಗಲು ಕಾರಣ, ಸೆಕ್ಷನ್ 241 ಸರ್ಕಾರಿ ದಾಖಲೆ 303(1) ಆಸ್ತಿ ಅಥವಾ ದಾಖಲೆಗಳ ಕಳ್ಳತನ ವಿರುದ್ಧ ಪ್ರಕರಣ ದಾಖಲಿಸುವಂತೆಯೂ ಒತ್ತಾಯಿಸಿದ್ದಾರೆ.

ಹೈಕೋರ್ಟ್, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಲೋಕಾಯುಕ್ತ ಹಾಗೂ ಜಾರಿ ನಿರ್ದೇಶನಾಲಯ (ಇಡಿ)ಗಳಲ್ಲಿ ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಸಂಬಂಧ ಪ್ರಕರಣಗಳು ದಾಖಲಾಗಿ ತನಿಖೆ ನಡೆಯುತ್ತಿದೆ. ಮತ್ತೊಂದೆಡೆ ನಿವೃತ್ತ ನ್ಯಾಯಾಧೀಶರ ನೇತೃತ್ವದ ಆಯೋಗವೂ ತನಿಖೆ ನಡೆಸುತ್ತಿರುವುದರಿಂದ ಮುಡಾದಲ್ಲಿ ಕೆಲವರು ಅಕ್ರಮ ನಿವೇಶನಗಳ ಮೂಲ ಕಡತಗಳನ್ನೇ ಕಳವು ಮಾಡಿ ನಾಶಪಡಿಸುತ್ತಿದ್ದಾರೆ ಎಂದು ಆದೀಶ ಸಾಗರ ಗಂಭೀರ ಆರೋಪ ಮಾಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಮದುವೆಗೆ ಮುಂಚೆ ನೀವು ತುಂಬಾ ದೇವಸ್ಥಾನಕ್ಕೆ ಹೋಗಿದ್ದೀರಿ ಅಂತೆ, ಈಗ ಏನಾಯ್ತು?

ಗಂಡ : ನಿನ್ನನ್ನು ಮದುವೆ ಆದ ಮೇಲೆ ದೇವರ ಮೇಲಿನ ನಂಬಿಕೆಯನ್ನೇ ಕಳೆದುಕೊಂಡೆ...!

ಮೈಸೂರು ಮಿತ್ರ

ಭಾನುವಾರ, 6 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಮ್ಮವರೇ ನಮ್ಮನ್ನು ತಪ್ಪಾಗಿ ತಿಳಿದುಕೊಂಡಾಗ ಒಬ್ಬಂಟಿಯಾಗಿ ಇರುವುದೇ ಒಳ್ಳೆಯದು. ಏಕೆಂದರೆ, ನಮ್ಮ ಮಾತು, ನಮ್ಮ ಕಾಳಜಿ ಕೊನೆಗೆ ಅವರಿಗೆ ನಾಟಕ ಎನಿಸಿಬಿಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು	ಊರ ನೋಡಿ ಬಾ ಅಂದ್ರೆ, ತೋರಣ ಕಟ್ಟಿ ಬಂದನಂತೆ

ನಿಮ್ಮ ಪತ್ರಗಳು

ಹೊಗಳು ಭಟ್ಟರ ದರ್ಬಾರ್!!

ಮಾನ್ಯರೆ,

ಅ. 3 ರಂದು ಮೈಸೂರು ದಸರಾ ನವರಾತ್ರಿಗೆ ವಿದ್ಯುಕ್ತ ಚಾಲನೆ ನೀಡುವ ಅಂಗವಾಗಿ ಮೈಸೂರು ಅರಮನೆಯಲ್ಲಿ ಹೊಗಳು ಭಟ್ಟರು ರಾಜರಿಗೆ 'ಜೈ ಪರಾಕ್' ಹೇಳಿ ಹೊಗಳುತ್ತಾ.... ರಾಜರನ್ನು ದರ್ಬಾರ್ ಅಂಗಳಕ್ಕೆ ಕರೆ ತರುತ್ತಿದ್ದರು. ಕಾಕತಾಳೀಯ ವೆಂಬತೆ ಇತ್ತ ಚಾಮುಂಡಿ ದೇವಿ ಸನ್ನಿದಿಯಲ್ಲಿ ದಸರಾ ಉದ್ಘಾಟನಾ ಸಮಾರಂಭ ದಲ್ಲಿ ಉದ್ಘಾಟಕ ಗಣ್ಯರೂ ಸೇರಿದಂತೆ ವೇದಿಕೆಯ ಮೇಲಿದ್ದ ರಾಜಕಾರಣಿ ಗಳೆಲ್ಲರೂ ತಮ್ಮ ನಾಯಕರನ್ನು ಹೊಗಳಿ ಹೊಗಳಿ ಮನೋರಂಜನೆ ಪಡೆಯುತ್ತಿದ್ದರು! ಟಿವಿಯಲ್ಲಿ ನೇರ ಪ್ರಸಾರವಾಗುತ್ತಿದ್ದ ಕಾರ್ಯಕ್ರಮವನ್ನು ನೋಡಿ ಒಂದು ಕ್ಷಣ ನನಗೆ ಇದೇನು ವಿಧಾನಸಭೆಯಲ್ಲಿ ಮುಡಾ ಹಗರಣದ ಬಗ್ಗೆ ಚರ್ಚೆ ನಡೆಯುತ್ತಿದೆಯೇನೋ ಎಂದು ಭಾಸವಾಯಿತು! ಇಡೀ ಸಚಿವ ಸಂಪುಟ ಕೂಡ ಅಲ್ಲಿತ್ತು. ಟಿವಿಯನ್ನು ಆಫ್ ಮಾಡಿದೆ. ಹಾಗಿದ್ದರೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ದಸರಾ ಉದ್ಘಾಟನೆ ಎನ್ನುವುದಕ್ಕೆ ಏನಾದರೂ ಅರ್ಥವಿದೆಯೇ?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಗುಣಮಟ್ಟದ ಆಹಾರ ಸಿಗದೆ ಬೇಸರ

ಮಾನ್ಯರೆ,

ಇತ್ತೀಚೆಗೆ ನಮ್ಮ ಪದವಿ ಪೂರ್ವ ಕಾಲೇಜಿನ ವತಿಯಿಂದ ಕೈಗಾರಿಕಾ ಭೇಟಿ ನಿಮಿತ್ತ ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಇನ್ಫೋಸಿಸ್‌ಗೆ ಭೇಟಿ ನೀಡಿದ್ದೆವು. ಇದರಲ್ಲಿ ವಿದ್ಯಾರ್ಥಿಗಳು ತಮ್ಮ ಉಪನ್ಯಾಸಕರ ಜೊತೆ ಸೇರಿ ಅಲ್ಲಿನ ಕಟ್ಟಡಗಳು, ಗ್ರಂಥಾಲಯ, ಅಮೇರಿಕಾದ ಶ್ವೇತ ಭವನದ ಮಾದರಿಯ ಸ್ಥಳ, ಸ್ವಚ್ಛತೆ ತುಂಬಿರುವ ಉದ್ಯಾನವನ, ವೃತ್ತಾಕಾರದ ಮಾದರಿ ಅತ್ಯಾಧುನಿಕ ಥಿಯೇಟರ್ ನೋಡಿ ಬಂದರು. ಅಲ್ಲಿನ ರೀತಿ ನೀತಿ ಹಾಗೂ ನಿರ್ವಹಣೆಯ ಬಗ್ಗೆ ಅತೀವ ಖುಷಿ ಆಯಿತು. ನಾವು ಯಾವುದೋ ವಿದೇಶಕ್ಕೆ ಭೇಟಿ ನೀಡಿದ ಅನುಭವವಾಯಿತು. ಅಂದು ವೀಕೆಂಡ್ ಶನಿವಾರದ ದಿನವೇ ಸುಮಾರು ಹತ್ತು ಕಾಲೇಜುಗಳ 800 ವಿದ್ಯಾರ್ಥಿಗಳಿಗೆ ಭೇಟಿಗೆ ಅವಕಾಶ ಕಲ್ಪಿಸಲಾಗಿತ್ತು. ಸಂದರ್ಶನದ ಕೊನೆಗೆ ಥಿಯೇಟರ್‌ನಲ್ಲಿ ವೃತ್ತಿಗೆ, ಭವಿಷ್ಯಕ್ಕೆ ಸಂಬಂಧಿಸಿದಂತೆ ಉಪಯುಕ್ತ ಸೆಮಿನಾರ್ ಕಾರ್ಯಕ್ರಮ ನಡೆಯಿತು. ಈ ಬಾರಿ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ಅವಕಾಶ ನೀಡಿದ್ದು ವಿಶೇಷ ಎಂದು ಅಲ್ಲಿನ ಸ್ವಯಂ ಸೇವಾ ಸಂಸ್ಥೆಯ ಸದಸ್ಯರು ತಿಳಿಸಿದರು.

ಎಲ್ಲಾ ಮುಗಿಸಿ ನಂತರ ಫುಡ್ ಕೋರ್ಟ್‌ಗೆ ಬಂದೆವು. ಬೇಸರದ ಸಂಗತಿಯೆಂದರೆ ಊಟ ಅಷ್ಟಾಗಿ ಗುಣಮಟ್ಟದಿಂದ ಇಲ್ಲದೇ ಇದ್ದದ್ದು. ಒಂದು ತಟ್ಟೆಯಲ್ಲಿ ಎರಡು ಚಿಕ್ಕ ಅಳತೆಯ ಪೂರಿ, ಸಾಗು, ಕಳಪೆ ಗುಣಮಟ್ಟದ ಅನ್ನ, ಸಾರು, ಒಂದು ಬಗೆಯ ಪಲ್ಯ, ಒಂದು ಮೆಣಸಿನಕಾಯಿ ಬಜ್ಜಿ, ಒಂದೊಂದು ಕಪ್ ರಸಂ, ಮೊಸರು. ಇವೆಲ್ಲವೂ ತಿನ್ನಲು ರುಚಿ ಇಲ್ಲದೇ ಇದ್ದದ್ದು ಕೊಂಚ ಮಟ್ಟಿಗೆ ಬೇಸರ ತರಿಸಿತು. ಇರುವುದರಲ್ಲಿ ರಸಂ ಹಾಗೂ ಮೊಸರು ಪರವಾಗಿಲ್ಲ. ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ತಕ್ಷಣದ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ.

–ಎ.ಎಸ್. ಗೋವಿಂದೇಗೌಡ, ಕನ್ನಡ ಉಪನ್ಯಾಸಕರು, ಮೈಸೂರು.

ಜಾತಿ ಧರ್ಮಗಳ ವಿರುದ್ಧದ ಹೇಳಿಕೆಗಳಿಗೆ ಕಡಿವಾಣ ಅಗತ್ಯ

ಮಾನ್ಯರೆ,

ಶೂದ್ರರಿಗೆ ಮಾನ ಮರ್ಯಾದೆ ಇದ್ದರೆ ಬ್ರಾಹ್ಮಣರ ದೇಗುಲಕ್ಕೆ ಹೋಗಬಾರದು. ಹಿಂದು ಧರ್ಮ ಅಂದರೆ ಅದು ಹಿಂದುಗಳ ಧರ್ಮ ಅಲ್ಲ. ಬ್ರಾಹ್ಮಣರ ಧರ್ಮ. ಹಿಂದೂ ಎಂದರೆ ಹಿಂದಕ್ಕೆ ಹೋಗುವ ಜನ ಎಂದು ಮೈಸೂರಿನ ಮಹಿಷ ಮಂಡಲೋತ್ಸವದ ಕಾರ್ಯಕ್ರಮದಲ್ಲಿ ಜಾತಿ ಹಾಗೂ ಧರ್ಮವೊಂದರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಪ್ರೊ.ಭಗವಾನ್ ಅವರ ಮಾತುಗಳು ನಿಜಕ್ಕೂ ಖಂಡನೀಯ. ಬುದ್ಧಿಜೀವಿಗಳು ಎಂದು ಬಿಂಬಿಸಿಕೊಂಡು ಒಂದು ಜಾತಿ ಹಾಗೂ ಧರ್ಮದ ವಿರುದ್ಧ ಈ ರೀತಿ ತುಚ್ಛವಾಗಿ ಮಾತನಾಡುವುದು ಸರಿಯಲ್ಲ. ಇದು ತಪ್ಪಬೇಕಿದೆ.

ಯಾವುದೇ ಜಾತಿ ಹಾಗೂ ಧರ್ಮದ ವಿರುದ್ಧ ಮಾತನಾಡುವ, ಹಿಯಾಳಿಸುವ ಹಕ್ಕು ಯಾರಿಗೂ ಇರುವುದಿಲ್ಲ. ಆದರೆ ಕೆಲವರು ಬುದ್ಧಿಜೀವಿಗಳ ಸೋಗಿನಲ್ಲಿ ಅನ್ಯ ಜಾತಿ ಹಾಗೂ ಧರ್ಮದ ವಿರುದ್ಧ ತುಚ್ಚವಾಗಿ ಮಾತನಾಡಿ ವಿವಾದ ಸೃಷ್ಟಿಸುತ್ತಿರುವುದು ಅವರ ವ್ಯಕ್ತಿತ್ವಕ್ಕೆ ತರವಲ್ಲ. ಸದಾ ಒಂದಿಲ್ಲೊಂದು ವಿವಾದಾತ್ಮಕ ಹೇಳಿಕೆಗಳಿಂದಲೇ ತಾವೊಬ್ಬ ಮೇಧಾವಿ ಎಂದು ಬಿಂಬಿಸಿಕೊಂಡು ಪ್ರಚಾರಪ್ರಿಯರಾದ ಭಗವಾನ್ ಇನ್ನಾದರೂ ಬುದ್ದಿ ಕಲಿಯಬೇಕಾದ ಅನಿವಾರ್ಯತೆ ಇದೆ. ಏಕೆಂದರೆ ಯಾವುದೇ ಬುದ್ಧಿಜೀವಿಗಳು ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಾರೆಯೇ ಹೊರತೂ, ಶಾಂತಿ ಭಂಗಕ್ಕೆ ಆಸ್ಪದ ಕೊಡುವುದಿಲ್ಲ. ಆದರೆ ಭಗವಾನ್ ಅವರ ಪ್ರತಿಬಾರಿಯ ಹೇಳಿಕೆಗಳು ಬರೀ ವಿವಾದ ಹಾಗೂ ಸಮಾಜದ ಮನಃಶಾಂತಿಯ ದಕ್ಕೆಗೆ ದಾರಿ ಮಾಡಿಕೊಡುತ್ತಿರುವುದು ವಿಪರ್ಯಾಸ. ಸಮಾಜದ ಸ್ವಾಸ್ಥ್ಯ ಕೆಡಿಸುವ ಇಂತಹ ಬುದ್ಧಿಜೀವಿಗಳ(!?) ಅಸಂಬದ್ಧ ಹೇಳಿಕೆಗಳಿಗೆ ಇನ್ಮುಂದೆಯಾದರೂ ಕಡಿವಾಣ ಬೀಳಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ರಾಜಕೀಯ ದಸರಾ!

ಮಾನ್ಯರೆ,

ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಾ 'ಎಫ್‌ಐಆರ್, ಸಿದ್ದರಾಮಯ್ಯ, ಕುಮಾರಸ್ವಾಮಿ, ರಾಜೀನಾಮೆ, ಮುಡಾ....' ಎಂದು ಬಡಬಡಿಸಿದ್ದಾರೆ ಶಾಸಕ ಜಿ.ಟಿ.ದೇವೇಗೌಡರು!

ಇದರಿಂದಾಗಿ ಯುವ ದಸರಾ, ಸಾಂಸ್ಕೃತಿಕ ದಸರಾ... ಇತ್ಯಾದಿ ರೀತಿಯಲ್ಲಿ 'ರಾಜಕೀಯ ದಸರಾ' ಎಂಬ ಹೊಸ ಆಚರಣೆಯನ್ನು ಆಚರಿಸಿದಂತಾಗಿದೆ.

ದಸರೆಯ ಆನೆಗಳು ಒಮ್ಮೊಮ್ಮೆ ಮದವೇರಿ ಅಡ್ಡಾದಿಡ್ಡಿ ಚಲಿಸಿ ಜನರಲ್ಲಿ ಭೀತಿ ಮೂಡಿಸುವಂತೆ ನಮ್ಮ ರಾಜಕಾರಣಿಗಳು ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅಡ್ಡಾದಿಡ್ಡಿಯಾಗಿ ಬಾಯಿ ಬಡಿದುಕೊಂಡು ಉದ್ಘಾಟನೆಯಲ್ಲಿಯೇ ಎಡವಿದ್ದಾರೆ. ಈ ನಮ್ಮ ಬಿಳಿಯಾನೆಗಳಿಗಿಂತ ದಸರಾ ಆನೆಗಳೇ ಮೇಲು!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ನಾದ ಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಆನೆಗಳ ಬೆನ್ನೇರಿ...!

ಭಾರತೀಯರಿಗೂ ಆನೆಗಳಿಗೂ ಬಲು ಪ್ರಾಚೀನವಾದ ನಂಟು. ನಮ್ಮ ಪುರಾಣಗಳಲ್ಲಿ, ಧರ್ಮಗಳಲ್ಲಿ ದೇವಾನು ದೇವತೆಗಳಲ್ಲಿ, ಜನಪದ ಕತೆಗಳಲ್ಲಿ, ಇತಿಹಾಸದಲ್ಲಿ ಅವುಗಳ ಉಲ್ಲೇಖವು ಢಾಳಾಗಿ ಕಂಡುಬರುತ್ತದೆ. ನಮ್ಮ ಗಣಪನು ಗಜಾನನ. ಗಜೇಂದ್ರ ಮೋಕ್ಷದ ಕತೆ ಜನಜನಿತ. ಮಕ್ಕಳ ಕತೆಗಳಲ್ಲಿ ಅವು ಇರಲೇಬೇಕು. ತಮ್ಮ ಪಟ್ಟದಾನೆಯನ್ನು ಅತ್ಯಂತ ಗಾಢವಾಗಿ ಪ್ರೀತಿಸಿದ್ದ ಅದೆಷ್ಟು ರಾಜರುಗಳು ನಮ್ಮಲ್ಲಿ ಆಗಿಹೋಗಿಲ್ಲ? ಚದುರಂಗ ದಳಗಳಲ್ಲಿ ಆನೆಯೂ ಪ್ರಮುಖ. ಮಹಾಭಾರತದ ಭಗದತ್ತನನ್ನು ಮರೆಯಲು ಸಾಧ್ಯವೇ? ನಂಜನಗೂಡಿನ ಪಚ್ಚೆ ಲಿಂಗವು ಹಕೀಂ ನಂಜುಂಡ ಎಂದು ಕರೆಸಿಕೊಳ್ಳಲು ಆನೆಯೇ ಕಾರಣ ಅಲ್ಲವೇ?

ಒಟ್ಟಾರೆ ಅನಾದಿ ಕಾಲದಿಂದಲೂ ಮಾನವನ ಬದುಕಿನೊಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಹಾಸು ಹೊಕ್ಕಿರುವ ಈ ಬೃಹದಾಕಾರ ಪ್ರಾಣಿಯ ಬದುಕಿನ ಪ್ರತಿಯೊಂದು ಘಟ್ಟ ಮತ್ತು ವಿವರಗಳು ಅತ್ಯಂತ ಕುತೂಹಲಕಾರಿ. ಈಗ ದಸರಾ ಸಮಯ. ದಸರಾ ಹಬ್ಬದ ಪ್ರಮುಖ ಆಕರ್ಷಣೆಯೇ ಆನೆಗಳು–ಜಂಬೂಸವಾರಿ ಎಂದರೆ ಅತಿಶಯೋಕ್ತಿ ಅಲ್ಲ. ದಸರಾ ಸಮೀಪಿಸುತ್ತಿದ್ದಂತೆಯೇ ಮೈಸೂರಿಗೆ ಆಗಮಿಸುವ ಗಜಪಡೆಯು ಮೈಸೂರಿಗರ, ಅದರಲ್ಲೂ ಮಕ್ಕಳ ಕೇಂದ್ರಬಿಂದು. ಪ್ರತಿನಿತ್ಯ ಅವುಗಳ ತಾಲೀಮು, ಅವುಗಳ ಮಜ್ಜನ, ಆಹಾರ, ತೂಕ ಪ್ರತಿಯೊಂದರ ವರದಿಯನ್ನು ಪತ್ರಿಕೆಗಳು ಪ್ರಕಟಿಸುತ್ತಲೇ ಇರುತ್ತವೆ. ಕಾವಾಡಿಗರು(ಮಾವುತರ ಸಹಾಯಕರು) ಮತ್ತು ಮಾವುತರ ಊಟ–ವಸತಿ, ಅವರ ಮಕ್ಕಳ ಶಿಕ್ಷಣ ಎಲ್ಲವೂ ಸುದ್ದಿಯಾಗುತ್ತದೆ ಆಗ. ಅದರಲ್ಲೂ ಅಂಬಾರಿಯ ಹೌಡಾವನ್ನು ಹೊರುವ ಮುಖ್ಯ ಆನೆಗೆ ಇನ್ನಿಲ್ಲದ ಪ್ರಾಮುಖ್ಯತೆ. ಏಕೆಂದರೆ ಜಂಬೂ ಸವಾರಿಯು ನಿರ್ವಿಘ್ನವಾಗಿ ನೆರವೇರಬೇಕಾದಲ್ಲಿ ಅದರದು ಅತ್ತಂತ ಜವಾಬ್ದಾರಿಯುತ ಪಾತ್ರ. ಆನೆಗಳು ಗದ್ದಲಕ್ಕೆ, ಗುಂಡಿನ ಶಬ್ದಕ್ಕೆ ಅಂಜದಿರುವಂತೆ ಅವಕ್ಕೆ ಅಭ್ಯಾಸ ಮಾಡಿಸಿ ತಯಾರಿ ಮಾಡುತ್ತಾರೆ. ಮೈಮೇಲೆ ರಂಗು ರಂಗಿನ ಚಿತ್ತಾರಗಳನ್ನು ಬರೆಸಿಕೊಂಡು, ಸೊಂಡಿಲ ಮೇಲೆ ಅಂದದ ಚಿತ್ರಗಳನ್ನು ಬಿಡಿಸಿಕೊಂಡು, ಫಳ ಫಳ ಹೊಳೆಯುವ ವಸ್ತ್ರಧಾರಿಗಳಾಗಿ, ಈ ಬೃಹದಾಕಾರದ ಪ್ರಾಣಿಗಳು ಗಾಂಭೀರ್ಯವನ್ನೇ ಹೊದ್ದಂತೆ ಹೆಜ್ಜೆ ಹಾಕುವುದನ್ನು ನೋಡಲು ಮಂದಿ ಮುಗಿಬೀಳುತ್ತಾರೆ. ಮತ್ತೆ ನಾವು ಈ ಗಜಪಡೆಗಳನ್ನು ನೆನಪು ಮಾಡಿಕೊಳ್ಳುವುದು ಮಾತ್ರ ಮುಂದಿನ ದಸರೆಗೇ!

ಬ್ರಿಟಿಷರ ಸಮಯದಲ್ಲಿ ದಸರೆಯ ಮತ್ತೊಂದು ಪ್ರಮುಖ ಆಕರ್ಷಣೆ ಆಗಿದ್ದುದು ಖೆಡ್ಡಾ. ಪಳಗಿದ ಆನೆಗಳ ಸಹಾಯದಿಂದ ಕಾಡಾನೆಗಳನ್ನು ಸೆರೆ ಹಿಡಿಯುವ ಕಾರ್ಯಕ್ರಮವೇ ಖೆಡ್ಡಾ. ಬಹಳ ದೊಡ್ಡದಾದ ಹಳ್ಳವನ್ನು ತೋಡಿ, ಕಾಡಿನಿಂದ ಕಾಡಾನೆಗಳು ಆ ದಿಕ್ಕಿಗೇ ಚಲಿಸುವಂತೆ ಪಳಗಿದ ಆನೆಗಳ ಸಹಾಯದಿಂದ ಮಾಡಲಾಗುತ್ತದೆ. ಹಾಗೆ ಅವು ಹಳ್ಳಕ್ಕೆ ಬಿದ್ದ ಕೂಡಲೇ ಗಟ್ಟಿಮುಟ್ಟಾದ ಅದರ ಬಾಗಿಲುಗಳನ್ನು ಹಾಕಿ, ತಪ್ಪಿಸಿಕೊಳ್ಳಲಾಗದಂತೆ ಮಾಡಿ ಅವುಗಳನ್ನು ಬಂಧಿಸಲಾಗುತ್ತಿತ್ತು. ಹೇಳಿದ ಮಾತನ್ನು ಕೇಳುವವರೆಗೂ ಅವಕ್ಕೆ ಅಲ್ಲಿಯೇ ಇರುವ ಶಿಕ್ಷೆ. ಆ ಹಳ್ಳದ ಮೇಲಿನಿಂದ ಈ ಕಾರ್ಯಕ್ರಮವನ್ನು ನೋಡಲು ಅನುವಾಗುವಂತೆ ಸುತ್ತಲೂ ಬಿಗಿದ ಬೇಲಿಗಳ ರಕ್ಷೆ. ಅಲ್ಲಿ ಅಧಿಕಾರಿಗಳು, ಪ್ರಮುಖರು ನಿಂತು ಈ ದೃಶ್ಯವನ್ನು ನೋಡುತ್ತಿದ್ದರು. ಹಾಗೆ ಸೆರೆ ಹಿಡಿದ ಆನೆಗಳನ್ನು ಪಳಗಿಸಿ, ತಮ್ಮ ಆಜ್ಞೆಗಳನ್ನು ಪಾಲಿಸುವಂತೆ ಮಾಡಿದ ನಂತರ ಅವುಗಳನ್ನು ಕಾಡಿನಲ್ಲಿ ದೊಡ್ಡ ದೊಡ್ಡ ಮರಗಳನ್ನು ಬೀಳಿಸಲು, ಕಾಡಿನಲ್ಲಿ ಗಸ್ತು ತಿರುಗಲು, ಮರದ ದಿಮ್ಮಿಗಳನ್ನು ಸಾಗಿಸಲು, ರೈಲು ಹಳಿಗಳನ್ನು ನಿರ್ಮಿಸಲು, ಟೀ ತೋಟಗಳಲ್ಲಿ ಇತ್ಯಾದಿ ಕೆಲಸಗಳಿಗಾಗಿ ಬಳಸಿಕೊಳ್ಳಲಾಗುತ್ತಿತ್ತು. ಈ ಕೆಲಸಗಳಿಗೆ ಆನೆಗಳ ಸಂಖ್ಯೆ ಕಡಿಮೆ ಬಿದ್ದಾಗ ಮತ್ತಷ್ಟು ಆನೆಗಳನ್ನು ಹಿಡಿಯುತ್ತಿದ್ದರು. ಮೈಸೂರು, ದಸರೆಗೆ ಹೆಸರಾದಂತೆ ತನ್ನ ಚಾಮರಾಜೇಂದ್ರ ಮೃಗಾಲಯಕ್ಕೂ ಹೆಸರಾಗಿದೆ. ದಸರೆಯ ಸಮಯದಲ್ಲಿ ಅಲ್ಲಿ ಕಾಲಿಡಲಾಗದಷ್ಟು ಜನಜಂಗುಳಿ. ಅಲ್ಲೂ ಸಹ ಸರಪಳಿಗಳಿಂದ ಬಂಧಿತವಾದ, ಆರಾಮವಾಗಿ ಸೊಪ್ಪು ಸದೆಯನ್ನು ತಿನ್ನುತ್ತಾ ನಿಂತಿರುವ ಆನೆಗಳನ್ನು ನೋಡುವುದು ಮಕ್ಕಳ ಮೊದಲ ಆದ್ಯತೆ. ದಸರೆಯ ಸಮಯದಲ್ಲಿ ಪ್ರವಾಸಿಗರನ್ನು ಸವಾರಿ ಮಾಡಿಸುತ್ತಿದ್ದುದೂ ಇತ್ತು.



> ಮಾನವ ಮತ್ತು ಗಜಗಳ ಬಾಂಧವ್ಯ ಮತ್ತು ಸಂಘರ್ಷ ಇಂದು ನೆನ್ನೆಯದಲ್ಲ. ಈ ನೆಲಕ್ಕಾಗಿ ಇಬ್ಬರ ಹೋರಾಟವು ನಿರಂತರವಾಗಿ ನಡೆದು ಬಂದಿದೆ. ಕಾಡು ಅದರ ಸಹಜವಾದ ವಾಸಸ್ಥಳ. ಹತ್ತು ಸಾವಿರ ಪೌಂಡ್ ಭಾರದ ಈ ಸಸ್ಯಾಹಾರಿಗಳಿಗೆ ಕಾಡಿನ ಸಸ್ಯಗಳೇ ಆಧಾರ. ಅವೇ ಅದರ ಆಹಾರ. ನಾಕು ಟನ್ ತೂಗುವ ಆನೆಯೊಂದು ಒಂದು ದಿನಕ್ಕೆ 300–500 ಪೌಂಡ್ ಆಹಾರ ತಿನ್ನಬೇಕು. ಅದು ಸಮೃದ್ಧವಾದ ಕಾಡಿನಲ್ಲಿ ಮಾತ್ರ ಲಭ್ಯ. ಪ್ರಕೃತಿ ಮಾತೆಯ ದೇಣಿಗೆ ಅದು.

ತೋಟ, ಹೊಲ ಗದ್ದೆಗಳಿಗೆ ನುಗ್ಗಿ ಧ್ವಂಸ ಮಾಡುವ ಆನೆಗಳ ಬಗ್ಗೆ ಓದುತ್ತಲೇ ಇರುತ್ತೇವೆ. ಅಂತೆಯೇ ಮನುಷ್ಯರು ಅಳವಡಿಸುವ ವಿದ್ಯುತ್ ತಂತಿಗಳ ಸ್ಪರ್ಶದಿಂದ ಸತ್ತ ಆನೆಗಳಿಗೂ ಕಡಿಮೆ ಇಲ್ಲ. ಆಗಾಗ್ಗೆ ನಗರಗಳಿಗೂ ನುಗ್ಗಿ, ಮನುಷ್ಯರನ್ನು ತನ್ನ ಸೊಂಡಿಲಿನಿಂದ ಎತ್ತಿ ಎಸೆಯುವ, ಕಾಲಿನಿಂದ ತುಳಿದು ಹೊಸಕಿಹಾಕುವ ಭಯಾನಕ ವರದಿಗಳೂ ಆಗಾಗ್ಗೆ ಕಾಣಿಸಿಕೊಳ್ಳುತ್ತವೆ. ಅದು ಸಿಟ್ಟಿಗೆದ್ದಾಗ ಪ್ರೀತಿಯ ಮಾವುತನೂ ಜೀವ ತೆರಬೇಕಾಗುತ್ತದೆ ಕೆಲವೊಮ್ಮೆ. ದಂತಚೋರರೂ ನಮಗೆ ಪರಿಚಿತರೇ. ಅವರು ದಂತಕ್ಕಾಗಿ ಕೊಂದ ಸಲಗಗಳಿಗೆ ಲೆಕ್ಕವಿಲ್ಲ. ದಂತಚೋರ ವೀರಪ್ಪನ್ ಅವನೇ ಹೇಳಿರುವಂತೆ ಅವನ ಹೆಸರಿನಲ್ಲಿ ಸಲಗಗಳನ್ನು ಕೊಂದವರು ಅದೆಷ್ಟೋ ಮಂದಿ. ಆನೆ ಇದ್ದರೂ ಸಾವಿರ, ಸತ್ತರೂ ಸಾವಿರ? ಮಸ್ತಿಯಲ್ಲಿರುವ ಆನೆಗಳನ್ನು ಹಿಡಿಯಲು ಅಥವಾ ಕಟ್ಟಿಹಾಕಲು ಅಸಾಧ್ಯವಾದಾಗ ಸರಕಾರವೇ ಅದನ್ನು ಕೊಲ್ಲಲು ಆದೇಶ ನೀಡುವುದೂ ಉಂಟು. ಪ್ರಾಣಿ ದಯಾ ಸಂಘದವರು ಇವನ್ನು ಮನೋರಂಜನೆಗಾಗಿ ಬಳಸುವುದನ್ನು, ದೇವಾಲಯಗಳಲ್ಲಿ, ಮೆರವಣಿಗೆಗಳಲ್ಲಿ, ಸರ್ಕಸ್‌ಗಳಲ್ಲಿ ಬಳಸುವುದನ್ನು, ಸೆರೆ ಹಿಡಿಯುವುದನ್ನು ತೀವ್ರವಾಗಿ ವಿರೋಧಿಸುವ ಕೂಗೂ ಕೇಳಿ ಬರುತ್ತಿರುತ್ತದೆ. ಅಂತೂ ಮಾನವ ಮತ್ತು ಗಜಗಳ ಬಾಂಧವ್ಯ ಮತ್ತು ಸಂಘರ್ಷ ಇಂದು ನೆನ್ನೆಯದಲ್ಲ. ಈ ನೆಲಕ್ಕಾಗಿ ಇಬ್ಬರ ಹೋರಾಟವು ನಿರಂತರವಾಗಿ ನಡೆದು ಬಂದಿದೆ. ಕಾಡು ಅದರ ಸಹಜವಾದ ವಾಸಸ್ಥಳ. ಹತ್ತು ಸಾವಿರ ಪೌಂಡ್ ಭಾರದ ಈ ಸಸ್ಯಾಹಾರಿಗಳಿಗೆ ಕಾಡಿನ ಸಸ್ಯಗಳೇ ಆಧಾರ. ಅವೇ ಅದರ ಆಹಾರ. ನಾಕು ಟನ್ ತೂಗುವ ಆನೆಯೊಂದು ಒಂದು ದಿನಕ್ಕೆ 300–500 ಪೌಂಡ್ ಆಹಾರ ತಿನ್ನಬೇಕು. ಅದು ಸಮೃದ್ಧವಾದ ಕಾಡಿನಲ್ಲಿ ಮಾತ್ರ ಲಭ್ಯ. ಪ್ರಕೃತಿ ಮಾತೆಯ ದೇಣಿಗೆ ಅದು. ಮನುಷ್ಯ ತನ್ನ ಸ್ವಂತ ಲಾಭಕ್ಕಾಗಿ, ಅವಶ್ಯಕತೆಗಾಗಿ ಕಾಡನ್ನು ಕಡಿದು, ತೆರವಾಗಿಸುತ್ತಾ ಬಂದಲ್ಲಿ, ಅವು ಏನು ಮಾಡಬೇಕು? ಹಸಿದ ಆನೆಗಳು ಆಹಾರ ಅರಸುತ್ತಾ ಎಲ್ಲೆಂದರಲ್ಲಿ ಬರುವ ಅನಿವಾರ್ಯತೆಯನ್ನು ನಿರ್ಮಾಣ ಮಾಡಿದವರು ಯಾರು? ಮನುಷ್ಯರ ಸಂಭ್ರಮದಲ್ಲಿ ಇಷ್ಟೆಲ್ಲ ಪಾಲುಗೊಳ್ಳುವ ಈ ಮಾನವ ಸ್ನೇಹಿ ಬೃಹತ್ ಪ್ರಾಣಿಗಳ ಬಗ್ಗೆ ನಮಗೆಷ್ಟು ಗೊತ್ತು?

(ಮುಂದುವರೆಯುವುದು)

ವರ್ತಕ ಸಮುದಾಯದ ತೀವ್ರ ವಿರೋಧದ ಹಿನ್ನೆಲೆ

ಡಿ.ದೇವರಾಜ ಅರಸು ರಸ್ತೆ ವಾಹನ ಸಂಚಾರಕ್ಕೆ ಮುಕ್ತ



ಮೈಸೂರು, ಅ. 5(ಆರ್‌ಕೆ)– ವರ್ತಕ ಸಮುದಾಯ ಹಾಗೂ ಸ್ಥಳೀಯರು ತೀವ್ರ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಜಿಲ್ಲಾಧಿಕಾರಿಗಳು ಹೊರಡಿಸಿದ್ದ ಡಿ.ದೇವರಾಜ ಅರಸು ರಸ್ತೆಯ ವಾಹನ ಸಂಚಾರ ನಿಷೇಧ ಆದೇಶವನ್ನು ಇಂದು ಬೆಳಗ್ಗೆ ರದ್ದುಪಡಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಜನರು, ತಮ್ಮ ಮಕ್ಕಳು–ಮರಿಗಳೊಂದಿಗೆ ವಿಹರಿಸಿ, ವಿದ್ಯುತ್ ದೀಪಾಲಂಕಾರವನ್ನು ವೀಕ್ಷಿಸಲಿ. ವಾಹನ ಸಂಚಾರ ದಟ್ಟಣೆ ರಹಿತ, ವಾಯು ಮಾಲಿನ್ಯ, ಶಬ್ಧ ಮಾಲಿನ್ಯ ರಹಿತ ವಾತಾವರಣ ನಿರ್ಮಾಣ ಉದ್ದೇಶದಿಂದ ಡಿ.ದೇವರಾಜ ಅರಸು ರಸ್ತೆಯಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು.

ಆದರೆ, ಸ್ಥಳೀಯರು, ವರ್ತಕರು ತೀವ್ರ ವಿರೋಧ ವ್ಯಕ್ತಪಡಿಸಿರುವುದರಿಂದ ದಸರಾ ವೇಳೆ ಇತರ ಕಾರ್ಯಕ್ರಮಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀಳದಿರಲಿ ಎಂದು ವಾಹನ ಸಂಚಾರ ನಿಷೇಧ ಹಿಂಪಡೆಯಲಾಗಿದೆ ಎಂದು ತಿಳಿಸಿದರು.

ಇಂದಿನಿಂದ (ಅ.5) ಎಂದಿನಂತೆ ರಾತ್ರಿ ವೇಳೆಯೂ ಡಿ.ದೇವರಾಜ ಅರಸು ರಸ್ತೆಯಲ್ಲಿ ವಾಹನಗಳು ಸಂಚರಿಸಲಿವೆ. ಶುಕ್ರವಾರ ರಾತ್ರಿ ಅರಸು ರಸ್ತೆ ಮತ್ತು ಸಂಪರ್ಕ ರಸ್ತೆಗಳನ್ನು ಬಂದ್ ಮಾಡಿದ್ದರಿಂದ ದೇವರಾಜ ಅರಸು ರಸ್ತೆಯ ಅಂಗಡಿ ಮಳಿಗೆಗಳ ಮಾಲೀಕರು, ಸ್ಥಳೀಯರು ಪ್ರತಿಭಟನೆ ನಡೆಸಿ, ವಾಕಿಂಗ್ ಸ್ಟ್ರೀಟ್ ಮಾಡುವ ನಿರ್ಣಯಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ನನ್ನ ಪತ್ನಿಯನ್ನು ರಾಜಕಾರಣಕ್ಕೆ ಎಳೆದು ತಂದರಲ್ಲಾ ಇದು ಸರಿನಾ?



ರಾಯಚೂರು, ಅ.5(ಬಿಎಲ್‌ಯು)– ಮನೆಯಿಂದ ಹೊರಗೆ ಬಂದು ರಾಜಕಾರಣದ ಕಡೆ ಮುಖ ಮಾಡದ ನನ್ನ ಪತ್ನಿಯನ್ನು ರಾಜಕಾರಣಕ್ಕೆ ಎಳೆದು ತಂದರಲ್ಲಾ ಇದನ್ನು ನೀವು ಕ್ಷಮಿಸುತ್ತೀರಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜನರನ್ನು ಪ್ರಶ್ನಿಸಿದ್ದಾರೆ.

ರಾಯಚೂರಿನ ಮಾನ್ವಿಯಲ್ಲಿ ಇಂದು ವಿವಿಧ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾರಣವೇ ಇಲ್ಲದೆ ರಾಜೀನಾಮೆ ಕೊಡಿ ಎಂದು ಕೇಳುತ್ತಿದ್ದಾರೆ. ಈ ಬೆಳವಣಿಗೆ ನನಗೂ ಬೇಸರ ತಂದಿದೆ, ಸಾಕಾಗಿದೆ. ಅದೇನೆ ಆಗಲಿ ನಾನು ಯಾವುದೇ ಬೆದರಿಕೆಗಳಿಗೆ ಬಗ್ಗಲ್ಲ, ಜಗ್ಗಲ್ಲ, ಹೋರಾಟ ಮುಂದುವರೆಸುತ್ತೇನೆ ಎಂದರು.

ಕುರಿ ಕಾಯುವವರ ಮಗ ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದೆ ತಪ್ಪಾ. ನಾನು ಮಾಡಿರುವ ತಪ್ಪಾದರೂ ಏನು ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ನನ್ನ ಮೇಲಿನ ಹೊಟ್ಟೆ ಕಿಚ್ಚಿಗೆ ನನ್ನ ಪತ್ನಿಯನ್ನು ರಾಜಕಾರಣಕ್ಕೆ ಎಳೆದು ತರಬೇಕಿತ್ತಾ, ಆಕೆಯಾದರೂ ಏನು ತಪ್ಪು ಮಾಡಿದ್ದಾರೆ ಎಂದು ಭಾವನಾತ್ಮಕವಾಗಿ ಪ್ರಶ್ನಿಸಿದ್ದಾರೆ.

ಮೇಘಾಲಯದಲ್ಲಿ ಪ್ರವಾಹ, ಭೂಕುಸಿತ; 10 ಮಂದಿ ಸಾವು



ಗುವಾಹಟಿ: ಮೇಘಾಲಯದ ಗಾರೋ ಹಿಲ್ಸ್ ಪ್ರದೇಶದಲ್ಲಿ ಭಾರೀ ಮಳೆಯಿಂದ ಉಂಟಾದ ಪ್ರವಾಹ ಮತ್ತು ಭೂಕುಸಿತದಲ್ಲಿ ಶನಿವಾರ ಕನಿಷ್ಠ 10 ಜನ ಮೃತಪಟ್ಟಿದ್ದಾರೆ. ಗಾರೋ ಹಿಲ್ಸ್‌ನ ಎಲ್ಲಾ 5 ಜಿಲ್ಲೆಗಳು ಪ್ರವಾಹ ಪೀಡಿತವಾಗಿದ್ದು, ಪಶ್ಚಿಮ ಗಾರೋ ಹಿಲ್ಸ್(ಮೂರು) ಮತ್ತು ದಕ್ಷಿಣ ಗ್ಯಾರೋ ಹಿಲ್ಸ್(ಏಳು)ನಲ್ಲಿ ಸಾವುಗಳು ವರದಿಯಾಗಿವೆ. ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಕೆ.ಸಂಗ್ಮಾ ಪ್ರವಾಹ ಪರಿಸ್ಥಿತಿ ಪರಿಶೀಲಿಸಿದರು.

ಶುಕ್ರವಾರ ಮಧ್ಯರಾತ್ರಿಯಿಂದ ಎಡೆಬಿಡದೆ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ದಲು ಪ್ರದೇಶ ಹಾಗೂ ಪಶ್ಚಿಮ ಗಾರೋ ಬೆಟ್ಟಗಳ ಬಯಲು ಸೀಮೆಯಲ್ಲಿ ಪ್ರವಾಹ ಉಂಟಾಗಿದೆ ಎಂದು ಮುಖ್ಯಮಂತ್ರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಪ್ರಜ್ಞೆ, ಪ್ರತಿಭೆ ಇದ್ದರೆ ಶ್ರೇಷ್ಠ ಕವಿಯಾಗಬಹುದು

ದಸರಾ ಪಂಚ ಕವಿಗೋಷ್ಠಿ ಕಾವ್ಯೋತ್ಸವ ಉದ್ಘಾಟಿಸಿ ಡಾ.ನಾಗತಿಹಳ್ಳಿ ಚಂದ್ರಶೇಖರ್ ಅಭಿಮತ





ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಕವಿಗೋಷ್ಠಿ ಪಂಚ ಕಾವ್ಯೋತ್ಸವವನ್ನು ಖ್ಯಾತ ಸಾಹಿತಿ ಡಾ.ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಿದರು. ದಸರಾ ಮಹೋತ್ಸವದ ಉದ್ಘಾಟಕರಾದ ಹಿರಿಯ ಸಾಹಿತಿ, ನಾಡೋಜ ಡಾ.ಹಂಪ ನಾಗರಾಜಯ್ಯ ಇನ್ನಿತರರಿದ್ದಾರೆ. ಬಲಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಾಹಿತ್ಯಾಸಕ್ತರನ್ನು ಕಾಣಬಹುದು.

ಮೈಸೂರು, ಅ. 5(ಆರ್‌ಕೆ)–ಪ್ರಜ್ಞೆ ಮತ್ತು ಪ್ರತಿಭೆ ಇದ್ದರೆ ಯಾವುದೇ ವ್ಯಕ್ತಿ ಶ್ರೇಷ್ಠ ಕವಿಯಾಗಿ ರೂಪುಗೊಂಡು ಜನರ ಮನದಲ್ಲಿ ಚಿರಕಾಲ ಉಳಿಯಬಲ್ಲ ಎಂದು ಖ್ಯಾತ ಸಾಹಿತಿ ಹಾಗೂ ಚಿತ್ರ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಕವಿಗೋಷ್ಠಿ ಪಂಚ ಕಾವ್ಯೋತ್ಸವ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಎಲ್ಲರಲ್ಲೂ ಕವಿ ಅಡಗಿರುತ್ತಾನೆ. ಆದರೆ, ಕೆಲವರು ಮಾತ್ರ ಶ್ರೇಷ್ಠ ಕವಿಯಾಗಲು ಸಾಧ್ಯ ಎಂದರು.

ಕಾವ್ಯ ಎಂಬುದು ಪುರಾತನವಾದದ್ದು, ಐತಿಹಾಸಿಕ, ಪೌರಾಣಿಕ, ಸಾಮಾಜಿಕವಾಗಿ ನಡೆದು ಬಂದ ಕಾವ್ಯದ ಅರ್ಥವನ್ನು ಮೈಗೂಡಿಸಿಕೊಂಡವರು ಉತ್ತಮ ಕವಿಯಾಗಬಲ್ಲರು. ಯುವ ಸಮೂಹ ಕವಿಗೋಷ್ಠಿಗಳಿಂದ ದೂರ ಉಳಿಯುತ್ತಿರುವುದರಿಂದ ಕವಿತೆ, ಕಾವ್ಯಗಳ ಮಹತ್ವ ಕಳೆ ಗುಂದುತ್ತಿದೆ ಎಂದು ವಿಷಾದಿಸಿದರು.

ದಸರಾ, ಮಹೋತ್ಸವದ ಉದ್ಘಾಟಕರಾದ ಹಿರಿಯ ಸಾಹಿತಿ, ನಾಡೋಜ ಡಾ. ಹಂಪ ನಾಗರಾಜಯ್ಯ ಮಾತನಾಡಿ, ಮಗು ಹುಟ್ಟಿದ ತಕ್ಷಣ ಹೇಳುವ 'ಅಮ್ಮಾ' ಪದವು ಕಾವ್ಯವಾಗಿದೆ. ಹಾಗೆಂದ ಮಾತ್ರಕ್ಕೆ ಎಲ್ಲರೂ ಕವಿಗಳಾಗುವುದಿಲ್ಲ. ಕಾವ್ಯದ ಮೂಲವನ್ನು ಅರಿತರೆ ಮಾತ್ರ ಸಾಹಿತ್ಯ ಒಲಿಯಲು ಸಾಧ್ಯ ಎಂದು ಹೇಳಿದರು.

ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕ ಡಾ.ಬಂಜೆಗೆರೆ ಜಯಪ್ರಕಾಶ್, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ದಸರಾ ಕವಿಗೋಷ್ಠಿ ಕಾರ್ಯಾಧ್ಯಕ್ಷರಾದ ಎನ್.ಕೆ.ಲೋಲಾಕ್ಷಿ, ಉಪವಿಶೇಷಾಧಿಕಾರಿ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿಗಳಾದ ಸಿ.ಕೃಷ್ಣ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಮಾನಸ, ಡಾ.ಹೇಮಲತಾ, ನಂಜಯ್ಯ, ಮೆಲ್ಲಹಳ್ಳಿ ಮಹದೇವಸ್ವಾಮಿ, ಕು. ಆರ್.ಪ್ರಣತಿ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಭಾನುವಾರ 6 ಅಕ್ಟೋಬರ್ 2024



ಮೈಸೂರು ದಸರಾ ಮಹೋತ್ಸವ–2024 ಇಂದಿನ ಕಾರ್ಯಕ್ರಮಗಳು

ಬೆಳಗ್ಗೆ 7.00	:	ಪಾರಂಪರಿಕ ನಡಿಗೆ, ಚಾಲನೆ : ಶಾಸಕ ತನ್ವೀರ್ ಸೇಠ್, ಸ್ಥಳ: ಪುರಭವನ
ಬೆಳಗ್ಗೆ 10.00	:	ಮಕ್ಕಳ ದಸರಾ, ಉದ್ಘಾಟನೆ : ಶಿಕ್ಷಣ ಸಚಿವ ಮಧು ಬಂಗಾರಪ್ಪ, ಸ್ಥಳ:ಕಲಾಮಂದಿರ
ಬೆಳಗ್ಗೆ 10.00	:	ಪೆಟ್ ಅನಿಮಲ್ಸ್ ಶೋ ಸ್ಪರ್ಧೆ, ಉದ್ಘಾಟನೆ : ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಸ್ಥಳ: ಜೆ.ಕೆ. ಮೈದಾನ
ಬೆಳಗ್ಗೆ 10.30	:	ಸಮಾನತಾ ಕವಿಗೋಷ್ಠಿ, ಉದ್ಘಾಟನೆ : ಸಾಹಿತಿ ದೇವು ಪತ್ತಾರ, ಸ್ಥಳ: ಜಗನ್ಮೋಹನ ಅರಮನೆ.
ಸಂಜೆ 4.30	:	ಪೆಟ್ ಅನಿಮಲ್ಸ್ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸ್ಥಳ:ಜೆ.ಕೆ.ಮೈದಾನ.
ಸಂಜೆ 6.00	:	ಯುವ ದಸರಾ, ಉದ್ಘಾಟನೆ : ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಸ್ಥಳ: ಬಯಲು ಮೈದಾನ, ಜ್ವಾಲಾಮುಖಿ ತ್ರಿಪುರಸುಂದರಿ ದೇವಸ್ಥಾನದ ಸಮೀಪ, ಉತ್ತನಹಳ್ಳಿ ರಿಂಗ್ ರಸ್ತೆ. ಖ್ಯಾತ ಬಾಲಿವುಡ್ ಹಿನ್ನೆಲೆ ಗಾಯಕಿ ಶ್ರೇಯಾ ಘೋಷಾಲ್ ಮತ್ತು ತಂಡದಿಂದ ಬಾಲಿವುಡ್ ನೈಟ್ಸ್
ರಾತ್ರಿ 8.00	:	ಬನ್ನಿಮಂಟಪದ ಟಾರ್ಚ್‌ಲೈಟ್ ಪೆರೇಡ್ ಮೈದಾನದಲ್ಲಿ ಡ್ರೋಣ್ ಪ್ರದರ್ಶನ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ
		ಮಹಿಳಾ ದಸರಾ, ಜೆ.ಕೆ. ಮೈದಾನ
ಬೆಳಗ್ಗೆ 10.30	:	ನೆಕ್ಟರ್ ಫ್ರೆಶ್ ಸಂಸ್ಥಾಪಕ ಛಾಯಾ ನಂಜಪ್ಪ ಅವರೊಂದಿಗೆ ಸಂವಾದ
ಬೆಳಗ್ಗೆ 11.30	:	ಜಾನಪದ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು (ಟಿ.ನರಸೀಪುರ ಮತ್ತು ಪಿರಿಯಾಪಟ್ಟಣ ತಾಲೂಕು ಮಹಿಳೆಯರಿಂದ)
ಮಧ್ಯಾಹ್ನ 1.00	:	ಉಮ್ಮತ್ತಾಟ್‌ನ ಪ್ರತಿಪಾದಕರಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ರಾಣಿ ಮಾಚಯ್ಯ ಅವರೊಂದಿಗೆ ಸಂವಾದ (ಕೊಡಗು ಸಾಂಪ್ರದಾಯಿಕ ನೃತ್ಯ)
ಮಧ್ಯಾಹ್ನ 2.30	:	ಮಹಿಳೆಯರಿಂದ ಫ್ಯಾಷನ್ ಶೋ, ಭರತನಾಟ್ಯ ಮತ್ತು ಇತರೆ ಸಾಂಪ್ರದಾಯಿಕ ನೃತ್ಯಗಳು
		ಸಾಂಸ್ಕೃತಿಕ ಕಾರ್ಯಕ್ರಮಗಳು– ಅರಮನೆ ಆವರಣ
ಸಂಜೆ 3.30	:	ಮೈಸೂರಿನ ರೋಲಿಂಗ್ ಮೀಡಿಯಾ ಹೌಸ್ ಅವರಿಂದ 'ದಿ ಕಾನ್ಸ್‌ಟಿಟ್ಯೂಷನ್ ಆಫ್ ಇಂಡಿಯಾ–ಪ್ರಿಯಾಂಬಲ್' ಬಗ್ಗೆ ಜಾನಪದ ನೃತ್ಯ
ಸಂಜೆ 4.00	:	ಡಾ.ಸಂಪದ ಭಟ್ ಮಾರ್ಬಳ್ಳಿ, ಬೆಂಗಳೂರು ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ
ಸಂಜೆ 4.30	:	ಬಿ. ನಾಗರಾಜ್ ಮತ್ತು ತಂಡ ಅವರಿಂದ ಕಥಕ್ ನೃತ್ಯ
ಸಂಜೆ 5.00	:	ಡಾ.ವೈ.ಕೆ. ಮುದ್ದುಕೃಷ್ಣ ಮತ್ತು ತಂಡ, ಬೆಂಗಳೂರು ಅವರಿಂದ ಸುಗಮ ಸಂಗೀತ
ಸಂಜೆ 6.00	:	ವಿದ್ವಾನ್ ಸಿ.ಎಸ್. ಕೇಶವಚಂದ್ರ ಮತ್ತು ತಂಡ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ
ಸಂಜೆ 6.45	:	ಶಿವಲೀಲಾ ಸಾಂಸ್ಕೃತಿಕ ಮತ್ತು ಚಾರಿಟಬಲ್ ಟ್ರಸ್ಟ್ ಅವರಿಂದ 'ಪ್ರಕೃತಿ' ನೃತ್ಯ ರೂಪಕ
ಸಂಜೆ 7.30	:	ವಿದುಷಿ ಸಂಗೀತ ಕಟ್ಟಿ ಮತ್ತು ತಂಡದಿಂದ 'ಕರ್ನಾಟಕ ವೈಭವ' ಗೀತ ಗಾಯನ
ರಾತ್ರಿ 9.00	:	ವಿದುಷಿ ಮಾಂಗ್ಲಿ ಮತ್ತು ತಂಡದಿಂದ ಭಾರತೀಯ ಜಾನಪದ ಭಜನ್ಸ್ ಫ್ಯೂಷನ್
		ಜಗನ್ಮೋಹನ ಅರಮನೆ
ಸಂಜೆ 5.00	:	ಚಂದ್ರಶೇಖರಾಚಾರ್ ಮತ್ತು ತಂಡ, ಮೈಸೂರು ಅವರಿಂದ ರಂಗ ಗೀತೆಗಳು
ಸಂಜೆ 6.00	:	ನೂಪುರ ನೃತ್ಯಾರ್ಪಣಾ (ಇ. ವಿಜಯ್ ಮತ್ತು ತಂಡ) ಅವರಿಂದ ಕುಚಿಪುಡಿ
ಸಂಜೆ 7.00	:	ಶ್ರೀಜನ್ ಆರ್ಟ್ ಅಕಾಡೆಮಿ, ಬೆಂಗಳೂರು ಅವರಿಂದ ಕಥಕ್
ರಾತ್ರಿ 8.00	:	ಕರ್ನಾಟಕ ಸುಗಮ ಸಂಗೀತ ಪರಿಷತ್, ಮೈಸೂರು (ನಾಗರಾಜ್ ವಿ. ಭೈರಿ) ಅವರಿಂದ ಸುಗಮ ಸಂಗೀತ
		ಕಲಾಮಂದಿರ
ಸಂಜೆ 5.00	:	ಅಭಿಷೇಕ್ ಮತ್ತು ತಂಡ, ಮೈಸೂರು ಅವರಿಂದ ನಾದಸ್ವರ
ಸಂಜೆ 5.30	:	ಪ್ರಕಾಶ್ ಸಿಂಗ್ ರಜಪೂತ್ ಮತ್ತು ತಂಡ, ವಿಜಯಪುರ ಅವರಿಂದ ಘಜಲ್
ಸಂಜೆ 6.15	:	ಸಂಸ್ಕೃತಿ ಟ್ರಸ್ಟ್, ಮೈಸೂರು (ಡಾ. ಭುವನೇಶ್ವರಿ) ಅವರಿಂದ ನೃತ್ಯ ರೂಪಕ
ಸಂಜೆ 7.00	:	ಶ್ರೀಮಹಾಗಣಪತಿ ಮಹಿಳಾ ಯಕ್ಷಗಾನ ಸಂಘ, ಮಂಗಳೂರು ಅವರಿಂದ ನೃತ್ಯ ಪ್ರದರ್ಶನ
ರಾತ್ರಿ 8.00	:	ಪದ ತಂಡ, ಬೆಂಗಳೂರು ಅವರಿಂದ ಜಾನಪದ ಗೀತೆಗಳು
ರಾತ್ರಿ 9.00	:	ಲಹರಿ ನಾಟ್ಯ ಕಲಾಶಾಲೆ, ಮೈಸೂರು (ಲಾಸ್ಯ ಎನ್. ಗೌಡ ಮತ್ತು ತಂಡ) ಅವರಿಂದ ಭರತನಾಟ್ಯ
		ಗಾನಭಾರತಿ, ಕುವೆಂಪುನಗರ
ಸಂಜೆ 4.30	:	ಪುಟ್ಟಸ್ವಾಮಿ ಮತ್ತು ತಂಡ, ಮೈಸೂರು ಅವರಿಂದ ಜಾನಪದ ಗೀತೆಗಳು
ಸಂಜೆ 5.15	:	ಪಿ. ಆಕಾಶ್ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ಸಂಜೆ 6.00	:	ವಿದುಷಿ ವಿ. ಬಿಂದು ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ಸಂಜೆ 7.00	:	ಆರ್. ಮೋಹನ್ ಮತ್ತು ತಂಡ, ಮೈಸೂರು ಅವರಿಂದ ಕ್ಲಾರಿಯೋನೆಟ್ ವಾದನ
ರಾತ್ರಿ 8.00	:	ಜೆ.ಎಂ. ಕಾವ್ಯ ಮತ್ತು ತಂಡ, ವಿಜಯನಗರ ಅವರಿಂದ ವಚನ ಗಾಯನ
		ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ
ಸಂಜೆ 4.45	:	ಕೆ.ಪಿ. ನಾರಾಯಣ್ ಮತ್ತು ತಂಡ, ಕೆ.ಆರ್.ನಗರ ಅವರಿಂದ ನಾದಸ್ವರ
ಸಂಜೆ 5.15	:	ಎಂ.ವಿ. ಕೃಷ್ಣಪ್ಪ ಮತ್ತು ತಂಡ, ಕೋಲಾರ ಅವರಿಂದ ಜಾನಪದ ಗೀತೆಗಳು
ಸಂಜೆ 6.00	:	ಆಂಧ್ರ ಗೀತ ಗಾಯನ ಕಲಾಸಂಘ, ಚಿಕ್ಕಮಗಳೂರು (ಎಂ.ಬಿ. ನಾಗರಾಜು) ಅವರಿಂದ ಶಾಸ್ತ್ರೀಯ ಸಂಗೀತ
ಸಂಜೆ 7.00	:	ಜನಚೈತನ್ಯ ಫೌಂಡೇಷನ್, ಮೈಸೂರು (ಲಕ್ಷ್ಮಣ್) ಅವರಿಂದ ಸುಗಮ ಸಂಗೀತ
ರಾತ್ರಿ 8.00	:	ಎ.ಸಿ. ಕುಸುಮ ಮತ್ತು ತಂಡ, ರಾಮನಗರ ಅವರಿಂದ ಭರತನಾಟ್ಯ
ರಾತ್ರಿ 9.00	:	ರವಿಕುಮಾರ್ ಮತ್ತು ತಂಡ, ಕೊಳ್ಳೇಗಾಲ ಅವರಿಂದ ಸುಗಮ ಸಂಗೀತ
		ಚಿಕ್ಕಗಡಿಯಾರ (ಡೆಫರಿನ್ ಟವರ್)
ಸಂಜೆ 5.00	:	ಕೆ.ಎಸ್. ಸವಿತಾ ಮತ್ತು ತಂಡ, ಮಂಡ್ಯ ಅವರಿಂದ ಮಹಿಳಾ ಡೊಳ್ಳು ಕುಣಿತ
ಸಂಜೆ 5.30	:	ನಂದಿನಿ ಮತ್ತು ತಂಡ, ಮಂಡ್ಯ ಅವರಿಂದ ಪಟ ಕುಣಿತ
ಸಂಜೆ 5.45	:	ಎನ್. ಗಜೇಂದ್ರ ಮತ್ತು ತಂಡ, ಬೆಂಗಳೂರು ತಮಟೆ ವಾದನ
ಸಂಜೆ 6.00	:	ಶ್ರೀ ಸಿದ್ದಪ್ಪಾಜಿ ನೀಲಗಾರ ಕಲಾ ಸಂಘ, ಚಾಮರಾಜನಗರ ಅವರಿಂದ ನೀಲಗಾರ ಪದ
ಸಂಜೆ 7.00	:	ಅಲೆಮಾರಿ ಸುಡುನಾಡು ಸಿದ್ಧ ಮಹಾಸಭಾ, ಗಾಂಧಿನಗರ, ಬೆಂಗಳೂರು (ಧನಂಜಯ) ಅವರಿಂದ ಮೋಡಿ ಆಟ
ರಾತ್ರಿ 8.00	:	ಯಲ್ಲಪ್ಪ ಮತ್ತು ತಂಡ, ಬಂಗಾರಪೇಟೆ ಅವರಿಂದ ಜಾನಪದ ಗೀತೆಗಳು
		ಪುರಭವನ
ಬೆಳಗ್ಗೆ 10.30	:	ರಂಗರಥ ಟ್ರಸ್ಟ್, ಬೆಂಗಳೂರು ಅವರಿಂದ 'ಧರ್ಮನತಿ' ನಾಟಕ ಪ್ರದರ್ಶನ
ಮಧ್ಯಾಹ್ನ 1.00	:	ಶ್ರೀ ವಿಘ್ನೇಶ್ವರ ಸಾಂಸ್ಕೃತಿಕ ಚಾರಿಟಬಲ್ ಟ್ರಸ್ಟ್, ಮೈಸೂರು ಅವರಿಂದ 'ಶಿವಲೀಲಾ' ನಾಟಕ ಪ್ರದರ್ಶನ
ಮಧ್ಯಾಹ್ನ 3.00	:	ಮಹಾಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಕೆ. ಹೆಮ್ಮನಹಳ್ಳಿ ಅವರಿಂದ 'ಶಿವಕುಮಾರ ಅಥವಾ ಶೂರಪದ್ಮನ ವಧೆ' ನಾಟಕ ಪ್ರದರ್ಶನ
ಸಂಜೆ 6.00	:	ಸತ್ಯವ್ವ ರಾಮಪ್ಪ ಮಾದಾರ್ ತಂಡ, ಹಿಪ್ಪರಗಿ, ಬಾಗಲಕೋಟೆ ಅವರಿಂದ 'ಶ್ರೀ ಕೃಷ್ಣ ಪಾರಿಜಾತ' ನಾಟಕ ಪ್ರದರ್ಶನ
		ಕಿರು ರಂಗಮಂದಿರ, ಕಲಾಮಂದಿರ ಆವರಣ
ಮಧ್ಯಾಹ್ನ 2.00	:	ವೀಣಾಶಾರದಾ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ಮಧ್ಯಾಹ್ನ 3.00	:	ಕದಂಬ ರಂಗ ವೇದಿಕೆ, ಮೈಸೂರು (ರಾಜಶೇಖರ ಕದಂಬ) ಅವರಿಂದ 'ನೆಮ್ಮದಿ ಅಪಾರ್ಟ್‌ಮೆಂಟ್' ನಾಟಕ ಪ್ರದರ್ಶನ
ರಾತ್ರಿ 7.00	:	ರಂಗದರ್ಶಿನಿ, ಬೆಂಗಳೂರು ಅವರಿಂದ 'ಜಲಗಾರ' ನಾಟಕ ಪ್ರದರ್ಶನ
		ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ
ಸಂಜೆ 5.30	:	ಬಿ.ಎ. ಶಾಂತಾದೇವಿ ಮತ್ತು ತಂಡ, ಮೈಸೂರು ಅವರಿಂದ ರಂಗಗೀತೆಗಳು
ಸಂಜೆ 6.30	:	ಆರ್. ನಿಸರ್ಗ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ಸಂಜೆ 7.30	:	ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರ, ಬೆಂಗಳೂರು (ಆರ್. ವೆಂಕಟರಾಜು) ಅವರಿಂದ 'ನಟರಾಜ' ನಾಟಕ ಪ್ರದರ್ಶನ
		ನಟನ ರಂಗಮಂದಿರ, ರಾಮಕೃಷ್ಣನಗರ
ಸಂಜೆ 5.00	:	ಸುನೀತಾ ಹಿರೇಮಠ್ ಮತ್ತು ತಂಡ, ಕಲಬುರ್ಗಿ ಅವರಿಂದ ವಚನ ಗಾಯನ
ಸಂಜೆ 6.30	:	ನಟನ ರಂಗಶಾಲೆ ರೆಪರ್ಟರಿ ಕಲಾವಿದರಿಂದ 'ಅಡುಗೆ ಮನೆಯಲ್ಲೊಂದು ಹುಲಿ' ನಾಟಕ ಪ್ರದರ್ಶನ (ರಚನೆ : ಬಿ. ಸುರೇಶ್, ನಿರ್ದೇಶನ : ಮೇಘ ಸಮೀರ)
		ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು
ಸಂಜೆ 5.00	:	ಪಿ. ಲೋಕೇಶ್ ಮತ್ತು ತಂಡದಿಂದ ಕಂಸಾಳೆ
ಸಂಜೆ 5.30	:	ವಿ.ಎಸ್. ಕಿರಣ್ ಮತ್ತು ತಂಡದಿಂದ ಡೊಳ್ಳು ಕುಣಿತ
ಸಂಜೆ 6.00	:	ಡಿ.ಎಸ್. ಸಾಗರ್ ಮತ್ತು ತಂಡ, ನಂಜನಗೂಡು ಅವರಿಂದ ಜಾನಪದ ಗೀತೆಗಳು
ಸಂಜೆ 7.00	:	ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ, ಮಂಡ್ಯ (ಡೇವಿಡ್) ಅವರಿಂದ ಸುಗಮ ಸಂಗೀತ
ರಾತ್ರಿ 8.00	:	ಆರ್. ಭುವನ್ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ರಾತ್ರಿ 8.30	:	ಶ್ರೀಲತಾ ಹುಳಿಯಾರು, ಮೈಸೂರು ಅವರಿಂದ ಹರಿಕಥೆ

ಪ್ರತಿದಿನದ ಆಕರ್ಷಣೆ

ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಪ್ಪಣ್ಣ ಪಾರ್ಕ್	–	ಬೆಳಗ್ಗೆ 9 ರಿಂದ ರಾತ್ರಿ 8.30
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಲಿಂಗಾಂಬುದಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಕ್ಕರಹಳ್ಳಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ಪುಸ್ತಕ ಮೇಳ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ	–	ಬೆಳಗ್ಗೆ 10 ರಿಂದ ರಾತ್ರಿ 7
ದಸರಾ ವಸ್ತುಪ್ರದರ್ಶನ, ಸ್ಥಳ: ವಸ್ತುಪ್ರದರ್ಶನ ಮೈದಾನ	–	ಮಧ್ಯಾಹ್ನ 2.30 ರಿಂದ ರಾತ್ರಿ 8.30
ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ	–	ಬೆಳಗ್ಗೆ 11 ರಿಂದ ರಾತ್ರಿ 9
ರೈಲ್ ಮ್ಯೂಸಿಯಂ	–	ಬೆಳಗ್ಗೆ 10 ರಿಂದ ರಾತ್ರಿ 8

ಆಧುನಿಕ ತಂತ್ರಜ್ಞಾನದಿಂದ ಕೃಷಿ ಕ್ಷೇತ್ರ ಲಾಭದಾಯಕ ಮಾಡಬಹುದು

ರೈತ ದಸರಾ ಉದ್ಘಾಟಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಮತ



ಮೈಸೂರಿನ ಜೆ.ಕೆ.ಮೈದಾನದ ಅಮೃತ ಮಹೋತ್ಸವ ಸಭಾಂಗಣದಲ್ಲಿ ರೈತ ದಸರಾ ಉಪಸಮಿತಿ ಆಯೋಜಿಸಿದ್ದ ರೈತ ದಸರಾವನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು. ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಕೆ.ಹರೀಶ್‌ಗೌಡ, ರಮೇಶ್‌ಬಾಬು ಬಂಡಿಸಿದ್ದೇಗೌಡ ಇನ್ನಿತರರಿದ್ದಾರೆ.

ಮೈಸೂರು, ಅ.5(ಎಂಟಿವೈ)– ಆಧುನಿಕ ತಂತ್ರಜ್ಞಾನ ಬಳಕೆಯಿಂದ ಕೃಷಿ ಕ್ಷೇತ್ರ ಲಾಭದಾಯಕವಾಗಿಸುವ ಅವಕಾಶವಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರಿನ ಜೆ.ಕೆ.ಮೈದಾನದ ಅಮೃತ ಮಹೋತ್ಸವ ಸಭಾಂಗಣದಲ್ಲಿ ಶನಿವಾರ ರೈತ ದಸರಾ ಉದ್ಘಾಟಿಸಿ ಮಾತನಾಡಿ, ಕೃಷಿ ಕ್ಷೇತ್ರವೂ ಸುಸ್ಥಿರ ಅಭಿವೃದ್ಧಿ ಸಾಧಿಸಬಹುದಾಗಿದೆ. ರೈತರು ನಿರಾಸೆಗೊಳ್ಳಬಾರದು, ಕೃಷಿಯನ್ನು ಲಾಭದಾಯಕವಾಗಿ ಮಾಡಬಹುದು. ಅದರಿಂದ ಸುಖ ಜೀವನ ನಡೆಸಬಹುದು. ಕೃಷಿ, ತೋಟಗಾರಿಕೆ, ಮೀನು ಸಾಕಾಣಿಕೆ ಮತ್ತು ಪಶು ಸಂಗೋಪನೆಯಲ್ಲಿ ಎಷ್ಟು ಸಾಧ್ಯವೋ ಅಷ್ಟು ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಪ್ರಗತಿಪರ ರೈತರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡು ಅವರ ಸಲಹೆ ಪಡೆದುಕೊಂಡರೆ ಪ್ರಗತಿ ಸಾಧ್ಯ ಎಂದರು.

ಅತಿವೃಷ್ಟಿ–ಅನಾವೃಷ್ಟಿ ನಮ್ಮ ಕೈಯಲ್ಲಿ ಇಲ್ಲ. ಆದರೆ, 'ಸಿದ್ದರಾಮಯ್ಯ ಅಧಿಕಾರಕ್ಕೆ ಬಂದರೆ ಮಳೆ ಆಗಲ್ಲ' ಎಂಬ ಪ್ರತಿಪಕ್ಷಗಳ ಹೇಳಿಕೆ ಬಾಯಿ ಚಪಲದ ಮಾತು. ಈ ಸಲ ಉತ್ತಮ ಮಳೆಯಾಗಿದೆ. ಇವರ ಮಾತಿಗೆ ತಲೆಕೆಡಿಸಿಕೊಳ್ಳಬಾರದು. ಪಂಚ ಗ್ಯಾರಂಟಿ ಯೋಜನೆ ಜಾರಿ ಸಾಧ್ಯವಿಲ್ಲ ಎಂದು ಹೇಳಿದ್ದರು. ಅದನ್ನು ಸಾಧ್ಯ ಮಾಡಿ ತೋರಿಸಿದ್ದೇವೆ. ಇದರ ಲಾಭ ಪಡೆದ ಫಲಾನುಭವಿಗಳು ಖುಷಿಯಾಗಿದ್ದಾರೆ. ಆದಾಗ್ಯೂ ಅವರಿಗೆ ಸಮಾಧಾನ ಇಲ್ಲ ಎಂದು ಬಿಜೆಪಿ, ಜೆಡಿಎಸ್ ನಾಯಕರಿಗೆ ಕುಟುಕಿದರು.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ದಸರಾ ಮಹೋತ್ಸವದ ಸಂದರ್ಭದಲ್ಲಿ ಅರ್ಥಪೂರ್ಣವಾಗಿ ರೈತ ದಸರಾ ಆಚರಿಸುವ ಮೂಲಕ ಕೃಷಿ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ರೈತರು ದಸರಾ ಮಹೋತ್ಸವದಲ್ಲಿ ಒಳಗೊಳ್ಳುವಂತೆ ಕಾರ್ಯಕ್ರಮ ರೂಪಿಸುತ್ತಿರುವುದು ಶ್ಲಾಘನೀಯ. ರೈತರು ಎಂದಿಗೂ ವೈಯಕ್ತಿಕವಾಗಿ ಏನನ್ನೂ ಬಯಸುವುದಿಲ್ಲ. ಅವರ ಬದುಕು ದಿನೇ ದಿನೇ ಕಷ್ಟಕರವಾಗುತ್ತಲೇ ಇದೆ. ಕೃಷಿ ಚಟುವಟಿಕೆಯಲ್ಲಿ ಉತ್ಪಾದನಾ ವೆಚ್ಚ, ಖರ್ಚು ಹೆಚ್ಚಾಗುತ್ತಿದೆ. ಆದಾಯ ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮಲ್ಲಿ ಲಭ್ಯವಿರುವ ಹೊಸ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಕೃಷಿ ಕ್ಷೇತ್ರದ ಏಳಿಗೆ ಸಾಧಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ರೈತರಿಗೆ ಸನ್ಮಾನ: ಇದೇ ವೇಳೆ ಹಾಸ್ಯದ ಹೆಚ್.ಬಿ.ಜಗದೀಶ್, ಗೋಪಾಲಪುರದ ವಿಶ್ವನಾಥ್, ಪಿ.ಬಸವನಹಳ್ಳಿಯ ಬಿ.ಎ.ಪ್ರಕಾಶ್, ತೋಟಗಾರಿಕಾ ವಿಭಾಗದಲ್ಲಿ ನುಗ್ಗಹಳ್ಳಿಯ ಶಿವಣ್ಣ, ಕೊಳಗಾಲದ ಎಸ್.ಲಿಂಗರಾಜೇ ಅರಸ್, ಸಿದ್ದಯ್ಯನಹುಂಡಿಯ ಎಸ್.ಮಂಜುನಾಥ್, ಪಶು ಸಂಗೋಪನೆ ವಿಭಾಗದಲ್ಲಿ ದೇವನೂರು ಸುಹಾಸ್ ಶ್ರೀಧರ್, ನವಿಲೂರಿನ ಎಸ್.ಡಿ. ಮಹದೇವ, ಬೊಮ್ಮನಾಯಕನಹಳ್ಳಿಯ ಮಂಜುಳ, ರೇಷ್ಮೆ ವಿಭಾಗದಲ್ಲಿ ವಿಜಯಪುರದ ರಮೇಶ್, ಅತ್ತಿಗುಪ್ಪೆಯ ಬಿ.ಆರ್.ಮಹದೇವ, ಕೆ.ಆರ್.ನಗರ ತಾಲೂಕಿನ ಕೆ.ಸಿ.ವಿಜಯಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ರಮೇಶ್‌ಬಾಬು ಬಂಡಿಸಿದ್ದೇಗೌಡ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ರೈತ ದಸರಾ ಉಪ ಸಮಿತಿ ಅಧ್ಯಕ್ಷ ಕರಿಗೌಡ, ಪಶು ಸಂಗೋಪನಾ ಇಲಾಖೆಯ ಉಪ ನಿರ್ದೇಶಕ ನಾಗರಾಜ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಕೆ.ಹೆಚ್.ರವಿ, ರೈತ ದಸರಾದ ಉಪಾಧ್ಯಕ್ಷರಾದ ಜಾಕಿರ್ ಹುಸೇನ್, ಶಿವಕುಮಾರ್, ಮಂಜುನಾಥ್ ಹೆಚ್.ಎಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> "ರೈತರು ದೇಶದ ಬೆನ್ನೆಲುಬು. ಅವರು ಅವಲಂಬಿಸಿರುವ ಕೃಷಿ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ. ಬಜೆಟ್‌ನಲ್ಲಿ ಕಲ್ಪಿಸಿರುವುದರಲ್ಲಿ ಶೇ.99ರಷ್ಟು ಅನುದಾನ ಬಳಕೆ ಮಾಡಿಕೊಳ್ಳಲಾಗಿದೆ. ಕೃಷಿ ಇಲಾಖೆ ವತಿಯಿಂದ ಕಳೆದ ಸಾಲಿನಲ್ಲಿ 1000 ಕೋಟಿ ರೂ. ವೆಚ್ಚದಲ್ಲಿ ಕೃಷಿ ಯಂತ್ರೋಪಕರಣಗಳನ್ನು ವಿತರಣೆ ಮಾಡಲಾಗಿದೆ. ಫ್ರೂಟ್ಸ್ ತಂತ್ರಾಂಶದ ಮೂಲಕ ವಿವಿಧ ಇಲಾಖೆಗಳ ಸಹಾಯಧನವನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ತಲುಪಿಸಲಾಗುತ್ತಿದೆ. ಮಧ್ಯವರ್ತಿ ಹಾವಳಿ ತಡೆಯಲಾಗಿದೆ. ಈಗ ಕೃಷಿಕರು ತೃಪ್ತಿಯಾಗಿದ್ದಾರೆ. ಆದರೆ, ಪ್ರತಿಪಕ್ಷಗಳಿಗೆ ತೃಪ್ತಿಯಾಗಿಲ್ಲ. ಅವರ ಹೊಟ್ಟೆನೋವಿಗೆ ಚುಚ್ಚುಮದ್ದು ಕೊಟ್ಟರೂ ಸರಿಯಾಗಲ್ಲ. **–ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ**

ಕೃಷಿ ಬಗ್ಗೆ ಜಾಗೃತಿ ಮೂಡಿಸಿದ ರೈತ ದಸರಾ ಮೆರವಣಿಗೆ



ರೈತ ದಸರಾ ಮೆರವಣಿಗೆಯಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಎತ್ತಿನ ಗಾಡಿ ಸವಾರಿ ಮಾಡುತ್ತಿರುವುದು.

ಮೈಸೂರು, ಅ.5(ಎಂಟಿವೈ)– ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಮೈಸೂರಲ್ಲಿ ರೈತ ದಸರಾ ಅಂಗವಾಗಿ ಆಯೋಜಿಸಿದ್ದ ಮೆರವಣಿಗೆ ಹಾಗೂ ಕೃಷಿ ಪರಿಕರ, ಜಾನುವಾರುಗಳ ಪ್ರದರ್ಶನ ಗಮನ ಸೆಳೆಯಿತು.

ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಶನಿವಾರ ಬೆಳಗ್ಗೆ ಆಯೋಜಿಸಿದ್ದ ರೈತ ದಸರಾ ಮೆರವಣಿಗೆಗೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು. ಬಳಿಕ ಎತ್ತಿನ ಗಾಡಿ ಓಡಿಸಿ ಗಮನ ಸೆಳೆದರು. ಕೆ.ಆರ್.ವೃತ್ತ, ದೇವರಾಜ ಅರಸು ರಸ್ತೆಯ ಮೂಲಕ ಮೆರವಣಿಗೆ ಜೆ.ಕೆ.ಗ್ರೌಂಡ್‌ಗೆ ತಲುಪಿತು. ಮೆರವಣಿಗೆಯಲ್ಲಿ ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆಯ ಸ್ತಬ್ಧಚಿತ್ರಗಳ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಜಾಗೃತಿ ಮೂಡಿಸಿದವು. ನಂದಿ ಧ್ವಜ, ನಗಾರಿ ಹಾಗೂ ತಮಟೆ, ವೀರಗಾಸೆ, ವೀರಭದ್ರ ಕುಣಿತ, ಚಿಲಿಪಿಲಿ ಗೊಂಬೆ, ನಾದಸ್ವರ ಪೂಜೆ ಕುಣಿತ, ಟಿಬೆಟಿಯನ್ ನೃತ್ಯ ಸೇರಿದಂತೆ ವಿವಿಧ ಜಾನಪದ ಕಲಾ ಪ್ರಕಾರಗಳ ತಂಡ ಮೆರವಣಿಗೆಯುದ್ದಕ್ಕೂ ಪ್ರದರ್ಶನ ನೀಡಿ ಮೆರುಗು ತುಂಬಿದರು.

ಮೆರವಣಿಗೆಯಲ್ಲಿ ಔಷಧ ಸಿಂಪಡಣೆ ಮಾಡುವ ಬೂಮ್ ಸ್ಪ್ರೇಯರ್ ವಾಹನ, ಹೊಸ ಕೃಷಿ ತಂತ್ರಜ್ಞಾನಗಳಾದ ಡ್ರೋನ್–2 (ಕೃಷಿ ಔಷಧ ಸಿಂಪಡಣ ಡ್ರೋಣ್), ಕಬ್ಬು ಕಟಾವು ಯಂತ್ರ, ಕಬ್ಬು ನಾಟಿ ಯಂತ್ರ, ಕಂಬೈಟಡ್, ಹಾರ್ವೆಸ್ಟರ್, ಮಿನಿ ಕಾಟರ್, ಬಯೋ ಜಾರ್ ಯಂತ್ರಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಅಳಿವಿನಂಚಿನ ತಳಿಗಳ ಪ್ರದರ್ಶನ: ಜೆ.ಕೆ.ಮೈದಾನದಲ್ಲಿ ಆಯೋಜಿಸಿರುವ ಪ್ರದರ್ಶನದಲ್ಲಿ ಹಳ್ಳಿಕಾರ್, ಬಂಡೂರು ಕುರಿ, ಗಿರ್, ಓಂಗೋಲ್, ಪುಂಗನೂರು ಹಾಗೂ ಇನ್ನಿತರ ತಳಿಗಳ ರಾಸುಗಳನ್ನು ಪ್ರದರ್ಶನಕ್ಕಿಡಲಾಗಿದೆ. ಇದಕ್ಕೂ ಮುನ್ನ ಈ ತಳಿಗಳ ಜಾನುವಾರುಗಳನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ಪ್ರದರ್ಶನದಲ್ಲಿ ಕೃಷಿ ಪರಿಕರಗಳು, ಯಂತ್ರೋಪಕರಣಗಳು ಸೇರಿದಂತೆ ಇನ್ನಿತರ ವಸ್ತುಗಳ ಮಾರಾಟ ಮತ್ತು ಪ್ರದರ್ಶನಕ್ಕಿಡಲಾಗಿದೆ.

ಸಾಂಪ್ರದಾಯಿಕ ಉಡುಗೆಯೊಂದಿಗೆ ದಂಪತಿಗಳ ಟಾಂಗಾ ಸವಾರಿ



ಮೈಸೂರಿನಲ್ಲಿ ದಂಪತಿಗಳು ಸಾಂಪ್ರದಾಯಿಕ ಉಡುಗೆ ಧರಿಸಿ ಪಾರಂಪರಿಕ ಟಾಂಗಾ ಸವಾರಿ ಮಾಡಿದರು.

ಮೈಸೂರು, ಅ. 5(ಆರ್‌ಕೆ)– ದಂಪತಿಗಳು ಸಾಂಪ್ರದಾಯಿಕ ಉಡುಗೆ ಧರಿಸಿ ಮೈಸೂರಿನಲ್ಲಿ ಇಂದು ಪಾರಂಪರಿಕ ಟಾಂಗಾ ಸವಾರಿ ಮಾಡಿದರು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 50 ದಂಪತಿ, ಮೈಸೂರು ಪೇಟ, ಶಲ್ಯ, ಪಂಚೆ, ಸೀರೆ ಸಾಂಪ್ರದಾಯಿಕ ಉಡುಗೆಯೊಂದಿಗೆ ಅಲಂಕೃತ ಟಾಂಗಾ ಸವಾರಿ ಮಾಡಿ ಮೈಸೂರಿನ ಪಾರಂಪರಿಕ ಕಟ್ಟಡ, ಸ್ಮಾರಕಗಳನ್ನು ವೀಕ್ಷಿಸಿದರು.

ಬೆಳಗ್ಗೆ 7.15 ಗಂಟೆ ವೇಳೆಗೆ ಪುರಭವನ ಆವರಣದಿಂದ ಆರಂಭವಾದ ಪಾರಂಪರಿಕ ಟಾಂಗಾ ಸವಾರಿಯು, ದೊಡ್ಡ ಗಡಿಯಾರ, ಫ್ರೀ ಮೇಸನ್ ಕಟ್ಟಡ, ಅರಮನೆ, ಕೆಆರ್ ಸರ್ಕಲ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಜಗನ್ಮೋಹನ ಅರಮನೆ, ಪರಕಾಲಮಠ, ಶೇಷಾದ್ರಿ ನಿವಾಸ (ವಾಣಿಜ್ಯ ತೆರಿಗೆ ಕಚೇರಿ), ಲೋಕಾಯುಕ್ತ ಕಚೇರಿ, ಹಳೇ ಡಿಸಿ ಆಫೀಸ್, ಓರಿಯೆಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಕ್ರಾಫರ್ಡ್ ಹಾಲ್ ಸೇರಿದಂತೆ ಪ್ರಮುಖ ಪಾರಂಪರಿಕ ಕಟ್ಟಡಗಳಿಗೆ ತೆರಳಿ ವೀಕ್ಷಿಸಿದರು. ಪ್ರಾಚೀನ ಇತಿಹಾಸ ತಜ್ಞರಾದ ಪ್ರೊ.ಎನ್.ಎಸ್.ರಂಗರಾಜು, ಪ್ರೊ.ಮ.ನಾ.ಸ್ವಾಮಿ, ಪರಂಪರೆ ಆಯುಕ್ತ ಎ.ದೇವರಾಜು, ಉಪನಿರ್ದೇಶಕಿ ಮಂಜುಳಾ, ಇಂಜಿನಿಯರ್‌ಗಳು ಹಾಗೂ ಸಿಬ್ಬಂದಿ ಈ ಸಂದರ್ಭ ಉಪಸ್ಥಿತರಿದ್ದರು.

ಕಣ್ಮನ ಸೆಳೆಯುತ್ತಿದೆ ದಸರಾ ಬೊಂಬೆಗಳ ಪ್ರದರ್ಶನ



ಸ್ಥಾನೀಕರ ಮನೆಯಲ್ಲಿ ಕಣ್ಮನ ಸೆಳೆಯುತ್ತಿರುವ ದಸರಾ ಗೊಂಬೆಗಳ ಪ್ರದರ್ಶನ.

ಮೇಲುಕೋಟೆ, ಅ.5– ದೇಗುಲಗಳ ಪುಣ್ಯಕ್ಷೇತ್ರ ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದ ಸ್ಥಾನೀಕರ ನಿವಾಸದಲ್ಲಿ ದಸರಾ ಗೊಂಬೆಗಳ ಪ್ರದರ್ಶನ ಮೇಳೈಸಿದ್ದು ನೋಡುಗರ ಕಣ್ಮನ ಸೆಳೆಯುತ್ತಿದೆ.

ದೇವಾಲಯದ ಹಿಂಭಾಗದ ಕೋವಿಲ್ ನಂಬಿ ಲಕ್ಷ್ಮೀನರಸಿಂಹನ್, ಸಂಗೀತಾ ದಂಪತಿಗಳು ನವರಾತ್ರಿ ಅಂಗವಾಗಿ ಜೋಡಿಸಿರುವ ಮಣ್ಣಿನ ಸಾವಿರಾರು ಗೊಂಬೆಗಳು ಭಾರತೀಯ ಸಂಸ್ಕೃತಿ, ಆಚಾರ–ವಿಚಾರ, ಧಾರ್ಮಿಕ ಪರಂಪರೆಯನ್ನು ಅನಾವರಣಗೊಳಿಸಿವೆ. ಹಿಂದೂ ಸಂಸ್ಕೃತಿಯಲ್ಲಿ ನವರಾತ್ರಿ ವೇಳೆ ಬೊಂಬೆಗಳನ್ನು ಜೋಡಿಸಿ ಪೂಜಿಸುವ ಸಂಪ್ರದಾಯವಿದ್ದು, ಆಧುನಿಕ ಜೀವನ ಶೈಲಿಯ ಜಂಜಾಟದಲ್ಲಿ ಈ ಪರಂಪರೆ ನಶಿಸಿಹೋಗುತ್ತಿದೆ. ಕೆಲವೇ ಕೆಲವು ಮಂದಿ ಈ ಪರಂಪರೆಯಲ್ಲಿ ತೊಡಗಿಸಿಕೊಂಡಿದ್ದು, ಅಂತಹವರಲ್ಲಿ ಲಕ್ಷ್ಮೀನರಸಿಂಹನ್ ದಂಪತಿ ಮುಂಚೂಣಿಯಲ್ಲಿದ್ದು ಪರಂಪರೆಯಿಂದ ನಡೆದು ಬಂದ ನವರಾತ್ರಿಯ ಗೊಂಬೆಗಳ ಹಬ್ಬಕ್ಕೆ ತಮ್ಮ ಮನೆಯಲ್ಲಿ 15 ವರ್ಷಗಳಿಂದ ಹೊಸ ಮೆರಗು ನೀಡಿದ್ದಾರೆ. 100 ಗೊಂಬೆಗಳಿಂದ ಆರಂಭವಾದ ಪ್ರದರ್ಶನದಲ್ಲಿ ಇಂದು ಎರಡು ಸಾವಿರಕ್ಕೂ ಅಧಿಕ ಗೊಂಬೆಗಳು ಸ್ಥಾನ ಪಡೆದುಕೊಂಡಿರುವುದು ಅವರ ಹವ್ಯಾಸಕ್ಕೆ ಸಾಕ್ಷಿಯಾಗಿದೆ.

ಪ್ರತಿನಿತ್ಯ ರಾತ್ರಿ 7ಕ್ಕೆ ಗೊಂಬೆಗಳಿಗೆ ಸಾಂಪ್ರದಾಯಿಕವಾಗಿ ಆರತಿ ಮಾಡಲಾಗುತ್ತದೆ. ಗೊಂಬೆಗಳನ್ನು ನೋಡಲು ಬಂದ ಎಲ್ಲರಿಗೂ ಗೊಂಬೆಗಳಿಗೆ ನೈವೇದ್ಯ ಮಾಡಿದ ಪ್ರಸಾದವನ್ನು ವಿತರಿಸಲಾಗುತ್ತದೆ. ಭಾರತೀಯ ಸಂಸ್ಕೃತಿ ಬಿಂಬಿಸುವ ಹಾಡು ಹೇಳುವವರಿಗೆ ದಕ್ಷಿಣೆಯಾಗಿ ರವಿಕೆಕಣದೊಂದಿಗೆ ಫಲತಾಂಬೂಲ ನೀಡುವ ಸಂಪ್ರದಾಯ ಅನುಸರಿಸುತ್ತಿದ್ದಾರೆ. ಗೊಂಬೆಗಳ ಪ್ರದರ್ಶನ ವಿಜಯದಶಮಿವರೆಗೆ ಇರಲಿದ್ದು ಬೆಳಿಗ್ಗೆ 9 ರಿಂದ ರಾತ್ರಿ 9ರವರೆಗೆ ಗೊಂಬೆಗಳ ವೈಭವವನ್ನು ಕಣ್ತುಂಬಿಕೊಳ್ಳಬಹುದು

ಶ್ರೀರಂಗಪಟ್ಟಣದ ದಸರಾದಲ್ಲಿ ಮಹಿಳೆಯರ ಝಲಕ್

ರಂಗೋಲಿ, ಮೆಹಂದಿ ಸ್ಪರ್ಧೆ, ನಾಟಕ, ಜಾನಪದ ನೃತ್ಯದ ಆಕರ್ಷಣೆ

ಶ್ರೀರಂಗಪಟ್ಟಣ, ಅ.5–ಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಾಲಯದ ಶ್ರೀರಂಗ ವೇದಿಕೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮಹಿಳಾ ದಸರಾ ಕಾರ್ಯಕ್ರಮ ನಡೆಯಿತು. ರಂಗೋಲಿ ಸ್ಪರ್ಧೆ, ಮೆಹಂದಿ ಸ್ಪರ್ಧೆ, ಬಾಲ್ಯವಿವಾಹ ನಿಷೇಧ ಕುರಿತು ಗೀತೆ, ಮಕ್ಕಳ ಕಳ್ಳ ಸಾಗಾಣಿಕೆ ತಡೆಗಟ್ಟುವ ಕುರಿತು ನಾಟಕ, ಜಾನಪದ ನೃತ್ಯ ಕಾರ್ಯಕ್ರಮಗಳು ಗಮನ ಸೆಳೆಯಿತು.

ಪಟ್ಟಣದ ತಾಲೂಕು ಕಚೇರಿ ಒಳಾಂಗಣದಲ್ಲಿ ನಡೆದ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ–ಶ್ವೇತಶ್ರೀ.ಎನ್.ಜಿ, ದ್ವಿತೀಯ–ಮಾನಸ ಎಸ್.ಪೂರ್ಣಿಮಾ, ತೃತೀಯ–ಶಾಲಿನಿ ಅವರಿಗೆ ವೇದಿಕೆಯಲ್ಲಿ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಮೆಹಂದಿ ಸ್ಪರ್ಧೆಯಲ್ಲಿ ಪ್ರಥಮ–ಸಮ್ರೀನ್ ತಾಜ್, ದ್ವಿತೀಯ–ಅನುಷ.ಎಸ್, ತೃತೀಯ–ಶಾಲಿನಿ ಪಾಲಹಳ್ಳಿ ಅವರಿಗೆ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಮಹಿಳಾ ದಸರಾ ಅಂಗವಾಗಿ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಮಹಿಳೆಯರಿಗಾಗಿ ಮ್ಯೂಸಿಕಲ್ ಚೇರ್, ಲೆಮನ್ ಅಂಡ್ ಸ್ಪೂನ್, ಗುಂಡು ಎಸೆತ, ಓಟ, ಸ್ಪರ್ಧೆ, ಹಗ್ಗ ಜಿಗಿತ, ಮಡಿಕೆ ಹೊಡೆತ, ವೇಷಭೂಷಣ ಸೇರಿದಂತೆ ಇನ್ನಿತರ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ವಿಜೇತರಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ವಿತರಿಸಲಾಯಿತು.

ಜೊತೆಗೆ ಬಾಲ್ಯವಿವಾಹ ನಿಷೇಧ ಕುರಿತು ಗೀತೆ, ಮಕ್ಕಳ ಕಳ್ಳ ಸಾಗಾಣಿಕೆ ತಡೆಗಟ್ಟುವ ಕುರಿತು ನಾಟಕ, ಜಾನಪದ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲರ ಗಮನ ಸೆಳೆದರು.



ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಎಸ್.ರಾಜಮೂರ್ತಿ, ತಹಸೀಲ್ದಾರ್ ಪರುಶುರಾಮ್ ಸತ್ತಿಗೇರಿ, ತಾ.ಪಂ ಇಓ ವೇಣು, ಸಮಾಜ ಕಲ್ಯಾಣ ಇಲಾಖೆಯ ಮೇಘ, ಪಾಂಡವಪುರ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪೂರ್ಣಿಮಾ ಸೇರಿದಂತೆ ಇತರರು ಇದ್ದರು.

ಗಾಂಧೀಜಿ ಇನ್ನಷ್ಟು ವರ್ಷ ಬದುಕಿದ್ದರೆ ರಾಷ್ಟ್ರ ಮದ್ಯಪಾನ ಮುಕ್ತವಾಗುತ್ತಿತ್ತು

ಪಾಂಡವಪುರ: ಸ್ವಾತಂತ್ರ್ಯದ ನಂತರ ಮಹಾತ್ಮಗಾಂಧೀಜಿ ಅವರು ಇನ್ನಷ್ಟು ವರ್ಷಗಳ ಕಾಲ ಬದುಕಿದ್ದರೆ ಭಾರತ ಮದ್ಯಪಾನ ಮುಕ್ತ ರಾಷ್ಟ್ರವಾಗುತ್ತಿತ್ತು ಎಂದು ಧರ್ಮಸ್ಥಳ ಸಂಸ್ಥೆಯ ಜನಜಾಗೃತಿ ಪ್ರಾದೇಶಿಕ ನಿರ್ದೇಶಕ ವಿವೇಕ್ ವಿನ್ಸೆಂಟ್ ಪಾಯಸ್ ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪಾಂಡವಪುರ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯು ಗಾಂಧಿ ಜಯಂತಿಯ ಸಂಭ್ರಮಾಚರಣೆಯ ಪ್ರಯುಕ್ತ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ 'ಗಾಂಧಿಸ್ಮೃತಿ, ಜನಜಾಗೃತಿ ಜಾಥಾ ಮತ್ತು ಪಾನಮುಕ್ತರ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಜನಜಾಗೃತಿ ಜಾಥಾಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಚಾಲನೆ ನೀಡಿದರು. ಇದೇ ವೇಳೆ ಮಧ್ಯವರ್ಜನ ಶಿಬಿರದ ಮೂಲಕ ಹೊಸ ಬದುಕು ಕಟ್ಟಿಕೊಂಡು ಹಲವು ಮಂದಿ ಯನ್ನು ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಹಂದನಹಳ್ಳಿ ಸೋಮಶೇಖರ್, ಉಪಾಧ್ಯಕ್ಷ ಅಶ್ವಥ್‌ಕುಮಾರೇಗೌಡ, ಪುರಸಭೆ ಅಧ್ಯಕ್ಷೆ ಜ್ಯೋತಿಲಕ್ಷ್ಮಿ, ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕ ಎಲ್.ಮುರುಳಿಧರ್, ಕಾನೂನು ಸಲಹೆಗಾರೆ ಪವಿತ್ರಶ್ರೀಧರ್, ಎಸ್.ಎ.ಮಲ್ಲೇಶ್, ಯೋಜನಾಧಿಕಾರಿಗಳಾದ ಸರೋಜ, ಎಸ್.ಯಶ್ವಂತ್ ಭಾಗವಹಿಸಿದ್ದರು.



ಪಾಂಡವಪುರದಲ್ಲಿ ಗಾಂಧಿಸ್ಮೃತಿ, ಜನಜಾಗೃತಿ ಜಾಥಾಕ್ಕೆ ಚಾಲನೆ ನೀಡಲಾಯಿತು.

ಕರಿಘಟ್ಟದಲ್ಲಿ ಬೆಟ್ಟ ಹತ್ತುವ ಸ್ಪರ್ಧೆಗೆ ಚಾಲನೆ



ಶ್ರೀರಂಗಪಟ್ಟಣ,ಅ.5–ಶ್ರೀರಂಗಪಟ್ಟಣ ದಸರಾ ಅಂಗವಾಗಿ ಬೆಟ್ಟ ಹತ್ತುವ ಸ್ಪರ್ಧೆಗೆ (ಚಾರಣ) ಉಪ ವಿಭಾಗಾಧಿಕಾರಿ ಶಿವಮೂರ್ತಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಬೆಟ್ಟ ಹತ್ತಲು ವಾತಾವರಣ ತುಂಬಾ ಚೆನ್ನಾಗಿದೆ, ಸ್ವಲ್ಪ ಮಟ್ಟಿಗೆ ಮಳೆ ಆಗಿರುವುದರಿಂದ ಬೆಟ್ಟ ಹತ್ತುವ ಸಂದರ್ಭದಲ್ಲಿ ಜಾರುವ ಸಾಧ್ಯತೆ ಇದೆ. ಆದ್ದರಿಂದ ಭಾಗವಹಿಸುವ ಎಲ್ಲಾ ಸ್ಪರ್ಧಿಗಳು ಜಾಗರೂಕವಾಗಿ ಬೆಟ್ಟ ಹತ್ತಬೇಕು ಎಂದು ಸಲಹೆ ನೀಡಿದರು.

ಸ್ಪರ್ಧೆ ಕರಿಘಟ್ಟ ಬೆಟ್ಟದ ಪಾದದಿಂದ ದೇವಸ್ಥಾನದವರೆಗೆ ನಡೆಯಿತು, ಸ್ಪರ್ಧೆಯನ್ನು 29 ವರ್ಷ ಒಳಗಿನ ಯುವಕ, ಯುವತಿಯರು ಹಾಗೂ 30 ವರ್ಷ ಮೇಲ್ಪಟ್ಟ ಪುರುಷ ಮತ್ತು ಮಹಿಳೆಯರಿಗೆ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಸುಮಾರು 150ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

30 ವರ್ಷ ಮೇಲ್ಪಟ್ಟ ಮಹಿಳೆಯರಲ್ಲಿ ಪ್ರಥಮ ಸ್ಥಾನ–ವಿಜಯ ಎಸ್.ಜಿ, ದ್ವಿತೀಯ ಸ್ಥಾನ ಶಾಂತಕುಮಾರಿ, ತೃತೀಯ ಸ್ಥಾನ ಎನ್.ಆರ್.ಶೋಭಾ, ಪುರುಷರಲ್ಲಿ ಪ್ರಥಮ ಸ್ಥಾನ–ನವೀನ ಟಿ.ಸಿ, ದ್ವಿತೀಯ ಸ್ಥಾನ–ಅಭಿಷೇಕ್.ಎಸ್.ಡಿ, ತೃತೀಯ ಸ್ಥಾನ–ಹರೀಶ್

29ವರ್ಷ ಒಳಪಟ್ಟ ಮಹಿಳೆಯರಲ್ಲಿ ಪ್ರಥಮ ಸ್ಥಾನ–ಜಯಶ್ರೀ ಎಸ್, ದ್ವಿತೀಯ ಸ್ಥಾನ– ಮಾನಸ ಎಸ್.ಆರ್, ತೃತೀಯ–ದಿವ್ಯ ಹಾಗೂ ಪುರುಷರಲ್ಲಿ ಪ್ರಥಮ ಸ್ಥಾನ–ಮಣಿಕಂಠ, ದ್ವಿತೀಯ ಭರತ್–ತೃತೀಯ ಸ್ಥಾನ ವೈಶಾಕ್ ವಿಜೇತರಾದರು. ವಿಜೇತರಿಗೆ ನಗದು ಬಹುಮಾನ ಪ್ರಥಮ–1500, ದ್ವಿತೀಯ–1000, ತೃತೀಯ–500ರೂ ಹಾಗೂ ಪ್ರಶಸ್ತಿ ಪತ್ರವನ್ನು ವಿತರಣೆ ಮಾಡಲಾಯಿತು.

ಅ.8ರಂದು ಸಂಕ್ಷಿಪ್ತ ಮಹಾ ಭಾರತ ನಾಟಕ ಪ್ರದರ್ಶನ

ಕೆ.ಆರ್.ಪೇಟೆ,ಅ.5– ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮೀದೇವಿ ಕೃಪಾ ಪೋಷಿತ ನಾಟಕ ಮಂಡಳಿಯ ವತಿಯಿಂದ ಪಿತೃಪಕ್ಷ ಹಬ್ಬದ ಅಂಗವಾಗಿ ಅ.8ರಂದು ರಾತ್ರಿ 8.30ಕ್ಕೆ ಸಂಕ್ಷಿಪ್ತ ಮಹಾಭಾರತ ಅಥವಾ ಗದಾಯುದ್ದ ಪೌರಾಣಿಕ ನಾಟಕವನ್ನು ಹಮ್ಮಿಕೊಳ್ಳಲಾಗಿದ್ದು, ಇದರ ಆಹ್ವಾನ ಪತ್ರಿಕೆಗಳನ್ನು ಸಮಾಜ ಸೇವಕರು ಹಾಗೂ ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷರಾದ ಮಲ್ಲಿಕಾರ್ಜುನ್ ಬಿಡುಗಡೆ ಮಾಡಿದರು.

ಪಟ್ಟಣದ ಜಯನಗರ ಬಡಾವಣೆಯಲ್ಲಿರುವ ಸರ್ವ ಜನಾಂಗದ ಶಾಂತಿಯ ತೋಟ ಸಭಾಂಗಣದಲ್ಲಿ(ಆರ್‌ಟಿಓ ಅಭಿಮಾನಿಗಳ ಬಳಗದ ಸಭಾಂಗಣ) ನಾಟಕದ ಕಲಾವಿದರು ಹಾಗೂ ಅಗ್ರಹಾರಬಾಚಹಳ್ಳಿ ಗ್ರಾಮಸ್ಥರ ಸಮ್ಮುಖದಲ್ಲಿ ನಾಟಕ ಸಮಾರಂಭದ ಆಹ್ವಾನ ಪತ್ರಿಕೆಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.



ಕಬ್ಬಿಗೆ ವೈಜ್ಞಾನಿಕ ಬೆಲೆ ನೀಡುವಂತೆ ಆಗ್ರಹಿಸಿ ಮಂಡ್ಯದಲ್ಲಿ ಪ್ರತಿಭಟನೆ



ಮಂಡ್ಯ,ಅ.5– ನಗರದ ಜೆಸಿ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಒಂದು ಟನ್ ಕಬ್ಬಿಗೆ 5000 ರೂ ನಿಗದಿ ಮಾಡುವಂತೆ ಒತ್ತಾಯಿಸಿ ರಸ್ತೆ ತಡೆ ನಡೆಸಿದರು.

7–8 ವರ್ಷಗಳಿಂದ ರೈತರ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡದೆ ರೈತರು ತುಂಬಾ ಸಂಕಷ್ಟಕ್ಕೆ ತುತ್ತಾಗಿದ್ದಾರೆ. ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ಇನ್ನಾದರೂ ರೈತರ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಿ ರೈತರ ರಕ್ಷಣೆ ಮಾಡಬೇಕು ಹಾಗೂ ಮಂಡ್ಯ ಜಿಲ್ಲೆಯಲ್ಲಿ ರೈತರು ಬೆಳೆದ ಕಬ್ಬು 18 ತಿಂಗಳು ತುಂಬಿದ್ದರೂ ಕಾರ್ಖಾನೆ ಅವರು ಕಬ್ಬು ತೆಗೆದುಕೊಳ್ಳಲು ವಿಳಂಬ ಧೋರಣೆ ತೋರುತ್ತಿದ್ದಾರೆ. ಸೂಕ್ತ ಸಮಯಕ್ಕೆ ಕಬ್ಬು ಕಟಾವು ಮಾಡಿಸಲು ಜಿಲ್ಲಾಡಳಿತ ಕ್ರಮ ತೆಗೆದುಕೊಳ್ಳಬೇಕು ಎಂದು ಮಂಡ್ಯ ತಾಲೂಕು ರೈತ ಸಂಘದ ಕಾರ್ಯಕರ್ತರು ಆಗ್ರಹಪಡಿಸಿದರು.

ಈ ಸಮಯದಲ್ಲಿ ಕನಿಷ್ಠ 5ಸಾವಿರ ರೂ ಕೊಡಲೇಬೇಕು. ಇಲ್ಲದಿದ್ದರೆ ರೈತರು ಬೀದಿಗೆ ಇಳಿದು ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದ್ದಾರೆ.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಶಿವಳ್ಳಿ ಚಂದ್ರು, ರಾಮಲಿಂಗೇಗೌಡ, ಕೋಣನಹಳ್ಳಿ ಮಂಜು, ನಿಂಗೇಗೌಡ, ಚೆಲುವರಾಜು, ಗಂಗರಾಜು, ಶ್ರೀನಿವಾಸ್, ಪುಟ್ಟೇಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮೂರನೇ ಪುಟದಿಂದ

50:50 ನಿವೇಶನ ಸರ್ಕಾರದ ವಶಕ್ಕೆ?

ನಿವೇಶನ ಹಿಂದಿರುಗಿಸುತ್ತಾರಾ? ಇಲ್ಲ ಸರ್ಕಾರ ವಾಪಸ್ ಪಡೆಯಬೇಕಾ ಎನ್ನುವುದರ ಬಗ್ಗೆ ನೋಡೋಣ ಎಂದರು. ಕಾನೂನು ಬಾಹಿರವಾಗಿ ಯಾರ್ಯಾರು ನಿವೇಶನ ಪಡೆದಿದ್ದಾರೋ, ಅವರೆಲ್ಲ ವಾಪಸ್ ಕೊಟ್ಟರೆ ಗೌರವ, ಕೊಡದೇ ಇದ್ದರೆ ಕಾನೂನು ರೀತಿ ರಚನೆಯಾಗಿರುವ ಕಮಿಟಿ ತೀರ್ಮಾನಿಸುತ್ತದೆ. ಆ ಕಮಿಟಿಯ ಸಲಹೆ ಮೇರೆಗೆ ನಿವೇಶನ ಹಿಂಪಡೆಯಲಾಗುತ್ತದೆ ಎಂದು ತಿಳಿಸಿದರು. ಮುಡಾದಲ್ಲಿ 50:50 ಅನುಪಾತದಡಿ ಇಲ್ಲಿವರೆಗೆ ನಿವೇಶನ ನೀಡಿರುವುದು ಲೀಗಲ್ ಅಲ್ಲ. ಭೂಮಿ ನೀಡಿ ಹಣದ ರೂಪದಲ್ಲಿ ಪರಿಹಾರ ಪಡೆದವರದ್ದು ಬೇರೆ, ಹಣ ಪಡೆಯದೇ ಭೂಮಿ ನೀಡಿರುವವರಿಗೆ ಬೇರೆ ರೀತಿಯಲ್ಲಿ ಸೈಟ್ ನೀಡುವ ಪದ್ಧತಿ ಇದೆ. ಈ ಎರಡೂ ವರ್ಗದ ಅನುಪಾತದಲ್ಲಿ ವ್ಯತ್ಯಾಸವಿದೆ. ಆದರೆ, ಮುಡಾದಲ್ಲಿ ದುಡ್ಡು ಇಲ್ಲದೆ ಹೀಗೂ ನಿವೇಶನ ಪಡೆಯಬಹುದಾ? ಎಂಬ ಅನುಮಾನ ನನಗೂ ಕಾಡುತ್ತಿದೆ ಎಂದರು.

ಸಿಎಂ ಬದಲಾವಣೆ ಇಲ್ಲ: ರಾಜ್ಯದಲ್ಲಿ ಸಿಎಂ ಬದಲಾವಣೆ ಮಾಡುವ ಬಗ್ಗೆ ನಮ್ಮ ಪಕ್ಷದಲ್ಲಿ ಚರ್ಚೆ ನಡೆದಿಲ್ಲ. ನಮ್ಮ ಸರ್ಕಾರ 5 ವರ್ಷ ಸುಭದ್ರವಾಗಿರಲಿದೆ. ಸಿದ್ದರಾಮಯ್ಯ ಅವರು ಈಗ ಸಿಎಂ ಆಗಿದ್ದಾರೆ. ಅವರಿಂದ ಪಕ್ಷ ರಾಜೀನಾಮೆ ಕೇಳಿಲ್ಲ. ಇದನ್ನು ಈಗಾಗಲೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ಸ್ಪಷ್ಟಪಡಿಸಿದ್ದಾರೆ. ಆದರೆ ಸಿಎಂ ಬದಲಾವಣೆ ವಿಚಾರ ಮುನ್ನಲೆಗೆ ಬಂದಿರುವುದು ಕೇವಲ ಊಹಾಪೋಹ ಎಂದರು.

ಕೇಂದ್ರ ಸರ್ಕಾರದಿಂದ ತನಿಖಾ ಸಂಸ್ಥೆ ದುರ್ಬಳಕೆ: ದೇಶದಲ್ಲಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇದೀಗ ವಿರೋಧ ಪಕ್ಷದವರನ್ನು ಹಣಿಯಲು ಸಿಬಿಐ, ಇಡಿ, ಐಟಿಯಂತಹ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿವೆ. ದೇಶದಲ್ಲಿ ಶೇ.90ರಷ್ಟು ವಿರೋಧ ಪಕ್ಷದವರ ಮೇಲೆ ವಿವಿಧ ತನಿಖಾ ಸಂಸ್ಥೆಗಳಿಂದ ತೊಂದರೆ ಕೊಡಲಾಗುತ್ತಿದೆ. ಶೇ.1ರಷ್ಟು ಸ್ವಪಕ್ಷದವರ ಮೇಲೆ ದಾಳಿ ನಡೆಸುವ ಕಣ್ಣೊರೆಸುವ ತಂತ್ರಗಾರಿಕೆ ನಡೆಯುತ್ತಿದೆ ಎಂದು ವಾಗ್ದಾಳಿ ನಡೆಸಿದರು. ಲೋಕಾಯುಕ್ತರನ್ನು ನೇಮಕ ಮಾಡಿರುವುದು ನಮ್ಮ ಸರ್ಕಾರವಲ್ಲ. ಈ ಹಿಂದಿನ ಸರ್ಕಾರ. ನಮಗೆ ಲೋಕಾಯುಕ್ತರ ಮೇಲೆ ನಂಬಿಕೆ ಇದೆ. ಅದರ ತನಿಖೆಯಲ್ಲಿ ಅಸಮಾಧಾನವಿದ್ದರೆ ನ್ಯಾಯಾಲಯದ ಮೆಟ್ಟಿಲು ಏರುವ ಅವಕಾಶವಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಐದು ದಿನ ಸಂಗೀತ ರಸದೌತಣ

6 ಕೆಎಸ್‌ಆರ್‌ಪಿ, 10 ಡಿಎಆರ್, 10 ಎಎಸ್‌ಸಿ ತಂಡ, 4 ಕ್ಯೂಆರ್‌ಟಿ, 2 ಆಂಬ್ಯುಲೆನ್ಸ್, 2 ಅಗ್ನಿಶಾಮಕ ವಾಹನ, 1 ಮೊಬೈಲ್ ಕಮಾಂಡಿಗ್ ವಾಹನಗಳ ಮೂಲಕವೂ ನಿಗಾ ವಹಿಸಲಾಗುತ್ತಿದೆ. ಮೂರು ಕಡೆ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದ್ದು, ಸಂಚಾರ ದಟ್ಟಣೆ ನಿರ್ವಹಣೆಗೂ ಪ್ರತ್ಯೇಕ ಪೊಲೀಸ್ ತಂಡಗಳನ್ನು ನಿಯೋಜಿಸಲಾಗಿದೆ. ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ಮಾರ್ಗದಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಜೊತೆಗೆ ಮೂರು ಪ್ಯಾಟ್ರೋಲಿಂಗ್ ತಂಡಗಳು ನಿರಂತರವಾಗಿ ಗಸ್ತು ತಿರುಗಲಿವೆ. 10 ವಾಚ್ ಟವರ್‌ಗಳ ಮೂಲಕವೂ ಹದ್ದಿನ ಕಣ್ಣಿಡಲು ತಯಾರಿ ಮಾಡಿಕೊಳ್ಳಲಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಹೆಲ್ಪ್ ಡೆಸ್ಕ್ ತೆರೆಯಲಾಗುತ್ತಿದೆ.

ಮಹಿಳೆಯರ ಸುರಕ್ಷತೆಗೆ ಆದ್ಯತೆ: ಮಹಿಳೆಯರಿಗಾಗಿ ಪ್ರತ್ಯೇಕವಾಗಿ 5 ಸಾವಿರ ಆಸನದ ವ್ಯವಸ್ಥೆ ಮಾಡಲಾಗಿದೆ. ಹೆಜ್ಜೆ ಹೆಜ್ಜೆಗೂ ಮಹಿಳಾ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ಕಾರ್ಯಕ್ರಮ ವೀಕ್ಷಣೆಗೆ ಬರುವ ಗಣ್ಯರ ಭದ್ರತೆಗೂ ಕ್ರಮ ವಹಿಸಲಾಗಿದೆ ಎಂದು ಯುವ ದಸರಾ ಉಪ ಸಮಿತಿ ಉಪ ವಿಶೇಷಾಧಿಕಾರಿಯಾದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸರ್ಕಾರಿ ಭೂಮಿ ಸಕ್ರಮ

ಒದಗಿಸುವಲ್ಲಿ ವಿಫಲರಾಗುತ್ತಿದ್ದರು. ಹಾಗೂ ಬಹುತೇಕ ಅರ್ಜಿಗಳು ತಿರಸ್ಕೃತಗೊಂಡಿದ್ದವು. ಇದೀಗ ಸರ್ಕಾರವು ಗ್ರಾಮ ಲೆಕ್ಕಿಗರು ಹಾಗೂ ರಾಜಸ್ವ ನಿರೀಕ್ಷಕರ ವರದಿ ಮತ್ತು ಸ್ಥಳೀಯರ ಹೇಳಿಕೆಗಳನ್ನಾಧರಿಸಿ ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ನೈಜ ರೈತರನ್ನು ಗುರುತಿಸಿ ಅವರಿಗೆ ಭೂಮಿ ಸಕ್ರಮಗೊಳಿಸುವುದು ಮಾತ್ರವಲ್ಲದೆ ಭೂಮಿಯ ಮಾಲೀಕತ್ವಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನೀಡುವ ಭರವಸೆ ಮೂಲಕ ರೈತರಿಗೆ ಶುಭ ಸುದ್ದಿ ನೀಡಿದೆ. ಇದಲ್ಲದೇ ಈ ಹಿಂದೆ ರೈತರಿಗೆ ಭೂಮಿ ಮಂಜೂರಾಗಿ ಪೋಡಿ ದುರಸ್ತಿಯಾಗದಿರುವ 10 ಲಕ್ಷ ಪ್ರಕರಣಗಳು ರಾಜ್ಯದ ತಾಲೂಕು ಕಚೇರಿಗಳಲ್ಲಿ ಬಾಕಿ ಇವೆ ಎಂದು ಹೇಳಿದ ಕೃಷ್ಣಬೈರೇಗೌಡರು, ಸದರಿ ಜಮೀನುಗಳ ದುರಸ್ತಿ ಪ್ರಕ್ರಿಯೆಗೆ ಈಗಾಗಲೇ ಚಾಲನೆ ನೀಡಿದ್ದು, ಈ 10 ಲಕ್ಷ ರೈತರಿಗೂ ಶೀಘ್ರದಲ್ಲೇ ದಾಖಲೆಗಳನ್ನು ಒದಗಿಸಲಾಗುವುದು ಎಂದು ಹೇಳಿದರು.

ಇಂದು, ನಾಳೆ 'ಡ್ರೋನ್ ಶೋ'

ಮಾಡಲಾಗಿದೆ. ವಿದ್ಯುತ್ ಸುರಕ್ಷತೆ, ಸೋಲಾರ್ ಬಳಕೆ ಹಾಗೂ ಸರ್ಕಾರದ ಪ್ರಮುಖ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡುವ ವಿದ್ಯುತ್ ರಥ ನಗರದಲ್ಲಿ ಸಂಚರಿಸುತ್ತಿದೆ ಎಂದರು. ದಸರಾ ದೀಪಾಲಂಕಾರ ಉಪ ಸಮಿತಿ(ಅಧಿಕಾರೇತರ) ಉಪಾಧ್ಯಕ್ಷರಾದ ಸೋಯೆಲ್ ಬೇಗ್, ಕಾಂತರಾಜು, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ಅಧೀಕ್ಷಕ ಇಂಜಿನಿಯರ್ ಸುನೀಲ್ ಸೇರಿದಂತೆ ಸೆಸ್ಕ್ ಅಧಿಕಾರಿಗಳು, ಉಪಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಹರ್ಯಾಣದಲ್ಲಿ ಬಿಜೆಪಿಗೆ ಶಾಕ್; ಜಮ್ಮು–ಕಾಶ್ಮೀರ ಅತಂತ್ರ

ಮತಗಟ್ಟೆ ಸಮೀಕ್ಷೆ ಪ್ರಕಟ

ನವದೆಹಲಿ, ಅ.5– ಹರ್ಯಾಣ ಹಾಗೂ ಜಮ್ಮು ಮತ್ತು ಕಾಶ್ಮೀರದ ಮತದಾನ ಅಂತ್ಯಗೊಂಡಿದ್ದು, ಇದೀಗ ಮತಗಟ್ಟೆ ಸಮೀಕ್ಷೆಗಳು ಪ್ರಕಟಗೊಂಡಿವೆ. ಕಳೆದ 10 ವರ್ಷದಿಂದ ಹರ್ಯಾಣದಲ್ಲಿ ಅಧಿಕಾರದಲ್ಲಿರುವ ಬಿಜೆಪಿಗೆ ಈ ಬಾರಿ ಆಡಳಿತ ವಿರೋಧಿ ಅಲೆ ಹೊಡೆತ ನೀಡಿದೆ. ಕಾಂಗ್ರೆಸ್ ಅಭೂತಪೂರ್ವ ಗೆಲುವಿನೊಂದಿಗೆ ಅಧಿಕಾರಕ್ಕೇರಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಹೇಳುತ್ತಿವೆ. ಇತ್ತ ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿಯತ್ತ ಮತದಾರ ಒಲವು ತೋರಿದ್ದಾನೆ. ಆದರೆ ಅತಂತ್ರ ವಿಧಾನಸಭೆ ರಚನೆಯಾಗಲಿದೆ ಎಂದು ಮತಗಟ್ಟೆ ಸಮೀಕ್ಷೆ ಹೇಳುತ್ತಿದೆ.

ಹರ್ಯಾಣ ಹಾಗೂ ಜಮ್ಮು ಮತ್ತು ಕಾಶ್ಮೀರ ಎರಡು ವಿಧಾನಸಭೆಯಲ್ಲಿ ಒಟ್ಟು 90 ಸ್ಥಾನಗಳಿವೆ. ಬಹುಮತ ಪಡೆಯಲು 46 ಸ್ಥಾನ ಗೆಲ್ಲಬೇಕಿದೆ. ಹರ್ಯಾಣದಲ್ಲಿ ಬಹುತೇಕ ಮತಗಟ್ಟೆ ಸಮೀಕ್ಷೆಗಳು ಕಾಂಗ್ರೆಸ್‌ಗೆ 55 ರಿಂದ 62 ಸ್ಥಾನ ಗೆಲ್ಲಲಿದೆ ಎಂದು ಭವಿಷ್ಯ ನುಡಿದಿದೆ. ಇನ್ನು ಆಡಳಿತರೂಢ ಬಿಜೆಪಿ ಭಾರಿ ಕುಸಿತ ಕಾಣಲಿದೆ ಎಂದಿದೆ. ಹರ್ಯಾಣದಲ್ಲಿ ಆಪ್ ಖಾತೆ ತೆರೆಯಲ್ಲ ಎಂದು ಸಮೀಕ್ಷೆ ಹೇಳುತ್ತಿದೆ. ಇತ್ತ ಆರ್ಟಿಕಲ್ 370 ರದ್ದು ಬಳಿಕ ನಡೆದ ಮೊದಲ ಚುನಾವಣೆಯಲ್ಲಿ ಬಿಜೆಪಿ ವೋಟ್ ಶೇರ್ ಹೆಚ್ಚಾಗಿದೆ. ಆದರೆ ಸ್ಪಷ್ಟ ಬಹುಮತ ಪಡೆಯಲು ಎಲ್ಲಾ ಪಕ್ಷಗಳು ವಿಫಲವಾಗಲಿವೆ ಎಂದಿದೆ.

ಬಿಜೆಪಿ ಶಾಸಕ ಮುನಿರತ್ನ ನ್ಯಾಯಾಂಗ ಬಂಧನ ಮತ್ತೆ 14 ದಿನ ವಿಸ್ತರಣೆ

ಬೆಂಗಳೂರು,ಅ.5(ಕೆಎಂಶಿ)–ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲಿನಲ್ಲಿರುವ ಬಿಜೆಪಿ ಶಾಸಕ ಮುನಿರತ್ನ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಮತ್ತೆ 14 ದಿನಗಳವರೆಗೆ ವಿಸ್ತರಿಸಲಾಗಿದೆ.

ತನಿಖೆಗೆ ಮುನಿರತ್ನ ಅವರ ಅವಶ್ಯಕತೆ ಇದೆ ಎಂಬ ಎಸ್‌ಐಟಿ ಕೋರಿಕೆಯನ್ನು ತಿರಸ್ಕರಿಸಿದ ಜನಪ್ರತಿನಿಧಿಗಳ ನ್ಯಾಯಾಲಯ ಅ.19ರವರೆಗೆ ನ್ಯಾಯಾಂಗ ಬಂಧನಕ್ಕೆ ವಹಿಸಿ, ಆದೇಶಿಸಿತು.

ಎಸ್‌ಐಟಿ ಅಧಿಕಾರಿಗಳು ಮುನಿರತ್ನ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ತಮ್ಮ ಕಸ್ಟಡಿಗೆ ನೀಡುವಂತೆ ಮಾಡಿದ ಮನವಿಯನ್ನು ತಳ್ಳಿಹಾಕಿದ ನ್ಯಾಯಾಲಯ, ನ್ಯಾಯಾಂಗ ಬಂಧನಕ್ಕೆ ಆದೇಶಿಸಿತು.

ಮನೆ ಊಟ ತರಿಸಿಕೊಳ್ಳುವ ಮನವಿಗೆ ನ್ಯಾಯಾಲಯ, ಕಾರಾಗೃಹ ಅಧಿಕಾರಿಗೆ ಮನವಿ ಮಾಡಿಕೊಳ್ಳಲಿ, ಸ್ಪಂದನೆ ಸಿಗದಿದ್ದರೆ ನಮ್ಮ ಮುಂದೆ ಬನ್ನಿ ಎಂದು ನ್ಯಾಯಾಧೀಶರು ಹೇಳಿದರು.



ವಿದ್ಯುತ್ ದೀಪಾಲಂಕಾರದಲ್ಲಿ ಮೂಡಿದ ನಾಡು–ದೇಶಾಭಿಮಾನ...

ಮೈಸೂರಿನ ದೊಡ್ಡಕೆರೆ ಮೈದಾನಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ, ಸಂಸತ್ ಭವನ ಮತ್ತು ವಿಧಾನಸೌಧವು ವಿದ್ಯುತ್ ದೀಪಾಲಂಕಾರದ ಚಿತ್ತಾರದಲ್ಲಿ ಮೂಡಿಬಂದಿರುವ ಜೊತೆಗೆ ಹಳದಿ–ಕೆಂಪು ಬಣ್ಣಗಳ ವಿದ್ಯುತ್ ಬಲ್ಬ್‌ಗಳಲ್ಲಿ ಕರ್ನಾಟಕದ ಭೂಪಟವೂ ಅನಾವರಣಗೊಂಡಿರುವುದನ್ನು ಕಾಣಬಹುದು.



ಜಗಮಗಿಸುತ್ತಿರುವ ಅರಮನೆ...

ದಸರಾ ಪ್ರಯುಕ್ತ ಇಡೀ ಮೈಸೂರು ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿದೆ. ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿರುವ ಮೈಸೂರು ಅರಮನೆಯ ಅಂದ–ಚಂದವನ್ನು ಶನಿವಾರ ಸಂಜೆ ಪ್ರವಾಸಿಗರು ತುಂತುರ ಮಳೆಯ ನಡುವೆಯೂ ಕಣ್ತುಂಬಿಕೊಂಡ ಕ್ಷಣ.

ದಸರಾ ಕ್ರೀಡಾಕೂಟದಲ್ಲಿ ಪದಕ ಪೈಪೋಟಿ



ವಿಜೇತ ಕ್ರೀಡಾಪಟುಗಳಿಗೆ ಕ್ರೀಡಾಕೂಟ ಉಪಸಮಿತಿ ವತಿಯಿಂದ ಪದಕ ಹಾಗೂ ಪ್ರಶಸ್ತಿ ಪತ್ರ ವಿತರಿಸಲಾಯಿತು

ಮೈಸೂರು, ಅ.5(ಎಂಕೆ)– ನಗರದ ಚಾಮುಂಡಿ ವಿಹಾರ ಕ್ರೀಡಾಂಗಣ ಸೇರಿದಂತೆ ವಿವಿಧ ಮೈದಾನಗಳಲ್ಲಿ ನಡೆಯುತ್ತಿರುವ ದಸರಾ ಕ್ರೀಡಾಕೂಟದಲ್ಲಿ ಪದಕ ಪೈಪೋಟಿ ಮುಂದುವರೆಸಿರುವ ಕ್ರೀಡಾಪಟುಗಳು ವಿವಿಧ ವೈಯಕ್ತಿಕ ಕ್ರೀಡೆಗಳಲ್ಲಿ ಗೆಲುವು ದಾಖಲಿಸಿದ್ದಾರೆ.

ಯೋಗ: ಪುರುಷರ ಸಾಂಪ್ರದಾಯಿಕ ವಿಭಾಗದಲ್ಲಿ ಬೆಂಗಳೂರಿನ ದುರ್ಗೇಶ್ ಚಿನ್ನ, ಬಳ್ಳಾರಿಯ ವೈ.ಎಸ್.ಯೋಗೀಶ್ ಬೆಳ್ಳಿ, ದಕ್ಷಿಣ ಕನ್ನಡದ ಮೋಹಿತ್ ಕಂಚಿನ ಪದಕ ಜಯಿಸಿದರೆ, **ಆರ್ಟಿಸ್ಟಿಕ್ ಸೋಲೋ ವಿಭಾಗದಲ್ಲಿ** ಬೆಂಗಳೂರು ಗ್ರಾಮಾಂತರದ ಜಿ.ಸಿ.ಹೃತಿಕ್ ಚಿನ್ನ, ಬೆಂಗಳೂರಿನ ಕೆ.ಹೆಚ್.ಪೃಥ್ವಿ ರಾಮ್ ಬೆಳ್ಳಿ ಹಾಗೂ ಪ್ರೇಮ್ ಸಿಂಗ್ ರಾಜ್ ಪುರೋಹಿತ್ ಕಂಚು ಗೆದ್ದರು.

ಹಾಗೆಯೇ ಮಹಿಳಾ ಸಾಂಪ್ರದಾಯಿಕ ವಿಭಾಗದಲ್ಲಿ ಚಿಕ್ಕಬಳ್ಳಾಪುರದ ಕೆ.ಯಶಿಕಾ ಬಂಡಿತ ಚಿನ್ನ, ಮೈಸೂರಿನ ಆರ್. ಅಂಕಿತ ಬೆಳ್ಳಿ, ಬೆಂಗಳೂರಿನ ಆರ್.ನಿಹಾರಿಕಾ ಕಂಚು ಗೆದ್ದರೆ, **ಆರ್ಟಿಸ್ಟಿಕ್ ಸೋಲೋ ವಿಭಾಗದಲ್ಲಿ** ಮೈಸೂರಿನ ವೇದಿಕಾ ಮಾನ್ಯ ಶಿವ ಚಿನ್ನ, ಬೆಂಗಳೂರಿನ ನಿಹಾರಿಕಾ ಬೆಳ್ಳಿ ಹಾಗೂ ಮೈಸೂರಿನ ಹರ್ಷಿತ ಕಂಚಿನ ಪದಕ ಗೆದ್ದರು.

ಸೈಕ್ಲಿಂಗ್: 80 ಕಿಮೀ ಮಾಸ್ ಸ್ಟಾರ್ಟ್ ರೇಸ್ ಪುರುಷರ ವಿಭಾಗದಲ್ಲಿ ಮೈಸೂರಿನ ಹೆಚ್.ಆರ್.ಲಕ್ಷ್ಮೀಶ ಚಿನ್ನ, ಬಾಗಲಕೋಟೆಯ ಇರಪ್ಪ ಗಡ್ಡಿ ಬೆಳ್ಳಿ, ವಿಜಯಪುರದ ಬೀರಪ್ಪ ನವಲಿ ಕಂಚಿನ ಪದಕ ಜಯಿಸಿದರೆ, 50 ಕಿಮೀ ಮಹಿಳೆಯರ ವಿಭಾಗದಲ್ಲಿ ವಿಜಯಪುರದ ದರ್ಪಿಕ ಘಡತರೆ ಚಿನ್ನ, ಅಂಕಿತಾ ರಾಥೋಡ್ ಬೆಳ್ಳಿ ಹಾಗೂ ಬಾಗಲಕೋಟೆಯ ಕೀರ್ತಿ ವಿಠ್ಠಲ ನಾಯಕ್ ಕಂಚು ಗೆದ್ದರು.

ಅಥ್ಲೇಟಿಕ್ಸ್: 100 ಮೀಟರ್ ಓಟದ ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ಜ್ಯೋತಿಕಾ ಚಿನ್ನ, ದಕ್ಷಿಣಕನ್ನಡದ ಎಸ್.ಎಸ್.ಸಿಂಧುಶ್ರೀ, ವಿಜಯಪುರದ ಮೋನಿಕಾ ಆರ್ ಗೌಡ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಪುರುಷರ ವಿಭಾಗದ **200 ಮೀಟರ್** ಓಟದಲ್ಲಿ ಬೆಂಗಳೂರಿನ ಪ್ರಸನ್ನ ಕುಮಾರ್ ಮಣ್ಣೂರು ಚಿನ್ನ, ಮೈಸೂರಿನ ಜಿ.ಗುರು ಪ್ರಸಾದ್ ಬೆಳ್ಳಿ, ವಿಜಯಪುರದ ಎನ್.ಸಿ.ವಿನಯ್ ಕಂಚು ಗೆದ್ದರು.

ಹಾಗೆಯೇ **800 ಮೀಟರ್** ಓಟದಲ್ಲಿ ಬೆಂಗಳೂರಿನ ತುಷಾರ್ ಬೆಕನೆ ಚಿನ್ನ, ಶಿವಮೊಗ್ಗದ ಎಂ.ಎಸ್.ಆಶ್ರಿತ್ ಬೆಳ್ಳಿ, ಬೆಂಗಳೂರಿನ ಜೆ.ಆರ್.ಕಲ್ಯಾಣ್ ಕಂಚು ಗೆದ್ದರೆ, ಹಾಗೆಯೇ 5000 ಮೀಟರ್ ಓಟದಲ್ಲಿ ಧಾರವಾಡದ ನಾಗರಾಜ್ ವಿ ಡೈವೇಟ್ ಚಿನ್ನ, ಬೆಂಗಳೂರಿನ ಗುರುಪ್ರಸಾದ್ ಬೆಳ್ಳಿ, ದಕ್ಷಿಣ ಕನ್ನಡದ ಆರ್.ಪುರುಷೋತ್ತಮ ಕಂಚು ಜಯಿಸಿದರು.

ದಸರಾ ವಸ್ತುಪ್ರದರ್ಶನದಲ್ಲಿ ಮರದ ಅರಮನೆ ಪ್ರತಿರೂಪಕ್ಕೆ ಮಾರುಹೋದ ಪ್ರವಾಸಿಗರು





ವಜ್ರಖಚಿತ ಸಿಂಹಾಸನದಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್ ನಡೆಸುತ್ತಿರುವ ಚಿತ್ರ. (ಬಲಚಿತ್ರ) ವಸ್ತುಪ್ರದರ್ಶನದ ಆವರಣದಲ್ಲಿ ನಿರ್ಮಿಸಿರುವ ಸಿಂಹಾಸನದ ಪ್ರತಿರೂಪ

ಮೈಸೂರು,ಅ.5(ಜಿಎ)–ಮೈಸೂರಿನ ವಸ್ತುಪ್ರದರ್ಶನ ಆವರಣದಲ್ಲಿ ನಿರ್ಮಿಸಿರುವ ಮರದ ಅರಮನೆ ಪ್ರತಿರೂಪಕ್ಕೆ ಭಾರಿ ಮೆಚ್ಚುಗೆ ವ್ಯಕ್ತವಾಗುತ್ತಿದ್ದು, ಇದರೊಳಗೆ ನಿರ್ಮಿಸಿರುವ ಸಿಂಹಾಸನದ ಪ್ರತಿರೂಪಕ್ಕೆ ಜನ ಮಾರುಹೋಗುತ್ತಿದ್ದಾರೆ.

ಮೈಸೂರು ಬ್ರಾಂಡ್‌ಗೆ ಆದ್ಯತೆ ನೀಡುವ ದೃಷ್ಟಿಯಿಂದ ಕೋಟಿ ರೂ. ವೆಚ್ಚದಲ್ಲಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಈ ಹಿಂದಿನ ಮೈಸೂರಿನ ಮರದ ಅರಮನೆಯ ಪ್ರತಿರೂಪವೂ ಅತ್ಯಂತ ಆಕರ್ಷಣೀಯವಾಗಿ ಮೂಡಿಬಂದಿದ್ದು, ಪ್ರವಾಸಿಗರು ಸಾಗರೋಪಾದಿಯಲ್ಲಿ ಭೇಟಿ ನೀಡುತ್ತಿದ್ದು, ಇಲ್ಲಿರುವ ಅರಮನೆಯಲ್ಲಿರುವ ವಜ್ರ ಖಚಿತ ಸಿಂಹಾಸದ ಪ್ರತಿರೂಪಕ್ಕೆ ಕೈ ಮುಗಿದು ನಮಸ್ಕರಿಸುತ್ತಿರುವ ದೃಶ್ಯಗಳು ಕಾಣಬಹುದಾಗಿದೆ. ಅಂಬಾವಿಲಾಸ ಅರಮನೆಯಲ್ಲಿ ಸಿಂಹಾಸನ ಜೋಡಣೆಗೊಂಡ ನಂತರ ಸಾರ್ವಜನಿಕರಿಗೆ ಸಿಂಹಾಸನ ನೋಡುವ ಭಾಗ್ಯವಿರುವುದಿಲ್ಲ. ಅದರಲೂ ಖಾಸಗಿ ದರ್ಬಾರ್ ನಡೆಯವ ಸಂದರ್ಭದಲ್ಲಿ ಈ ದರ್ಬಾರ್ ಹಾಲ್‌ಗೆ ಪ್ರವೇಶವಿರುವುದಿಲ್ಲ. ಇದರಿಂದ ಪ್ರವಾಸಿಗರು ಬೇಸರದಿಂದ ಹಿಂದಿರುಗುತ್ತಿದ್ದರು. ಆದರೆ, ಈಗ ವಸ್ತುಪ್ರದರ್ಶನದ ಆವರಣದಲ್ಲಿ ನಿರ್ಮಿಸಿರುವ ಸಿಂಹಾಸನದ ಹಾಗೂ ದರ್ಬಾರ್ ಹಾಲ್ ನೋಡಿ ನಿಜವಾದ ಸಿಂಹಾಸನ ಹೀಗೆ ಇರಬಹುದು ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

ವಸ್ತುಪ್ರದರ್ಶನದ ಆವರಣಕ್ಕೆ ವಿವಿಧ ಆಹಾರ ಮಳಿಗೆಗಳು ಹಾಗೂ ವಿವಿಧ ಇಲಾಖೆಗಳ ಮಳಿಗೆಗಳಿಗೆ ಭೇಟಿ ನೀಡುವ ಮೊದಲು ಪ್ರವಾಸಿಗರು ಈ ಅರಮನೆಗೆ ಭೇಟಿ ನೀಡಿ, ಬಾಗಿಲು ಪ್ರವೇಶಿಸುತ್ತಿದ್ದಂತೆ ಸಿಂಹಾಸನ ಕೈಬೀಸಿ ಕರೆಯುತ್ತದೆ. ಸಿಂಹಾಸನದ ಬಳಿ ಹೋಗುವ ಮುನ್ನ ಪ್ರವಾಸಿಗರು ತಮ್ಮ ಚಪ್ಪಲಿಗಳನ್ನು ತೆಗೆದು ಭಕ್ತಿ ಭಾವದಿಂದ ಸಿಂಹಾಸನದ ಮುಂಭಾಗ ಹೋಗಿ ನಮಸ್ಕರಿಸಿ, ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ. ಮತ್ತೊಂದೆಡೆ ಈ ಅರಮನೆ ಒಳಭಾಗದಲ್ಲಿ ಬ್ರಾಂಡ್ ಮೈಸೂರಿಗೆ ಒತ್ತು ನೀಡುವ ಹಿನ್ನೆಲೆಯಲ್ಲಿ ವಿವಿಧ ಶ್ರೀಗಂಧದ ತುಂಡುಗಳನ್ನು ಇರಿಸಿದ್ದು, ಗಂಧದ ಗಮಲು ಇಡೀ ಆವರಣವನ್ನು ಆವರಿಸಿದೆ. ಪ್ರವಾಸಿಗರು ಗಮಲು ಮೂಗಿಗೆ ತಾಗುತ್ತಿದ್ದಂತೆ ಶ್ರೀಗಂಧದ ಮಳಿಗೆ ಬಳಿ ತೆರಳಿ ಶ್ರೀಗಂಧದ ವಿವಿಧ ತಳಿಗಳ ಬಗ್ಗೆ ಅರಣ್ಯ ಇಲಾಖೆ ಸಿಬ್ಬಂದಿಗಳಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಶುಕ್ರವಾರ ವಸ್ತುಪ್ರದರ್ಶನ ಆವರಣಕ್ಕೆ ಭೇಟಿ ನೀಡಿ, ಆರೋಗ್ಯ ಮಳಿಗೆ ಉದ್ಘಾಟಿಸಿ, ನಂತರ ಮರದ ಅರಮನೆಗೆ ಭೇಟಿ ನೀಡಿ ಅಯೂಬ್ ಖಾನ್ ಅವರ ಕಾರ್ಯಕ್ಕೆ ಶ್ಲಾಘಿಸಿದ್ದಾರೆ.

ಅ.8ಕ್ಕೆ ದಸರಾ ಉರ್ದು ಕವಿಗೋಷ್ಠಿ



ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಉರ್ದು ಕವಿಗೋಷ್ಠಿ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಅ.5(ಜಿಎ)–ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಪಿ. ಕಾಳಿಂಗ ರಾವ್ ಸಭಾಂಗಣದಲ್ಲಿ ಅ.8ರಂದು ರಾತ್ರಿ 9 ಗಂಟೆಗೆ ದಸರಾ ಉರ್ದು ಕವಿಗೋಷ್ಠಿ 'ಉರ್ದು ಮುಷಾಯಿರ್ ಏರ್ಪಡಿಸಲಾಗಿದೆ ಎಂದು ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ವಸ್ತು ಪ್ರದರ್ಶನ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಪ್ರತಿ ವರ್ಷ ನಗರದ ಖಾಸಗಿ ಸ್ಥಳದಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತಿತ್ತು. ಆದರೆ, ಈ ಬಾರಿ ಪ್ರಾಧಿಕಾರ ಆವರಣದಲ್ಲಿ ಆಯೋಜಿಸಲು ನಿರ್ಧರಿಸಿದ್ದು, ಖ್ಯಾತ ಉರ್ದು ಕವಿಗಳು ಭಾಗವಹಿಸಲಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉರ್ದು ಕವಿಗೋಷ್ಠಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಉರ್ದು ಕವಿಗಳಾದ ಇಮ್ರಾನ್ ಪ್ರತಾಪ್ ಘಡಿ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಜಬೀನ್ ನಜಮ್ ಗಜಾಲ್ ವಹಿಸಲಿದ್ದಾರೆ. ಶಾಸಕ ತನ್ವೀರ್ ಸೇಠ್ ಭಾಗವಹಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಖ್ಯಾತ ಕವಿಗಳಾದ ಸಂಪತ್ ಸರಳ್, ಉತ್ತರ ಪ್ರದೇಶದ ಶಾಂಭವಿ ಸಿಂಗ್, ಅಬುಜರ್ ನಹೀದ್, ನಜೀಂ ಫಾರುಕ್ ನಿಜಾದ್ ಸೇರಿದಂತೆ 15 ಕವಿಗಳು ಭಾವಹಿಸಿ, ಅಹೋರಾತ್ರಿ ನಡೆಯಲಿದ್ದು, ಸುಮಾರ್ 4 ಸಾವಿರ ಆಸನ ವ್ಯವಸ್ಥೆ ಮಾಡಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ವಕ್ಫ್ ಬೋರ್ಡ್ ಅಧ್ಯಕ್ಷ ಅಕ್ರಂ, ಮೋಹಿದ್ದಿನ್ ಪಾಷ, ಪಾಲಿಕೆ ಮಾಜಿ ಅಧ್ಯಕ್ಷ ಸುಹೇಲ್ ಬೇಗ್ ಮತ್ತಿತರರು ಉಪಸ್ಥಿತರಿದ್ದರು.

ಸಿಎಂ ವಿರುದ್ಧ ಇಡಿಗೆ ದೂರು ನೀಡಿರುವ ಸ್ನೇಹಮಯಿ ಕೃಷ್ಣ ಸಾಬೀತುಪಡಿಸದಿದ್ದರೆ ಕ್ರಮ

ಎಂ.ಲಕ್ಷ್ಮಣ ಎಚ್ಚರಿಕೆ

ಮೈಸೂರು, ಅ.5(ಬಿಎಲ್‌ಯು)–ಸಿದ್ದರಾಮಯ್ಯ ವಿರುದ್ಧ ಸ್ನೇಹಮಯಿ ಕೃಷ್ಣ ಇಡಿಗೆ ದೂರು ನೀಡಿದ್ದಾರೆ. ಆದರೆ, ಹಣದ ವ್ಯವಹಾರವೇ ನಡೆದಿಲ್ಲ. ಇದರಿಂದ ಇಡಿಯವರು ಪ್ರವೇಶ ಪಡೆಯುವ ಪ್ರಮೇಯವೇ ಇಲ್ಲ. ಅವರು ಕೊಟ್ಟ ದೂರು ಸಾಬೀತು ಮಾಡಬೇಕು. ಇಲ್ಲದಿದ್ದರೆ ಅವರ ವಿರುದ್ಧವೇ ಕ್ರಮವಾಗುತ್ತದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಎಚ್ಚರಿಕೆ ನೀಡಿದ್ದಾರೆ.

ನಗರ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ 19 ಎಫ್‌ಐಆರ್, ವಿಜಯೇಂದ್ರ ವಿರುದ್ಧ 10 ಎಫ್‌ಐಆರ್ ದಾಖಲಾಗಿವೆ. ಹಾಗಾದರೆ ಇವರೆಲ್ಲಾ ರಾಜೀನಾಮೆ ನೀಡುತ್ತಾರಾ ಎಂದು ಪ್ರಶ್ನಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ಮುಖಂಡರಾದ ಎಂ.ಶಿವಣ್ಣ, ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಏನು ದೆವ್ವನಾ...! ನಾನು ಹೆದರಿಕೊಳ್ಳೋಕೆ...!

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವ್ಯಂಗ್ಯೋಕ್ತಿ



ಬೆಂಗಳೂರು, ಅ.5(ಕೆಎಂಶಿ)– ಹೆದರಿಕೊಳ್ಳಲು ಸಿದ್ದರಾಮಯ್ಯ ಏನು ದೆವ್ವಾನಾ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ವ್ಯಂಗ್ಯವಾಡಿದ್ದಾರೆ.

ಕುಮಾರಸ್ವಾಮಿಗೆ ನನ್ನ ಕಂಡರೆ ಭಯ ಎಂದು ಮುಖ್ಯಮಂತ್ರಿ ನೀಡಿದ ಹೇಳಿಕೆಗೆ ಖಾರವಾಗಿ ಪ್ರತಿಕ್ರಿಯಿಸಿದ ಅವರು, ನಾನು ದೇವರಿಗೆ ಮತ್ತು ಜನಕ್ಕೆ ಮಾತ್ರ ಹೆದರುತ್ತೇನೆ, ಈ ಸಿದ್ದರಾಮಯ್ಯ ಅವರಿಗಲ್ಲ. ಕಾರ್ಯಕರ್ತರು ಹಾಗೂ ಜನರ ಆಶೀರ್ವಾದದಿಂದ ನಾನು ರಾಜಕೀಯವಾಗಿ ಬೆಳೆದಿದ್ದೇನೆ. ಸಿದ್ದರಾಮಯ್ಯ ಜೆಡಿಎಸ್ ಕಾರ್ಯಕರ್ತರಾಗಿ ದೇವೇಗೌಡರ ನೆರಳಿನಲ್ಲಿ ಬೆಳೆದವರು.

ಅವರ ಹೆಸರಿನಲ್ಲಿ ನಾನೇನು ರಾಜಕೀಯ ಮಾಡಿಲ್ಲ, ನನ್ನ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ಹೂಡಿ ಹೆದರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಈ ಕುಮಾರಸ್ವಾಮಿಯನ್ನು ಯಾರಿಂದಲೂ ಅಲ್ಲಾಡಿಸಲು ಸಾಧ್ಯವಿಲ್ಲ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಷ್ಟು ಮೊಕದ್ದಮೆಗಳನ್ನು ಬೇಕಾದರೂ ಹಾಕಿಕೊಳ್ಳಲಿ, ನೀವು ಮಾಧ್ಯಮದವರು ಬೆಳಗಿನಿಂದ ಸಂಜೆವರೆಗೆ ಅದನ್ನೇ ಬಿತ್ತರಿಸುತ್ತೀರಿ, ಇದರಿಂದ ಏನಾಯಿತು ಎಂದು ಪ್ರಶ್ನಿಸಿದರು.

ಇದು ಭಂಡ ಸರ್ಕಾರ, ಇವರು ಜನರಿಗೂ ಹೆದರುವುದಿಲ್ಲ, ಯಾರಿಗೂ ಕೇರ್ ಮಾಡುವುದಿಲ್ಲ. ಇವರ ತೀರ್ಮಾನವೇ ಅಂತಿಮ, ಇದು ಎಲ್ಲವನ್ನೂ ಬಿಟ್ಟ ಸರ್ಕಾರವಾಗಿದೆ. ಪರ್ಯಾಯ ಮುಖ್ಯಮಂತ್ರಿ ವಿಷಯಕ್ಕೆ ಸಂಬಂಧಿಸಿದಂತೆ ಅವರ ಪಕ್ಷದಲ್ಲಿ ಹಲವಷ್ಟು ಹೇಳಿಕೆಗಳು ಬರುತ್ತಿವೆ. ಅದರ ಹಿಂದೆ ರಾಜಕೀಯವಿದೆ. ಜೆಡಿಎಸ್ ಭವಿಷ್ಯ ಹಾಗೂ ಇಂದಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಕಾಲವೇ ನಿರ್ಣಯಿಸುತ್ತದೆ. ಅವರವರ ಅನುಕೂಲಕ್ಕೆ ತಕ್ಕಂತೆ ರಾಜಕೀಯ ಮಾಡುತ್ತಿದ್ದಾರೆ ಎಂದರು.

ಅ.8, ಐನಾಕ್ಸ್ 'ಬೇಲಿ ಹೂ' ಚಿತ್ರ ಪ್ರದರ್ಶನ

ಮೈಸೂರು, ಅ.5(ಜಿಎ)–ಮೈಸೂರು ದಸರಾ ಮಹೋತ್ಸವದ ಚಲನಚಿತ್ರೋತ್ಸವದಲ್ಲಿ ಶ್ರೀ ತಿರುಮಲ ಸಿನಿ ಎಂಟರ್ಟೈನ್‌ಮೆಂಟ್ ಬ್ಯಾನರ್ ಅಡಿ ನಿರ್ಮಾಣಗೊಂಡಿರುವ 'ಬೇಲಿ ಹೂ' ಚಿತ್ರವು ಅ.8ರಂದು 10.15ಕ್ಕೆ ಐನಾಕ್ಸ್ ಮಲ್ಟಿಪ್ಲೆಕ್ಸ್‌ನಲ್ಲಿ ಪ್ರದರ್ಶನವಾಗಲಿದೆ ಎಂದು ಚಿತ್ರದ ನಟ, ನಿರ್ಮಾಪಕ ಡಾ.ಲಯನ್ ಎಸ್.ವೆಂಕಟೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಈ ಚಿತ್ರದ ಕಥೆಯು ಪ್ರತಿಯೊಬ್ಬರ ಜೀವನಕ್ಕೆ ಅನ್ವಯಿಸಲಿದ್ದು, ರಾಮನಗರದ ಆಶಾ ಎಂಬ ಪಾತ್ರಧಾರಿಯೂ ಸತ್ತವರ ಶವ ಸಾಗಿಸುವ ಸಂದರ್ಭದಲ್ಲಿ ಆಗುವ ಅವಮಾನ, ಸನ್ಮಾನ ಎಲ್ಲಾ ಅಂಶಗಳನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ ಎಂದರು.

ಚಿತ್ರದ ಪ್ರಮುಖ ಪಾತ್ರದಲ್ಲಿ ಸಂಪತ್, ಶ್ವೇತ, ಅರ್ಚನ, ನಾಗೇಶ್ ಲೋಕನಾಥ್ ಕಾಣಿಸಿಕೊಂಡಿದ್ದು, ಸೆಬಾಸ್ಟಿನ್ ನಿರ್ದೇಶನ ಮಾಡಿದ್ದಾರೆ. ಮೊಟ್ಟ ಮೊದಲ ಬಾರಿ ಚಿತ್ರ ಪ್ರದರ್ಶನವಾಗುತ್ತಿದ್ದು, ದಸರಾ ಚಲನ ಚಿತ್ರೋತ್ಸವದ ನಂತರ ವಿವಿಧ ರಾಜ್ಯ ಮತ್ತು ರಾಷ್ಟ್ರಗಳ ಚಲನ ಚಿತ್ರೋತ್ಸವದಲ್ಲಿ ಪ್ರದರ್ಶನವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಜೀವ್ ಶೆಟ್ಟಿ, ವೆಂಗ್ಯ ಚಿತ್ರಕಾರ ಬಂಟರ್ ಬಾಬು, ನಾಗೇಂದ್ರ, ಅನಂತ್ ಇದ್ದರು.

ದಸರಾ ಮತ್ಸ್ಯ ಮೇಳಕ್ಕೆ ಚಾಲನೆ



ಮೈಸೂರಿನ ಜೆ.ಕೆ.ಮೈದಾನದಲ್ಲಿ ಮೀನುಗಾರಿಕಾ ಇಲಾಖೆ ಆಯೋಜಿಸಿರುವ ಮತ್ಸ್ಯ ಮೇಳವನ್ನು ಸಚಿವ ಎನ್.ಚಲುವರಾಯಸ್ವಾಮಿ ವೀಕ್ಷಿಸಿದರು.

ಮೈಸೂರು, ಅ.5(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ಜೆ.ಕೆ.ಮೈದಾನದಲ್ಲಿ ಮೀನುಗಾರಿಕೆ ಇಲಾಖೆ ಆಯೋಜಿಸಲಾಗಿದ್ದ ಮತ್ಸ್ಯ ಮೇಳಕ್ಕೆ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಚಾಲನೆ ನೀಡಿದರು.

ದಸರಾ ಸಂದರ್ಭದಲ್ಲಿ ಕಳೆದ ಕೆಲ ವರ್ಷಗಳಿಂದ ಮತ್ಸ್ಯ ಮೇಳ ಆಯೋಜಿಸಲಾಗುತ್ತಿದ್ದು, ಈ ಬಾರಿ 35ಕ್ಕೂ ಹೆಚ್ಚು ಬಗೆಯ ಅಲಂಕಾರಿಕ ಮೀನುಗಳನ್ನು ಮೇಳದಲ್ಲಿ ಪ್ರದರ್ಶಿಸಲಾಗಿದೆ. ಹತ್ತಾರು ಅಕ್ವೇರಿಯಂಗಳಲ್ಲಿ ಬಣ್ಣ ಬಣ್ಣದ ಮೀನುಗಳು ಜನಾಕರ್ಷಿಸುತ್ತಿವೆ. ಮೇಳದಲ್ಲಿ ಗೋಲ್ಡ್ ಫಿಶ್, ಟೈಗರ್ ಬರ್ಡ್, ಫೈಟರ್, ಆರೋವನ, ಫ್ಲವ ಹಾರ್ನ್, ಪ್ಲಾಟಿ, ವೈಟ್ ಮೊಲಿಸ್, ಗಪ್ಪಿ ಸ್ವರ್ಡ್ ಟೈಲ್, ಏಂಜಲ್ ಫಿಶ್, ಮೊಲಿಸ್, ಬರ್ಡ್ಸ್ ಸೇರಿದಂತೆ ಇನ್ನಿತರ ತಳಿಗಳ ಮೀನುಗಳನ್ನು ಪ್ರದರ್ಶನಕ್ಕಿಡಲಾಗಿದೆ. ಸಿಹಿ ಮತ್ತು ಉಪ್ಪು ನೀರಿನಲ್ಲಿರುವ ಮೀನುಗಳು ಮೇಳದಲ್ಲಿ ಕಾಣಬಹುದಾಗಿದೆ. ವಿದೇಶಿ ತಳಿಯ ಮೀನುಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಮೀನುಗಾರಿಕಾ ಮಾಹಿತಿ: ಮತ್ಸ್ಯ ಮೇಳದಲ್ಲಿ ಮೀನುಗಾರಿಕೆ ಹಾಗೂ ಮೀನುಗಾರರಿಗೆ ದೊರೆಯುವ ಸೌಲಭ್ಯಗಳ ಬಗ್ಗೆಯೂ ಮಾಹಿತಿ ಒದಗಿಸಲಾಗುತ್ತಿದೆ. ಮೀನುಗಾರಿಕೆಗೆ ಬಳಸುವ ಬಲೆ, ಬೋಟ್ ಸೇರಿದಂತೆ ಕೆಲ ಉಪಕರಣಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಈ ಸಂದರ್ಭದಲ್ಲಿ ಶಾಸಕ ಕೆ.ಹರೀಶ್ ಗೌಡ, ಚಾಮುಂಡೇಶ್ವರಿ ವಿದ್ಯುತ್ ನಿಗಮದ ಅಧ್ಯಕ್ಷ, ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶಾಸಕ ತನ್ವೀರ್ ಸೇಠ್‌ಗೆ ಹುಟ್ಟುಹಬ್ಬದ ಶುಭಾಶಯ...



ಮಾಜಿ ಸಚಿವ, ಎನ್.ಆರ್.ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರಿಗೆ ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟ, ದೇವರಾಜ ಅರಸ್ ರಸ್ತೆ ಮಳಿಗೆದಾರರ ಸಂಘ ಮತ್ತು ಹೋಟೆಲ್ ಮಾಲೀಕರ ಸಂಘದಿಂದ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಫೇಮ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಅರಸು ರಸ್ತೆ ಮಳಿಗೆದಾರರ ಸಂಘ ಅಧ್ಯಕ್ಷ ವೀರಭದ್ರಪ್ಪ, ಹೋಟೆಲ್ ಸಂಘದ ಅಧ್ಯಕ್ಷ, ಫೇಮ್ ಉಪಾಧ್ಯಕ್ಷ ಸಿ.ನಾರಾಯಣಗೌಡ, ಸದಸ್ಯರಾದ ಬಾಂಬೆ ಟಿಫಾನೀಸ್ ಅನೆಕ್ಸ್‌ನ ಅನಿಲಕುಮಾರ್, ನಾಗೇಶ್, ಸೈಯದ್, ಮುಜಾಹಿದ್ ಷರೀಫ್, ಅನಿಲ್‌ರಾಜ್, ರಾಜು, ಮಹೇಂದ್ರ ಜೈನ್, ಬಾಂಬೆ ಟಿಫಾನೀಸ್‌ನ ಅಣೇಶ್ ನಾರಾಯಣಮೂರ್ತಿ, ಫಘಾರ್ ಇಕ್ಬಾಲ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ವಕೀಲರ ಸಭೆ

ಮೈಸೂರು,ಅ.5(ಪಿಎಂ)– ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಎಸ್‌ಸಿ–ಎಸ್‌ಟಿ ಒಳ ಮೀಸಲಾತಿ ಕುರಿತು ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಅ.6ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಸಿದ್ಧಾರ್ಥ ಹೋಟೆಲ್ ಸಭಾಂಗಣದಲ್ಲಿ ವಕೀಲರ ಮಹತ್ವದ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ವಕೀಲ ಅರುಣ್‌ಕುಮಾರ್ ತಿಳಿಸಿದ್ದಾರೆ.

ದಸರಾ ಸಂಭ್ರಮದ ನಡುವೆ ಮಳೆರಾಯನ ಕಿರಿಕಿರಿ!



ಮಳೆ ನಡುವೆ ಛತ್ರಿ ಹಿಡಿದು ವಿದ್ಯುತ್ ದೀಪಾಲಂಕಾರ ವೀಕ್ಷಿಸುತ್ತಿರುವ ಪ್ರವಾಸಿಗರು.

ಮೈಸೂರು, ಅ.5(ಎಂಕೆ)– ನಾಡಹಬ್ಬ ದಸರಾ ಸಡಗರ–ಸಂಭ್ರಮದ ನಡುವೆ ಮೈಸೂರಿನಲ್ಲಿ ವರುಣನ ಅಬ್ಬರ ಜೋರಾಗಿದ್ದು, ಸಾರ್ವಜನಿಕರು, ವಾಹನ ಸವಾರರು ಪರದಾಡುವಂತಾಗಿದೆ.

ಶನಿವಾರ ಮಧ್ಯಾಹ್ನ 3.30ರ ವೇಳೆಗೆ ಆರಂಭವಾದ ಮಳೆ ರಾತ್ರಿವರೆಗೂ ಸುರಿಯಿತು. ಆರಂಭದದಲ್ಲಿ ಗಂಟೆಗೂ ಹೆಚ್ಚು ಕಾಲ ಜೋರಾಗಿ ಸುರಿದರೆ, ನಂತರ ಹನಿ ಹಾಕತೊಡಗಿತು. ಸಂಜೆ ವೇಳೆಗೆ ಅರಮನೆ ಆವರಣ, ಆಹಾರ ಮೇಳ, ಚಲನಚಿತ್ರ ಚಿತ್ರ ಪ್ರದರ್ಶನ, ಫಲಪುಷ್ಪ ಪ್ರದರ್ಶನ, ವಸ್ತು ಪ್ರದರ್ಶನದತ್ತ ಧಾವಿಸಿದ ಪ್ರವಾಸಿಗರು ಪರದಾಡುವಂತಾಯಿತು.

ದಸರಾ ವಿದ್ಯುತ್ ದೀಪಾಲಂಕಾರ ವೀಕ್ಷಿಸಿ, ಫೋಟೋ ಕ್ಲಿಕ್ಕಿಸಿಕೊಂಡು ಇಷ್ಟದ ತಿಂಡಿ–ತಿನಿಸು ಸವಿಯಲು ಪರಿತಪಿಸುವಂತಾಯಿತು. ಮಳೆಯ ನಡುವೆಯೇ ಕೆ.ಆರ್. ವೃತ್ತ, ಹಾರ್ಡಿಂಜ್ ವೃತ್ತ, ಎಲ್‌ಐಸಿ ವೃತ್ತ, ವಸ್ತುಪ್ರದರ್ಶನ, ರಾಮಸ್ವಾಮಿ ಸರ್ಕಲ್, ಏಕಲವ್ಯ ವೃತ್ತ ಸೇರಿದಂತೆ ಪ್ರಮುಖ ವೃತ್ತದಲ್ಲಿನ ವಿಶೇಷ ವಿದ್ಯುತ್ ದೀಪಾಲಂಕಾರಗಳನ್ನು ಛತ್ರಿ ಹಿಡಿದುಕೊಂಡು ವೀಕ್ಷಿಸುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಆಹಾರ ಮೇಳ, ವಸ್ತು ಪ್ರದರ್ಶನದಲ್ಲಿ ಮಳೆ ಕಡಿಮೆಯಾಗುತ್ತಿದ್ದಂತೆ ತಂಡೋಪತಂಡವಾಗಿ ಬಂದ ಪ್ರವಾಸಿಗರು, ಕೊಡೆ ಆಸರೆಯಲ್ಲೇ ಇಷ್ಟದ ತಿಂಡಿ–ತಿನಿಸು ಸವಿದು ಸಂತಸಪಟ್ಟರು. ಮಳೆ ಜೋರಿದ್ದಾಗ ಹಲವೆಡೆ ದೀಪಾಲಂಕಾರವನ್ನು ಕಡಿತಗೊಳಿಸಲಾಗಿತ್ತು. ಕಡಿಮೆಯಾಗುತ್ತಿದ್ದಂತೆ ಬೆಳಗಿದ ವಿದ್ಯುತ್ ದೀಪಗಳು ನೋಡುಗರಿಗೆ ಮುದ ನೀಡಿದವು. ನಗರ ಕೇಂದ್ರ ಭಾಗದಲ್ಲಿ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿತ್ತು.

ಇಂದು ಮಕ್ಕಳಿಗೆ ಕಲಾಕೃತಿ ರಚಿಸುವ, ಚಿತ್ರ ಬರೆಯುವ ಸ್ಪರ್ಧೆ

ಮೈಸೂರು,ಅ.5(ಪಿಎಂ)–ದಸರಾ ಪ್ರಯುಕ್ತ ಲಲಿತ ಕಲೆ ಮತ್ತು ಕರಕುಶಲ ಕಲೆ ಉಪಸಮಿತಿ ವತಿಯಿಂದ ಅ.6ರಂದು ಮಕ್ಕಳಿಗಾಗಿ ಮಣ್ಣಿನ ಕಲಾಕೃತಿ ರಚಿಸುವ ಹಾಗೂ ಸ್ಥಳದಲ್ಲಿ ಚಿತ್ರ ಬರೆಯುವ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು(ಕಾವಾ) ಆವರಣದಲ್ಲಿ ಅಂದು ಬೆಳಗ್ಗೆ 9.30ಕ್ಕೆ ಸ್ಪರ್ಧೆಗಳು ನಡೆಯಲಿವೆ. 5ರಿಂದ 7ನೇ ತರಗತಿ ಮಕ್ಕಳಿಗೆ ಮಣ್ಣಿನ ಕಲಾ ಕೃತಿ ರಚಿಸುವ ಸ್ಪರ್ಧೆ ಹಾಗೂ 1ರಿಂದ 4ನೇ ತರಗತಿ ಮತ್ತು 8ರಿಂದ 12ನೇ ತರಗತಿ ಮಕ್ಕಳಿಗೆ ಸ್ಥಳದಲ್ಲಿ ಚಿತ್ರ ಬರೆಯುವ ಸ್ಪರ್ಧೆ ನಡೆಯಲಿದ್ದು, ಡ್ರಾಯಿಂಗ್ ಶೀಟ್ ಮತ್ತು ಜೇಡಿಮಣ್ಣನ್ನು ಸ್ಥಳದಲ್ಲಿ ಕೊಡಲಾಗುವುದು. ಉಳಿದಂತೆ ಬಣ್ಣ ಮತ್ತು ಇತರೆ ಸಾಮಗ್ರಿಗಳನ್ನು ಸ್ಪರ್ಧಿಗಳು ತರಬೇಕು. ಶಾಲಾ–ಕಾಲೇಜಿನ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು. ಸ್ಪರ್ಧೆಗೆ ಪ್ರವೇಶ ಉಚಿತವಿದೆ ಎಂದು ಪ್ರಕಟಣೆ ತಿಳಿಸಿದೆ.

ದೇಶ – ವಿದೇಶ

600ಕ್ಕೂ ಹೆಚ್ಚು ಮಂದಿಯನ್ನು ಬಲಿ ಪಡೆದ ಉಗ್ರರು



ಬುರ್ಕಿನಾ ಫಾಸೊ: ಅಲ್‌ಖೈದಾ ಮತ್ತು ಐಸಿಸ್ ಬೆಂಬಲಿತ ಉಗ್ರಗಾಮಿ ಸಂಘಟನೆಯಾದ ಜಮಾತ್ ನುಸ್ರತ್ ಅಲ್ ಇಸ್ಲಾಂ ವಾಲ್ ಮುಸ್ಲಿಮಿನ್ ಉಗ್ರರು ಆಫ್ರಿಕಾ ಖಂಡದ ಪೂರ್ವ ರಾಷ್ಟ್ರವಾದ ಬುರ್ಕಿನಾ ಫಾಸೊದ ಬಾರ್ಸಲೋಗೋ ನಗರದ ಮೇಲೆ ನಡೆಸಿದ ಗುಂಡಿನ ದಾಳಿಯಲ್ಲಿ 600 ಜನರು ಸಾವನ್ನಪ್ಪಿದ್ದಾರೆ ಎಂದು ಫ್ರೆಂಚ್ ಸರ್ಕಾರ ತಿಳಿಸಿದೆ. ಆದರೆ ದಾಳಿಯ ನಂತರ ವಿಶ್ವಸಂಸ್ಥೆಯು 200 ಜನರು ಸಾವನ್ನಪ್ಪಿದ್ದಾರೆ ಎಂದರೆ, ಜಮಾತ್ ನುಸ್ರತ್ ಅಲ್ ಇಸ್ಲಾಂ ವಾಲ್ ಮುಸ್ಲಿಮಿನ್ ಸಂಘಟನೆಯು ದಾಳಿಯಲ್ಲಿ 300 ಜನರು ಸಾವನ್ನಪ್ಪಿದ್ದರು ಎಂದಿತ್ತು. ಇತ್ತೀಚಿನ ದಶಕದಲ್ಲಿ ಆಫ್ರಿಕಾದಾದ್ಯಂತ ನಡೆದ ಅತ್ಯಂತ ಭೀಕರ ದಾಳಿಯಾಗಿದ್ದು, ಈ ದಾಳಿಯಲ್ಲಿ ಮಹಿಳೆಯರು, ಮಕ್ಕಳು ಎನ್ನದೆ ಎಲ್ಲರನ್ನು ಉಗ್ರರೂ ನಿರ್ದಯವಾಗಿ ಹತ್ಯೆ ಮಾಡಿದ್ದಾರೆ. ಉಗ್ರರಿಂದ ತಪ್ಪಿಸಿಕೊಳ್ಳಲು ನಾಗರಿಕರು ಕಂದಕಗಳನ್ನು ಸೃಷ್ಟಿಸಿದ್ದರು, ಇದರಿಂದ ಕುಪಿತಗೊಂಡ ಜೆಎನ್‌ಐಎಂ ಉಗ್ರ ಸಂಘಟನೆಯು ಕೇವಲ ಒಂದೇ ಘಂಟೆಯಲ್ಲಿ 600 ಜನರು ಹತ್ಯೆ ಮಾಡಿದ್ದಾರೆ ಎಂದು ಫ್ರೆಂಚ್ ಸರ್ಕಾರದ ಭದ್ರತಾ ಮೌಲ್ಯಮಾಪನ ಇಲಾಖೆಯು ಹೇಳಿದೆ.

'ನಾವು ತಾಳ್ಮೆ ಕಳೆದುಕೊಂಡಿದ್ದೇವೆ'; ವಲಸೆ ಕಾರ್ಮಿಕರಿಗೆ ಪಡಿತರ ಚೀಟಿ ವಿಳಂಬಕ್ಕೆ 'ಸುಪ್ರೀಂ' ಆಕ್ರೋಶ



ನವದೆಹಲಿ: ವಲಸೆ ಕಾರ್ಮಿಕರಿಗೆ ಪಡಿತರ ಚೀಟಿ ನೀಡುವಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ವಿಳಂಬ ಧೋರಣೆ ಮಾಡುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ನಾವು ತಾಳ್ಮೆ ಕಳೆದುಕೊಂಡಿದ್ದೇವೆ ಎಂದು ಚಾಟಿ ಬೀಸಿದೆ.

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ಪೀಠವು, ನ.19ರೊಳಗೆ ಈ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೇಂದ್ರ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೊನೆಯ ಸೂಚನೆಯನ್ನು ನೀಡಿತು. 'ನಾವು ನಮ್ಮ ತಾಳ್ಮೆಯನ್ನು ಕಳೆದುಕೊಂಡಿದ್ದೇವೆ, ನಾವು ಅದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇವೆ. ಇನ್ನು ಸಹಿಸಲು ಸಾಧ್ಯವಿಲ್ಲ' ಎಂದು ಹೇಳಿದೆ. ಕೋವಿಡ್ ಸಮಯದಲ್ಲಿ ವಲಸೆ ಕಾರ್ಮಿಕರ ಸಮಸ್ಯೆಗಳು ಮತ್ತು ದುಃಖಗಳನ್ನು ಅರಿತುಕೊಂಡ ನಂತರ 2020ರಲ್ಲಿ ದಾಖಲಾದ ಸ್ವಯಂಪ್ರೇರಿತ ಪ್ರಕರಣವನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿತು. ಈ ವೇಳೆ ಕೋರ್ಟ್, ನಮ್ಮ ಆದೇಶವನ್ನು ಅನುಸರಿಸಲು ನಾವು ನಿಮಗೆ ಕೊನೆಯ ಅವಕಾಶವನ್ನು ನೀಡುತ್ತಿದ್ದೇವೆ ಅಥವಾ ನಿಮ್ಮ ಕಾರ್ಯದರ್ಶಿ ಹಾಜರಿರುತ್ತಾರೆ ಎಂದು ಪೀಠ ಹೇಳಿತು.

ಎಲ್ಲರೂ ಒಂದಾಗಿ ಇಸ್ರೇಲ್ ಅನ್ನು ಸೋಲಿಸೋಣ: ಖಮೇನಿ ಘೋಷಣೆ



ಹರಾನ್(ಇರಾನ್): ಇಸ್ರೇಲ್ ಮೇಲೆ ನೂರಾರು ಖಂಡಾಂತರ ಕ್ಷಿಪಣಿಗಳನ್ನು ಏಕಕಾಲಕ್ಕೆ ಉಡಾಯಿಸಿ ತನ್ನ ಶಕ್ತಿ ಪ್ರದರ್ಶನ ಮಾಡಿದ್ದ ಇರಾನ್, ಇದೀಗ ಯುದ್ಧ ಭೀತಿಯಲ್ಲಿದೆ. ಆದಾಗ್ಯೂ ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ತೆಹರಾನ್‌ನಲ್ಲಿ ಲಕ್ಷ ಲಕ್ಷ ಜನರನ್ನು ಉದ್ದೇಶಿಸಿ ಧರ್ಮೋಪದೇಶ ನೀಡಿದರು. ಎಲ್ಲರೂ ಒಂದಾಗಿ ನಮ್ಮ ಶತ್ರುವನ್ನು ಮಣಿಸೋಣ ಎಂದು ಘೋಷಿಸಿದರು. ತೆಹರಾನ್ ನಗರದ ಕೇಂದ್ರ ಭಾಗದಲ್ಲಿ ಇರುವ ಇಮಾಮ್ ಖೊಮೇನಿ ಗ್ರ್ಯಾಂಡ್ ಮೊಸಲ್ಲಾ ಮಸೀದಿಯಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಜನರು ಸೇರಿದ್ದರು. ಈ ವೇಳೆ ಮಾತನಾಡಿದ ಇರಾನ್ ಸರ್ವೋಚ್ಚ ನಾಯಕ ಹಾಗೂ ಧರ್ಮಗುರು ಅಯತೊಲ್ಲಾ ಅಲಿ ಖಮೇನಿ, ವಿಶ್ವಾದ್ಯಂತ ಇರುವ ಮುಸ್ಲಿಮರಿಗೆ ಶತ್ರುಗಳು ಇದ್ದಾರೆ. ನಾವೆಲ್ಲರೂ ಒಂದಾಗಿ ಸೇರಿ ಆ ಶತ್ರುವನ್ನು ಮಣಿಸಬೇಕು ಎಂದು ಇಸ್ರೇಲ್‌ನ ಹೆಸರು ಹೇಳದೆ ಸಮರದ ಕರೆ ನೀಡಿದರು. ಇರಾನ್ ಕೆಲವು ದಿನಗಳ ಹಿಂದೆ ಇಸ್ರೇಲ್ ಮೇಲೆ ನಡೆಸಿದ ಖಂಡಾಂತರ ಕ್ಷಿಪಣಿ ದಾಳಿಗಳನ್ನು ಕಾನೂನುಬದ್ಧ ಎಂದು ಪ್ರತಿಪಾದಿಸಿದ ಖಮೇನಿ, 2023ರ ಅ.7ರಂದು ಇಸ್ರೇಲ್ ಮೇಲೆ ಹಮಾಸ್ ಉಗ್ರರು ನಡೆಸಿದ ದಾಳಿ ನ್ಯಾಯಸಮ್ಮತ ಎಂದರು.

ಡ್ಯೂಟಿ ಟೈಮ್ ಮುಗಿದಿದೆ ಎಂದು ವಿಮಾನ ಹಾರಿಸಲು ನಿರಾಕರಿಸಿದ ಪೈಲಟ್



ಪುಣೆ: ಪೈಲಟ್, ತನ್ನ ಡ್ಯೂಟಿ ಟೈಮ್ ಮುಗಿದಿದೆ. ವಿಮಾನ ಟೇಕಾಫ್ ಆಗುವುದಿಲ್ಲ ಎಂದು ಹೇಳಿದ್ದಕ್ಕೆ ಸುಮಾರು 200 ಪ್ರಯಾಣಿಕರಿಂದ ತುಂಬಿದ್ದ ಫ್ಲೈಟ್‌ನೊಳಗಿದ್ದವರು ಆಘಾತಕ್ಕೊಳಗಾದ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ಏತನ್ಮಧ್ಯೆ, ಆಕ್ರೋಶಗೊಂಡ ಪ್ರಯಾಣಿಕರು ವಿಮಾನ ಹಾರಿಸುವಂತೆ ಒತ್ತಾಯಿಸುತ್ತಿರುವಾಗ ಪೈಲಟ್ ಕಾಕ್‌ಪಿಟ್ ಬಾಗಿಲನ್ನು ಮುಚ್ಚುತ್ತಿರುವುದು ವಿಡಿಯೋದಲ್ಲಿ ಕಂಡುಬರುತ್ತದೆ. ಅಂತಿಮವಾಗಿ ಗಂಟೆಗಳ ನಂತರ ವಿಮಾನವನ್ನು(6ಇ 361) ಬೇರೆ ಪೈಲಟ್‌ನಿಂದ ಹಾರಿಸಲಾಯಿತು ಮತ್ತು 5 ಗಂಟೆಗಳ ನಂತರ ಬೆಂಗಳೂರು ತಲುಪಿತು. ಘಟನೆಯನ್ನು ಖಚಿತಪಡಿಸಿದ ಇಂಡಿಗೋ, ಪುಣೆಯಿಂದ ಬೆಂಗಳೂರಿಗೆ ಹಾರಾಟ ನಡೆಸಲು ಉದ್ದೇಶಿಸಲಾದ 6ಇ 361 ವಿಮಾನವು ವಿಮಾನ ಕರ್ತವ್ಯದ ಸಮಯದ ಮಿತಿಗಳಿಗೆ ಸಂಬಂಧಿಸಿದ ಕಾರ್ಯಾಚರಣೆಯ ಕಾರಣಗಳಿಂದ ವಿಳಂಬವಾಗಿದೆ. ವಿಳಂಬದ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡಲಾಗಿದೆ ಮತ್ತು ಗ್ರಾಹಕರಿಗೆ ಸಹಾಯ ಮಾಡಲು ನಮ್ಮ ತಂಡ ಲಭ್ಯವಿತ್ತು. ಈ ಅನಾನುಕೂಲತೆಗಾಗಿ ನಾವು ಕ್ಷಮೆಯಾಚಿಸುತ್ತೇವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತದಲ್ಲಿ ಸಾಯೋದು ನನಗೆ ಇಷ್ಟವಿಲ್ಲ!; ಮಗನ ಬೈಕ್ ಸುಟ್ಟು ಹಾಕಿದ ತಂದೆ



ಮಲೇಷ್ಯಾ: ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳು ಬಯಸಿದ್ದೆಲ್ಲವನ್ನೂ ಕೊಡಿಸಬೇಕು ಎಂದು ಬಯಸುತ್ತಾರೆ. ಮಕ್ಕಳ ಕನಸನ್ನು ನನಸು ಮಾಡುವುದರಲ್ಲೇ ಖುಷಿ ಕಾಣುತ್ತಾರೆ. ಆದರೆ ಅವರಿಗೆ ನೀಡಿರುವ ಸವಲತ್ತುಗಳಿಂದಲೇ ಮಕ್ಕಳಿಗೆ ಕುತ್ತು ಎಂದು ತಿಳಿದಾಗ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಇಂಥದ್ದೊಂದು ಘಟನೆ ಮಲೇಷ್ಯಾದಲ್ಲಿ ನಡೆದಿದೆ.

ಸೌತ್ ಚೈನಾ ಮಾರ್ನಿಂಗ್ ಪೋಸ್ಟ್ ವರದಿ ಪ್ರಕಾರ, ತಂದೆಯೇ ಖುಷಿಯಿಂದ ಮಗನಿಗೆ ಬೈಕ್ ಕೊಡಿಸಿದ್ದರು, ಆದರೆ ಆ ಬೈಕ್ ಮಗನಿಗೆ ಕುತ್ತೆಂದು ತಿಳಿದ ಅವರು ಹೆಚ್ಚು ಯೋಚಿಸದೆ ಅದಕ್ಕೆ ಬೆಂಕಿ ಹಚ್ಚಿದ್ದಾರೆ. ಮಗನೇ... ನೀನು ಅಪಘಾತದಲ್ಲಿ ಸಾಯುವುದು ನನಗೆ ಇಷ್ಟವಿಲ್ಲ ಎಂದು ಹೇಳಿದ್ದಾರೆ. ಕೌಲಾಲಂಪುರದಿಂದ ಸ್ವಲ್ಪ ದೂರದ ಸ್ಥಳದಲ್ಲಿ ಈ ಘಟನೆ ನಡೆದಿದ್ದು ಸ್ವತಃ ತಂದೆಯೇ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ಅದರಲ್ಲಿ ಬೈಕ್ ಸುಟ್ಟು ಹಾಕಿದ್ದಾರೆ. ಮಗ ಹಲವು ಮೋಟಾರ್ ಬೈಕ್ ರೇಸ್‌ಗಳಲ್ಲಿ ಪಾಲ್ಗೊಂಡು ಸಂಜೆ ತುಂಬಾ ತಡವಾಗಿ ಮನೆಗೆ ಮರಳುತ್ತಿದ್ದ. ಈ ಕಾರಣದಿಂದಾಗಿ, ಅವನ ತಂದೆ ಬೈಕ್ ಧ್ವಂಸ ಮಾಡಬೇಕು ಎಂದು ನಿರ್ಧರಿಸಿದ್ದರು.

ಭಾರಿ ಗಾತ್ರದ ಹೆಬ್ಬಾವು ಸೆರೆ



ಮಡಿಕೇರಿ,ಅ.5– ವಿರಾಜಪೇಟೆ ಸಮೀಪದ ಪೆರುಂಬಾಡಿಯ ಖಾಸಗಿ ರೆಸಾರ್ಟ್‌ವೊಂದರ ಕಾಫಿ ತೋಟದಲ್ಲಿ ಭಾರಿ ಗಾತ್ರದ ಹೆಬ್ಬಾವನ್ನು ಸೆರೆ ಹಿಡಿದು ಸುರಕ್ಷಿತ ಸ್ಥಳಕ್ಕೆ ಬಿಡಲಾಗಿದೆ.

ಹೆಬ್ಬಾವನ್ನು ಕಂಡು ಆತಂಕಗೊಂಡ ಕಾರ್ಮಿಕರು ತೋಟದ ವ್ಯವಸ್ಥಾಪಕರಿಗೆ ಈ ಕುರಿತು ಮಾಹಿತಿ ನೀಡಿದ್ದಾರೆ. ಬಳಿಕ ಸ್ಥಳಕ್ಕಾಗಮಿಸಿದ ಆಟೋ ಸ್ನೇಕ್ ಸತೀಶ್ ಅವರು ಕಾಫಿ ತೋಟದಲ್ಲಿದ್ದ ಸುಮಾರು 12 ಅಡಿ ಉದ್ದ 20 ಕೆಜಿ. ತೂಕದ ಗಂಡು ಹೆಬ್ಬಾವನ್ನು ಸುರಕ್ಷಿತವಾಗಿ ಸೆರೆ ಹಿಡಿದು ಮಾಕುಟ್ಟದ ಅರಣ್ಯಕ್ಕೆ ಬಿಟ್ಟಿದ್ದಾರೆ. ಆಟೋ ಸ್ನೇಕ್ ಸತೀಶ್ ಅವರು ಇದುವರೆಗೂ ಸಾವಿರಾರು ಸಂಖ್ಯೆಯಲ್ಲಿ ಹಾವುಗಳನ್ನು ಸುರಕ್ಷಿತವಾಗಿ ಸೆರೆ ಹಿಡಿದು ಜನಮೆಚ್ಚುಗೆ ಪಡೆದಿದ್ದಾರೆ.

ಕಾಡಾನೆ ದಾಳಿ: ಕಾರು ಜಖಂ



ಗೋಣಿಕೊಪ್ಪ, ಅ.5– ಕಾಡಾನೆ ದಾಳಿ ನಡೆಸಿ ಕಾರನ್ನು ಜಖಂಗೊಳಿಸಿರುವ ಘಟನೆ ತಿತಿಮತಿ ನೋಕ್ಯ ಗ್ರಾಮದಲ್ಲಿ ನಡೆದಿದೆ.

ಬೆಳಗ್ಗೆ 9 ಗಂಟೆ ವೇಳೆಯಲ್ಲಿ ತೋಟದಿಂದ ಏಕಾಏಕಿ ಮುಖ್ಯರಸ್ತೆಗೆ ಓಡಿ ಬಂದು ಅಂಗಡಿ ಸಮೀಪ ನಿಂತಿದ್ದ ಕಾರಿನ ಮೇಲೆ ದಾಳಿ ನಡೆಸಿದೆ. ಪಕ್ಕದಲ್ಲೇ ನಿಂತಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾಡಾನೆಗಳು ದಾಳಿ ನಡೆಸುತ್ತಿರುವುದರಿಂದ ತೋಟದಲ್ಲಿ ಕೆಲಸ ಮಾಡಲು ಕಾರ್ಮಿಕರು ಹಿಂದೇಟು ಹಾಕುತ್ತಿದ್ದಾರೆ.

ಅರಣ್ಯಾಧಿಕಾರಿಗಳು ಕಾಡಾನೆಗಳು ಓಡಿಸಲು ಸರಿಯಾದ ಕ್ರಮವಹಿಸುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ.

ದಸರಾದಲ್ಲಿ ನೂರಾರು ಮಕ್ಕಳಿಂದ ಪ್ರತಿಭೆ ಅನಾವರಣ

ರೈತರಂತೆ ವ್ಯಾಪಾರ, ಮಣ್ಣಿನಲ್ಲಿ ಕಲಾಕೃತಿ ನಿರ್ಮಾಣ, ಚಿಣ್ಣರ ಛದ್ಮವೇಷ, ಮಿನಿ ದಸರಾ

ಮಡಿಕೇರಿ,ಅ.5–ಪಠ್ಯ ಚಟುವಟಿಕೆಗಳನ್ನು ಮೀರಿ ಮಕ್ಕಳಲ್ಲಿ ಹುದುಗಿರುವ ಅಗಾಧ ಪ್ರತಿಭೆಯತ್ತ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಮಡಿಕೇರಿ ದಸರಾ ಜನೋತ್ಸವದ ಅಂಗವಾಗಿ ಗಾಂಧಿ ಮೈದಾನದಲ್ಲಿ ಆಯೋಜಿಸಿದ್ದ 'ಮಕ್ಕಳ ದಸರಾ' ನೂರಾರು ಮಕ್ಕಳ ಉತ್ಸಾಹದ ಪಾಲ್ಗೊಳ್ಳುವಿಕೆಯ ಮೂಲಕ ಯಶಸ್ಸು ಕಂಡಿದೆ. ಮಾತ್ರವಲ್ಲದೇ ಮಕ್ಕಳ ಅಸಾಧಾರಣ ಪ್ರತಿಭೆ ನೋಡುಗರನ್ನು ಬೆರಗಾಗುವಂತೆ ಮಾಡಿತು.

ಮಡಿಕೇರಿ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಮಡಿಕೇರಿ ದಸರಾ ಸಮಿತಿ, ದಸರಾ ಸಾಂಸ್ಕೃತಿಕ ಸಮಿತಿಗಳ ಸಹಕಾರದೊಂದಿಗೆ ಆಯೋಜಿತ ಮಕ್ಕಳ ದಸರಾ ಸಂಭ್ರಮವನ್ನು ಶನಿವಾರ ಬೆಳಗ್ಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಛದ್ಮ ವೇಷಧಾರಿ ಪುಟಾಣಿ ಮಕ್ಕಳು ಮತ್ತು ಅತಿಥಿ ಗಣ್ಯರ ಸಮ್ಮುಖದಲ್ಲಿ ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ಮಕ್ಕಳ ಪ್ರತಿಭಾ ಪ್ರದರ್ಶನ, ಚಟುವಟಿಕೆಗಳು ನಮಗೆ ಸ್ಫೂರ್ತಿಯಾಗಿದೆ. ಮಾತ್ರವಲ್ಲದೆ ಅವರಿಂದ ಕಲಿಯುವಂತಹದ್ದು ಸಾಕಷ್ಟು ಇದೆ ಎಂದು ಮುಕ್ತವಾಗಿ ನುಡಿದರು. ಸಮಾಜ ವ್ಯವಸ್ಥೆಯಲ್ಲಿ ನಡೆಯುವ ವ್ಯಾಪಾರ ವಹಿವಾಟುಗಳು, ಹಣಕಾಸಿನ ವ್ಯವಹಾರಗಳ ಬಗ್ಗೆ ಮಕ್ಕಳ ಸಂತೆ ಮಕ್ಕಳಲ್ಲಿ ಅರಿವನ್ನು ಮೂಡಿಸುತ್ತದೆ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಆತ್ಮಸ್ಥೈರ್ಯವನ್ನು



ಮಕ್ಕಳ ರೈತಸಂತೆಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ತರಕಾರಿ ಖರೀದಿಸುವ ಮೂಲಕ ಮಕ್ಕಳಿಗೆ ಪ್ರೋತ್ಸಾಹ ನೀಡಿದರು.

ತುಂಬಲು ಸಹ ಸಾಕಷ್ಟು ನೆರವಾಗಲಿದೆ ಎಂದು ಅಭಿಪ್ರಾಯಿಸಿದರು.

'ಆನ್‌ಲೈನ್'ನಲ್ಲಿ ಮಡಿಕೇರಿ ದಸರಾ: ನಮ್ಮ ಇತಿಹಾಸ, ಪುರಾಣಗಳನ್ನು ಆಧರಿಸಿ ನಡೆಯುತ್ತಿರುವ ಛದ್ಮವೇಷ ಸ್ಪರ್ಧೆಗಳು ಮಕ್ಕಳಿಗೆ ನಮ್ಮ ಸಂಸ್ಕೃತಿಯ ಬಗ್ಗೆ ಅರಿವನ್ನು ಮೂಡಿಸಬಲ್ಲುದು ಮತ್ತು ಇವೆಲ್ಲವು ಉತ್ತಮ ಭವಿಷ್ಯಕ್ಕೆ ಪೂರಕವಾಗಿದೆ ಎಂದು ತಿಳಿಸಿದರು. ಮಡಿಕೇರಿ ದಸರಾ ಉತ್ಸವನ್ನು 'ಆನ್‌ಲೈನ್' ಮೂಲಕ ನಾಡಿನೆಲ್ಲೆಡೆಗೆ ತಲುಪಿಸುವ ಪ್ರಯತ್ನಗಳು ನಡೆದಿವೆ ಎಂದು ತಿಳಿಸಿದರು.

ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಅನಿಲ್ ಹೆಚ್.ಟಿ. ಮಾತನಾಡಿ, ಈ ಬಾರಿಯ ಮಕ್ಕಳ ಸಂತೆಗೆ ಜಿಲ್ಲೆಯ ವಿವಿಧೆಡೆಗಳಿಂದ 680ಕ್ಕೂ ಹೆಚ್ಚಿನ ಮಕ್ಕಳು ನೋಂದಾಯಿಸಿಕೊಂಡು, ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕ್ಲೇ ಮಾಡೆಲಿಂಗ್ ವಿಭಾಗದಲ್ಲಿ 30ಕ್ಕೂ ಹೆಚ್ಚಿನ ಮಕ್ಕಳಿ ಭಾಗವಹಿಸಿದ್ದಾರೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ, ದಸರಾ ಸಮಿತಿ ಪ್ರಧಾನ ಕಾರ್ಯದರ್ಶಿ ರಾಜೇಶ್ ಯಲ್ಲಪ್ಪ, ಖಜಾಂಚಿ ಅರುಣ್ ಶೆಟ್ಟಿ, ವಾರ್ತಾಧಿಕಾರಿ ಚಿನ್ನಸ್ವಾಮಿ ಪಾಲ್ಗೊಂಡಿದ್ದರು.

ಮಕ್ಕಳ ವ್ಯಾಪಾರದ ಭರಾಟೆ: ರೈತನಂತೆ, ರೈತ ಮಹಿಳೆಯಂತೆ ವೇಷ ತೊಟ್ಟು ತರಕಾರಿ ಕಾಯಿ ಪಲ್ಲೆ ಮಾರಾಟ ಮಾಡುವ ಮಕ್ಕಳ ಉತ್ಸಾಹ, ತಿಂಡಿ ತಿನಿಸು, ಜ್ಯೂಸ್ ತಯಾರಿ ಮತ್ತು ಮಾರಾಟ, ಗ್ರಾಹಕರನ್ನು ತಮ್ಮೆಡೆಗೆ ಸೆಳೆಯುವ ಮಕ್ಕಳ ಪ್ರಯತ್ನಗಳೆಲ್ಲವು ಮುದ ನೀಡಿತು. ಯಾವುದೇ ಸಂತೆ ಮಾರುಕಟ್ಟೆಯನ್ನು ಮೀರಿಸುವಂತೆ ಎಲ್ಲಾ ವಿಧದ ತರಕಾರಿಗಳು, ಹಣ್ಣು ಹಂಪಲು ಅದರಲ್ಲೂ ಗ್ರಾಮೀಣ ಭಾಗಕ್ಕೆ ಸೀಮಿತವಾಗಿ ಹೋಗಿರುವ ಚಕೋತ, ಬಂಡು ಹುಳಿ, ಕೆಸ, ತೆರ್ಮೆ ಸೊಪ್ಪು ಹಳ್ಳಿಯ ಸೊಗಡು ಅಲ್ಲಿತ್ತು. ಜೊತೆಗೆ ಮಕ್ಕಳ ಕಲರವ, ಮಕ್ಕಳು ಮಾರಾಟಕ್ಕಿಟ್ಟ ತರಕಾರಿಗಳನ್ನು, ಸಾರ್ವಜನಿಕರು ಅಷ್ಟೇ ಉತ್ಸಾಹದಿಂದ ಖರೀದಿಸಿಕೊಂಡೊಯ್ಯುತ್ತಿದ್ದುದು ಗಮನ ಸೆಳೆಯಿತು. ಸ್ವತಃ ಜಿಲ್ಲಾಧಿಕಾರಿಗಳು ಕೂಡ ಮಕ್ಕಳ ಸಂತೆಯಲ್ಲಿ ಸುತ್ತು ಹಾಕಿ ಮಕ್ಕಳಿಂದ ಹಣ್ಣುಗಳಿಂದ ಖರೀದಿ ಮಾಡಿ ಮನೆಗೆ ಕೊಂಡೊಯ್ಯುವ ಮೂಲಕ ಮಕ್ಕಳ ಪ್ರಯತ್ನಕ್ಕೆ ಬೆಂಬಲ ನೀಡಿದರು.

ಮಣ್ಣಿನಲ್ಲಿ ಕಲಾ ಕುಸುರಿ: ಜೇಡಿ ಮಣ್ಣಿನಲ್ಲಿ ಕಲಾಕೃತಿಗಳನ್ನು ನಡೆಸುವ ಕ್ಲೇ ಮಾಡೆಲಿಂಗ್‌ನಲ್ಲಿ ಪಾಲ್ಗೊಂಡಿದ್ದ ಜಿಲ್ಲೆಯ ವಿವಿಧೆಡೆಯ ಮಕ್ಕಳು, ನೋಡುಗರು ನಿಬ್ಬೆರಗಾಗಿಸು ಕಲಾಕೃತಿಗಳನ್ನು ರಚಿಸಿದ್ದು ವಿಶೇಷವಾಗಿತ್ತು. ನೈಜ ಗಾತ್ರದ ಮೊಸಳೆ ಕಲಾಕೃತಿ, ಜಿಂಕೆ, ಅಂಬಾರಿ ಆನೆ, ಒಂಟೆ ಮೊದಲಾದ ಕಲಾಕೃತಿಗಳು ಮಕ್ಕಳ ಪ್ರತಿಭೆಗೆ ಸಾಕ್ಷಿ ನುಡಿಯುತ್ತಿದ್ದವು.

ಪುಟಾಣಿಗಳ ಛದ್ಮವೇಷ: ನೂರಾರು ಸಂಖ್ಯೆಯ ಪುಟಾಣಿ ಮಕ್ಕಳ ಛದ್ಮವೇಷ ಸ್ಪರ್ಧೆ ಗಮನ ಸೆಳೆದವು. ಪೌರಾಣಿಕ ಪಾತ್ರಗಳು, ಮಹಾನ್ ನಾಯಕರು, ಕೊಡವ ಸಾಂಪ್ರದಾಯಿಕ ಉಡುಪು ಹೀಗೆ ವಿವಿಧ ರೀತಿಯಲ್ಲಿ ಛದ್ಮವೇಷ ಧರಿಸಿದ ಪುಟಾಣಿಗಳು ವೇದಿಕೆಯನ್ನೇರಿ ತಮ್ಮದೇ ಬಾಲ ಭಾಷೆಯಲ್ಲಿ ಪ್ರಸ್ತುತಪಡಿಸಿದ ಪುಟ್ಟ ಪುಟ್ಟ ಪ್ರಸಂಗಗಳು ಮಕ್ಕಳ ದಸರಾಗೆ ಮೆರುಗು ತುಂಬಿತು.

ಮಕ್ಕಳಿಂದ ಮಿನಿ ದಸರಾ : ಮಡಿಕೇರಿ ದಸರಾದ ಭವ್ಯ ಶೋಭಾಯಾತ್ರೆಯಲ್ಲಿ ಮಂಟಪಗಳು ಪೌರಾಣಿಕ ಕಥೆಗಳನ್ನು ಆಧರಿಸಿ ಪ್ರಸ್ತುತಪಡಿಸುವ ಕಲಾಕೃತಿಗಳಂತೆಯೇ ಹತ್ತಾರು ಮಕ್ಕಳ ಮಂಟಪಗಳನ್ನು ಮಕ್ಕಳೆ ವಿಶೇಷ ಕಾಳಜಿಯಿಂದ ರೂಪಿಸಿ ಪ್ರದರ್ಶಿಸಿದ್ದು ವಿಶೇಷವಾಗಿತ್ತು. ಹಿನ್ನೆಲೆ ಧ್ವನಿ, ಫಾಗ್, ಪೇಪರ್ ಬ್ಲಾಸ್ಟ್, ಕೂಲ್ ಫಯರ್‌ಗಳನ್ನು ಮಕ್ಕಳು ಮಂಟಪಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ಭವಿಷ್ಯದ ದಶ ಮಂಟಪಗಳ ಸೂತ್ರಧಾರಿಗಳು ನಾವೇ ಎಂದು ತಮ್ಮ ಪರಿಣತಿಯನ್ನು ಪ್ರದರ್ಶಿಸಿದರು. ನೂರಾರು ಮಂದಿ ಮಕ್ಕಳ ಮಂಟಪಗಳನ್ನು ವೀಕ್ಷಿಸುವ ಮೂಲಕ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿದರು.

ಅಕ್ರಮ ಮರ ಸಾಗಾಟ: ವಾಹನ ಸೇರಿ 8 ಲಕ್ಷ ರೂ. ಮೌಲ್ಯದ ಮರ ವಶ



ಅರಣ್ಯ ಇಲಾಖೆ ಅಧಿಕಾರಿಗಳು ಭಾರಿ ಪ್ರಮಾಣದ ಮರದ ನಾಟಗಳನ್ನು ವಶಪಡಿಸಿಕೊಂಡಿರುವುದು. ವಿ.ಪೇಟೆ ವಲಯದ ಉಪ ವಲಯ ಅರಣ್ಯಾಧಿಕಾರಿ ದೇವಯ್ಯ, ಸಿಬ್ಬಂದಿ ಇದ್ದಾರೆ.

ಸಿದ್ದಾಪುರ, ಅ.5– ವಿರಾಜಪೇಟೆ ಅರಣ್ಯ ವಲಯದ ವಿರಾಜಪೇಟೆ ಶಾಖೆಯ ವ್ಯಾಪ್ತಿಯ ಅಂಬಟ್ಟಿ ಗ್ರಾಮದಲ್ಲಿ ಸ್ವರಾಜ್ ಮಜ್ದಾ ವಾಹನದಲ್ಲಿ ಅಕ್ರಮವಾಗಿ ನಂದಿ ಮತ್ತು ಹಲಸು ಮರದ ನಾಟಗಳನ್ನು ಸಾಗಿಸುತ್ತಿದ್ದ ಪ್ರಕರಣವನ್ನು ಭೇದಿಸಿರುವ ವಿರಾಜಪೇಟೆ ಅರಣ್ಯ ವಲಯದ ಸಿಬ್ಬಂದಿಗಳು ಅಂದಾಜು 2 ಲಕ್ಷ ಮೌಲ್ಯದ ಮರ ಹಾಗೂ ವಾಹನ ಸೇರಿ 8 ಲಕ್ಷ ಮೌಲ್ಯದ ಸೊತ್ತುನ್ನು ವಶಪಡಿಸಿಕೊಂಡಿದ್ದಾರೆ.

ವಿರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಹೆಚ್.ಜಗನ್ನಾಥ ಮತ್ತು ವಿರಾಜಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸುರಕ್ಷಾಧಿಕಾರಿ ಕೆಪಿಗೋಪಾಲ ಅವರ ಮಾರ್ಗದರ್ಶನದಲ್ಲಿ ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕೆ.ವಿ.ಶಿವರಾಮ್ ಇವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ವಾಹನ ಹಾಗೂ ಮರದ ತುಂಡುಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳು ದಾಳಿ ನಡೆಸಿದ ವೇಳೆ ಪರಾರಿಯಾಗಿದ್ದಾರೆ.

ಸುಮನ್ ಸೀತಮ್ಮನವರ 'ಭಾವಸ್ತುತಿ' ಕೃತಿ ಬಿಡುಗಡೆ

ಮಡಿಕೇರಿ:ಕೊಡವ ಮಕ್ಕಡ ಕೂಟದ 95ನೇ ಪುಸ್ತಕ, ಬರಹಗಾರ್ತಿ ಸುಮನ್ ಸೀತಮ್ಮ ಅವರು ರಚಿಸಿರುವ 'ಭಾವಸ್ತುತಿ' ಯನ್ನು ಇಂದು ಬಿಡುಗಡೆ ಮಾಡಲಾಯಿತು.

ನಗರದ ಪತ್ರಿಕಾ ಭವನದಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಬರಹಗಾರರು ಹಾಗೂ ಸಮಾಜ ಸೇವಕರಾದ ತೆನ್ನಿರ ಟೀನಾ ಚಂಗಪ್ಪ, ಹೊಸ ಹೊಸ ಬರಹಗಾರರು ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಬರಬೇಕು. ಸಾಹಿತ್ಯಾಭಿಮಾನಿಗಳು ಆರ್ಥಿಕ ಸಹಕಾರ ಮತ್ತು ನೆರವು ನೀಡುತ್ತಾರೆ ಆರ್ಥಿಕತೆಯ ಕಾರಣದಿಂದ ಬರಹಗಾರರು ಹಿಂದೆ ಸರಿಯಬಾರದು ಎಂದರು.

ಸಾಹಿತ್ಯ ಕ್ಷೇತ್ರ ಮತ್ತು ಬರಹಗಾರರಿಗೆ ಕೊಡವ ಮಕ್ಕಡ ಕೂಟ ನೀಡುತ್ತಿರುವ ಪ್ರೋತ್ಸಾಹ ಶ್ಲಾಘನೀಯ. ಕೂಟದ 100ನೇ ಪುಸ್ತಕ ಸದ್ಯದಲ್ಲಿಯೇ ಬಿಡುಗಡೆಯಾಗುತ್ತಿದ್ದು, ಮತ್ತಷ್ಟು ಪುಸ್ತಕಗಳು ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ ಅವರ ಪರಿಶ್ರಮದಿಂದ ಸಾಹಿತ್ಯ ಲೋಕಕ್ಕೆ ಸಿಗಲಿ ಎಂದು ಹಾರೈಸಿದರು.

'ಭಾವಸ್ತುತಿ' ಪುಸ್ತಕದ ಬರಹಗಾತಿ ಬೊಟ್ಟಂಗಡ ಸುಮನ್ ಸೀತಮ್ಮ, ಬಾಳೆಯಡ ಮೀನಾ ಕುಮಾರಿ, ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿದರು.

ಕೊಡವ ಸಮಾಜ ಪೊಮ್ಮಕ್ಕಡ ಒಕ್ಕೂಟದ ಖಜಾಂಚಿ ಉಳ್ಳಿಯಡ ಗಂಗಮ್ಮ ನಂಜಪ್ಪ, ಬೊಟ್ಟಂಗಡ ತಿಲಕ್ ಉಪಸ್ಥಿತರಿದ್ದರು.



ಸುಮನ್ ಸೀತಮ್ಮ ರಚಿಸಿರುವ 'ಭಾವಸ್ತುತಿ'ಯನ್ನು ಬಿಡುಗಡೆ ಮಾಡಲಾಯಿತು.

ನಾಪೋಕ್ಲು ವ್ಯಾಪ್ತಿಯಲ್ಲಿ ಭಾರಿ ಮಳೆ



ನಾಪೋಕ್ಲುವಿನಲ್ಲಿ ಶನಿವಾರ ಸುರಿದ ಭಾರಿ ಮಳೆಯಿಂದ ರಸ್ತೆ ಜಲಾವೃತಗೊಂಡಿರುವುದು.

ನಾಪೋಕ್ಲು: ನಾಪೋಕ್ಲು ಪಟ್ಟಣ ವ್ಯಾಪ್ತಿಯಲ್ಲಿ ಶನಿವಾರ ಸಂಜೆ ಭಾರಿ ಮಳೆ ಸುರಿಯಿತು. ಪಟ್ಟಣ ಸೇರಿದಂತೆ ವಿವಿಧೆಡೆ ವ್ಯಾಪಕ ಮಳೆಯಾಯಿತು. ರಭಸದ ಮಳೆಯಿಂದ ತೋಡಿನಲ್ಲಿ ನೀರು ಉಕ್ಕಿ ಹರಿಯಿತು. ರಸ್ತೆಗಳಲ್ಲೂ ತುಂಬಿ ಹರಿದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಈ ವರ್ಷ ಇದುವರೆಗೆ 172 ಇಂಚು ಮಳೆಯಾಗಿದೆ. ಕಳೆದ ವರ್ಷ ಈ ಅವಧಿಗೆ ಕೇವಲ 73 ಇಂಚು ಮಳೆಯಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈಗಾಗಲೇ 100 ಇಂಚು ಹೆಚ್ಚು ಮಳೆಯಾಗಿದೆ. ಪಟ್ಟಣದಲ್ಲಿ ಶನಿವಾರ ಸುಮಾರು ಎರಡೂವರೆ ಇಂಚು ಮಳೆಯಾಗಿದ್ದು ಜನಜೀವನ ಅಸ್ತವ್ಯಸ್ತಗೊಂಡಿತ್ತು.

ನಾಳೆಯಿಂದ ಮೂರು ದಿನ ಚೆಲುವ ಚಾಮರಾಜನಗರ ಜಿಲ್ಲಾ ದಸರಾ

ವೈವಿಧ್ಯಮಯ ಕಾರ್ಯಕ್ರಮಗಳ ಆಯೋಜನೆ

ಚಾಮರಾಜನಗರ, ಅ.5– ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಭಾಗವಾಗಿ ಚಾಮರಾಜನಗರ ಜಿಲ್ಲೆಯಲ್ಲೂ ಚೆಲುವ ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವ ಕಾರ್ಯಕ್ರಮವನ್ನು ಅ.7 ರಿಂದ 9ರವರೆಗೆ ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದೆ.

ಅ.7ರಂದು ಚೆಲುವ ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವ ಚಾಲನೆ ದೊರೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಅಂದು ಮಧ್ಯಾಹ್ನ 12.15 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯದ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ನಂತರ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಉದ್ಯಾನವನದಲ್ಲಿರುವ ಕನ್ನಡ ನಾಡದೇವತೆ ಭುವನೇಶ್ವರಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುತ್ತದೆ. ಮಧ್ಯಾಹ್ನ 12.30 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಉದ್ಯಾನವನದಲ್ಲಿ ಚಿತ್ರಸಂತೆ ಉದ್ಘಾಟನೆ, ಮಧ್ಯಾಹ್ನ 12.50 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳ ಉದ್ಘಾಟನೆ ಹಾಗೂ ಮಧ್ಯಾಹ್ನ 12.45 ಗಂಟೆಗೆ ಮಹಿಳಾ ದಸರಾ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ.

ಮಧ್ಯಾಹ್ನ 1 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಫಲಪುಷ್ಪ ಪ್ರದರ್ಶನದ ಉದ್ಘಾಟನೆ ನೆರವೇರಲಿದೆ. ಮಧ್ಯಾಹ್ನ 1.15 ಗಂಟೆಗೆ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕವಿಗೋಷ್ಠಿ. ಮಧ್ಯಾಹ್ನ 145 ಗಂಟೆಗೆ ಜಿಲ್ಲಾಡಳಿತ ಭವನದಿಂದ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದವರೆಗೆ ಕಲಾತಂಡಗಳೊಂದಿಗೆ ಮುಖ್ಯ ಮೆರವಣಿಗೆ ನಡೆಯಲಿದೆ.

ಮಧ್ಯಾಹ್ನ 3.15 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಗ್ರಾಮೀಣ ಕ್ರೀಡಾಕೂಟದ ಉದ್ಘಾಟನೆ ಹಾಗೂ 3.45 ಗಂಟೆಗೆ ನಗರದ ಸಿಂಹ ಚಿತ್ರಮಂದಿರದಲ್ಲಿ ಚಲನಚಿತ್ರೋತ್ಸವ ಉದ್ಘಾಟನೆ ನೆರವೇರಲಿದೆ. ಸಂಜೆ 6ಕ್ಕೆ ನಗರದ ಜನನ ಮಂಟಪದಲ್ಲಿ ಖಾಸಗಿ ದರ್ಬಾರ್ ನಡೆಯಲಿದೆ. ಸಂಜೆ 6.30 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣ ಮುಖ್ಯ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಂಜೆ 7.30 ಗಂಟೆಗೆ ಯುವದಸರಾ ಕಾರ್ಯಕ್ರಮದ ಉದ್ಘಾಟನೆ ನಡೆಯಲಿವೆ.

ಅ.8ರಂದು ಬೆಳಿಗ್ಗೆ 6.30 ಗಂಟೆಗೆ ಮ್ಯಾರಥಾನ್ ಆಯೋಜಿಸಲಾಗಿದೆ. ಮಧ್ಯಾಹ್ನ 2ರಿಂದ ರಾತ್ರಿ 9.45ಗಂಟೆಯವರೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣ, ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರ ಮತ್ತು ಜಿಲ್ಲಾಡಳಿತ ಭವನದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಅ.9 ರಂದು ಬೆಳಿಗ್ಗೆ 6.30 ಗಂಟೆಗೆ ಪಾರಂಪರಿಕ ನಡಿಗೆ, ಬೆಳಿಗ್ಗೆ 9.30 ಗಂಟೆಗೆ ರೈತ ದಸರಾ ಕಾರ್ಯಕ್ರಮದ ಮೆರವಣಿಗೆ ಹಾಗೂ ಬೆಳಿಗ್ಗೆ 11 ಗಂಟೆಗೆ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ರೈತ ದಸರಾ ವೇದಿಕೆ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ.

ಬೆಳಿಗ್ಗೆ 10 ರಿಂದ ಸಂಜೆ 6.30 ಗಂಟೆಯವರೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣ, ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರ ಮತ್ತು ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್ ಪಟೇಲ್ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ.

ಸಂಜೆ 6.30 ರಿಂದ ರಾತ್ರಿ 9.45 ಗಂಟೆಯವರೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ 2024ನೇ ಸಾಲಿನ ದಸರಾ ಕಾರ್ಯಕ್ರಮದ ಸಮಾರೋಪ ಸಮಾರಂಭ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ರಂಗಪ್ಪನ ದರ್ಶನ ಪಡೆದ ಸಿಜೆಐ



ಚಾಮರಾಜನಗರ, ಅ.5– ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಕುಟುಂಬ ಸಮೇತ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದ ಬಿಳಿಗಿರಿರಂಗನಾಥ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ಸ್ವಾಮಿಗೆ ಪೂಜೆ ಸಲ್ಲಿಸಿದರು.

ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ರಂಗನಾಥಸ್ವಾಮಿ ದೇವಾಲಯಕ್ಕೆ ಆಗಮಿಸಿದ ಸಿಜೆಐ ಅವರನ್ನು ದೇವಾಲಯದ ಅಧಿಕಾರಿಗಳು ಮಂಗಳವಾದ್ಯ ಸಮೇತ ಬರಮಾಡಿಕೊಂಡರು.

ಬಳಿಕ ಅವರು ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದ ವತಿಯಿಂದ ಅವರನ್ನು ಸತ್ಕರಿಸಲಾಯಿತು. ನಂತರ ಅವರು ಬಿಳಿಗಿರಿರಂಗನಬೆಟ್ಟದ ಸಮೀಪದಲ್ಲೇ ಇರುವ ಕೆ. ಗುಡಿಗೆ ಭೇಟಿ ನೀಡಿ ಸ್ವಲ್ಪ ಕಾಲ ವಿರಮಿಸಿದರು. ಅಲ್ಲಿಂದ ಚಾಮರಾಜನಗರದ ರಾಮಸಮುದ್ರದಲ್ಲಿರುವ ಹರಳುಕೋಟೆ ಆಂಜನೇಯಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಮಹಿಳಾ ದಸರಾ ಪೂರ್ವಭಾವಿ ಸ್ಪರ್ಧೆಗಳಿಗೆ ಚಾಲನೆ



ಮಹಿಳಾ ದಸರಾ ಸ್ಪರ್ಧೆಗಳಿಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಚಾಲನೆ ನೀಡಿದರು.

ಚಾಮರಾಜನಗರ, ಅ.5– ಮಹಿಳಾ ದಸರಾ ಅಂಗವಾಗಿ ನಗರದಲ್ಲಿ ಮಹಿಳೆಯರಿಗೆ ಆಯೋಜಿಸಲಾಗಿದ್ದ ಬಕೆಟ್ ಮತ್ತು ಬಾಲ್ ಸ್ಪರ್ಧೆ, ಲೆಮನ್ ಅಂಡ್ ಸ್ಪೂನ್, ಮ್ಯೂಸಿಕಲ್ ಚೇರ್, ಮಡಕೆ ಹೊಡೆಯುವ ಸ್ಪರ್ಧೆ, ಒಲೆರಹಿತ ಅಡುಗೆ ಸ್ಪರ್ಧೆಗಳಿಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಚಾಲನೆ ನೀಡಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಮಹಿಳೆಯರಿಗೆ ಹಾಗೂ ಮಹಿಳಾ ವಿಕಲಚೇತನರಿಗೆ ಪೂರ್ವಭಾವಿಯಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಬಕೆಟ್‌ಗೆ ಬಾಲ್ ಎಸೆಯುವ ಮೂಲಕ ಜಿಲ್ಲಾಧಿಕಾರಿಯವರು ವಿವಿಧ ಸ್ಪರ್ಧೆಗಳನ್ನು ಉದ್ಘಾಟಿಸಿದರು.

ವೇದಿಕೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಚೆಲುವ ಚಾಮರಾಜನಗರ ದಸರಾ ಮಹೋತ್ಸವದ ಪ್ರಯುಕ್ತ ಅ.7, 8, 9ರಂದು ಮೂರು ದಿನಗಳ ಕಾಲ ಮುಖ್ಯ ಕಾರ್ಯಕ್ರಮಗಳು ನಡೆಯಲಿವೆ. ದಸರಾ ಇದೊಂದು ಸುಂದರವಾದ ಹಬ್ಬ. ಮನೆಯಲ್ಲಿ ಎಲ್ಲರೂ ಒಟ್ಟಿಗೆ ಸೇರಿ ಹಬ್ಬ ಆಚರಿಸುವಂತೆ ಜಿಲ್ಲಾ ದಸರಾವನ್ನು ಹಬ್ಬದ ಮಾದರಿಯಲ್ಲಿ ಸಂತೋಷ, ಸಂಭ್ರಮದಿಂದ ಆಚರಿಸೋಣ. ಸ್ಪರ್ಧೆಗಳಲ್ಲಿ ಮಹಿಳೆಯರು ಹೆಚ್ಚು ಉತ್ಸಾಹದಿಂದ ಭಾಗವಹಿಸಬೇಕು ಎಂದರು.

ಮಹಿಳೆಯರು, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಸ್ವಸಹಾಯ ಗುಂಪುಗಳ ಸದಸ್ಯರು ಸರ್ಕಾರದ ಅಭಿವೃದ್ಧಿ ಯೋಜನೆಗಳ ಶಕ್ತಿಯಾಗಿದ್ದಾರೆ. ಕಳೆದ ಬಾರಿಯ ದಸರಾದಲ್ಲಿ ಹೊಗೆರಹಿತ ಅಡುಗೆ ಹಾಗೂ ರಂಗೋಲಿ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಬಕೆಟ್ ಮತ್ತು ಬಾಲ್ ಸ್ಪರ್ಧೆ, ಲೆಮನ್ ಅಂಡ್ ಸ್ಪೂನ್, ಮ್ಯೂಸಿಕಲ್ ಚೇರ್, ಮಡಕೆ ಹೊಡೆಯುವ ಸ್ಪರ್ಧೆಗಳನ್ನು ಈ ಬಾರಿ ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತ ಅವರು 'ಆಕಾಶದ ನೀಲಿಯಲ್ಲಿ, ಚಂದ್ರ ತಾರೆ ತೊಟ್ಟಿಲಲ್ಲಿ, ಬೆಳಕನಿಟ್ಟು ತೂಗಿದಾಕೆ, ನಿನಗೆ ಬೇರೆ ಹೆಸರು ಬೇಕೆ?, ಸ್ತ್ರೀ... ಎಂದರೇ ಅಷ್ಟೇ ಸಾಕೆ!' ಕವಿ ಜಿ.ಎಸ್. ಶಿವರುದ್ರಪ್ಪ ಅವರ ಕಾವ್ಯದ ಸಾಲುಗಳನ್ನು ಉಲ್ಲೇಖಿಸಿ ಮಾತನಾಡಿ, ಈ ಜಗತ್ತಿನ ಎಲ್ಲಾ ಚಟುವಟಿಕೆಗಳ ಕೇಂದ್ರ ಬಿಂದು ಸ್ತ್ರೀ ಆಗಿದ್ದಾಳೆ. ಯಾವುದೇ ಪ್ರಾಣಿ–ಪಕ್ಷಿಯಾಗಿರಲಿ, ಎಲ್ಲಾ ಜೀವಿಗಳ ಕೇಂದ್ರ ಬಿಂದು ಮಹಿಳೆಯಾಗಿದ್ದಾಳೆ. ಈ ನಿಟ್ಟಿನಲ್ಲಿ ದಸರಾ ಕಾರ್ಯಕ್ರಮಗಳಿಗೆ ಮಹಿಳೆಯರ ಸಹಯೋಗ ಅವಶ್ಯವಾಗಿದೆ ಎಂದರು.

ಜಿಪಂ ಸಿಇಓ ಮೋನಾ ರೋತ್ ಮಾತನಾಡಿ, ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ನಿರೂಪಣಾಧಿಕಾರಿ ದಿನೇಶ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಸಕಲೇಶ್ವರ, ಇತರರು ಇದ್ದರು.

ಶ್ರದ್ಧಾಭಕ್ತಿಯಿಂದ ನವಕನ್ನಿಕಾ ಪೂಜೆ



ಚಾಮರಾಜನಗರ: ನವರಾತ್ರಿ ಹಬ್ಬದ ವಿಶೇಷ ನವಕನ್ನಿಕಾ ಪೂಜೆ ಶ್ರಾದ್ಧ ಭಕ್ತಿಯಿಂದ ಬ್ರಾಹ್ಮಿ ಮಹಿಳಾ ಸಂಘದ ಆಶ್ರಯದಲ್ಲಿ ಋಗ್ವೇದಿ ಕುಟೀರದಲ್ಲಿ ನಡೆಯಿತು.

ಬ್ರಾಹ್ಮಿ ಮಹಿಳಾ ಸಂಘದ ಕಾರ್ಯದರ್ಶಿ ಶ್ರೀಮತಿ ರೇಖಾ ರಂಗನಾಥ್ ಮಾತನಾಡಿ, ನವರಾತ್ರಿಯ ವಿಶೇಷವಾಗಿ ನವ ದುರ್ಗೆಯ ಸ್ವರೂಪದಲ್ಲಿ ಒಂಬತ್ತು ಮಕ್ಕಳಿಗೆ ಪಾದ ತೊಳೆದು, ಫಲ ತಾಂಬೂಲಗಳನ್ನು ನೀಡಿ ಪೂಜಿಸಿ ಆಶೀರ್ವಾದ ಪಡೆಯುವ ಪದ್ಧತಿ ನವರಾತ್ರಿ ಸಂದರ್ಭದಲ್ಲಿ ನಡೆಯುತ್ತದೆ. ದೇವಿಯ ಸ್ವರೂಪದಲ್ಲಿ ಮಕ್ಕಳನ್ನು ಕೂರಿಸಿ ಪೂಜಿಸಿ, ಶಕ್ತಿ ಸ್ವರೂಪವನ್ನು ಸ್ವೀಕಾರ ಮಾಡುವ ವಿಶೇಷ ಕಾರ್ಯಕ್ರಮ ನವಕನ್ನಿಕಾ ಪೂಜೆಯಾಗಿದೆ ಎಂದು ತಿಳಿಸಿದರು.

ವಿಶೇಷ ಉಪನ್ಯಾಸ ನೀಡಿದ ಸಂಸ್ಕೃತಿ ಚಿಂತಕ ಸುರೇಶ್ ಎನ್.ಋಗ್ವೇದಿ, ಹಲವು ದಶಕಗಳಿಂದ ಬ್ರಾಹ್ಮಿ ಮಹಿಳಾ ಸಂಘ ನವರಾತ್ರಿಯ ಸಂದರ್ಭದಲ್ಲಿ ನವಕನ್ನಿಕಾ ಪೂಜೆಯನ್ನು ನೆರವೇರಿಸಿಕೊಂಡು ಸಂಸ್ಕೃತಿಯನ್ನು ಉಳಿಸುವ ಕಾರ್ಯ ಮಾಡುತ್ತಿದೆ. ಮಕ್ಕಳಲ್ಲಿ ಆಧ್ಯಾತ್ಮಿಕ ಪದ್ಧತಿ ಹಾಗೂ ಅದರ ಮೌಲ್ಯಗಳನ್ನು ತಿಳಿಸುವ ಮೂಲಕ ಸದ್ಭಾವನೆಯನ್ನು ಬೆಳೆಸಬೇಕಾಗಿದೆ. ಆಧ್ಯಾತ್ಮಿಕತೆಯು ಜೀವನದ ಮೌಲ್ಯವನ್ನು ಹೆಚ್ಚಿಸಿ ಶ್ರೇಷ್ಠ ವ್ಯಕ್ತಿತ್ವವನ್ನು ರೂಪಿಸುತ್ತದೆ. ಧಾರ್ಮಿಕ ಪರಂಪರೆಯ ಎಲ್ಲಾ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಮಾಡಬೇಕಾಗಿದೆ. ಮಕ್ಕಳಲ್ಲಿ ಭಾರತೀಯ ಸಂಸ್ಕೃತಿಯ ವಿಶೇಷ ಅರ್ಥವನ್ನು ತಿಳಿಸಿದಾಗ ಅದರ ಬಗ್ಗೆ ಗೌರವ ಉಂಟಾಗಿ ಅದರಂತೆ ನಡೆಯುವ ಭಾವನೆಯು ಮೂಡುತ್ತದೆ. ದಸರಾ ವೈಭವವನ್ನು ಪೋಷಕರು, ಸಂಘಟನೆಗಳು ತಿಳಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ನವಕನ್ನಿಕೆಯರಾಗಿ ಮಕ್ಕಳಾದ ಲಹರಿ, ವರ್ಷಿಣಿ, ಯೋಗಶ್ರೀ, ಸುಮನ, ಧೃತಿ, ಪನ್ನಗ, ಬೃಹತಿ, ಪ್ರಾರ್ಥನಾ, ಧರಿತ್ರಿ, ಬ್ರಾಹ್ಮಿ ಮಹಿಳಾ ಸಂಘದ ವತ್ಸಲಾರಾಜಗೋಪಾಲ್, ಭಾನುಮತಿ, ರೇಖಾ, ವಿಜಯಲಕ್ಷ್ಮಿ, ಪಾರ್ವತಿ, ರಾಧಾ, ಋಗ್ವೇದಿ ಯೂತ್ ಕ್ಲಬ್ ಕುಸುಮ ಋಗ್ವೇದಿ, ಶರಣ್ಯ, ಶ್ರಾವ್ಯ, ಸುಪ್ರಿಯಾ, ಮೇಘನಾ ಉಪಸ್ಥಿತರಿದ್ದರು.

ಡಿ.ಸೋಮಣ್ಣ ದೊಡ್ಡರಾಯಪೇಟೆ ಪಿಎಸಿಸಿ ಬ್ಯಾಂಕ್ ಅಧ್ಯಕ್ಷ



ಚಾಮರಾಜನಗರ ತಾಲೂಕು ದೊಡ್ಡರಾಯಪೇಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಡಿ.ಸೋಮಣ್ಣ, ಉಪಾಧ್ಯಕ್ಷರಾಗಿ ಎಚ್.ಎಸ್.ಮಹದೇವಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದು, ಅವರನ್ನು ನಿರ್ದೇಶಕರಾದ ಪಾಪಣ್ಣ, ಆರ್.ಮಹದೇವಸ್ವಾಮಿ, ನಾಗರಾಜು, ಪುಟ್ಟಮ್ಮ, ದ್ಯಾವಯ್ಯಣಿ, ಜಿ.ಸೋಮಣ್ಣ, ಹಂಡ್ರಕಳ್ಳಿ ಡೇರಿ ಮಹದೇವಪ್ಪ, ಮಹದೇವ, ಎಂಡಿಸಿಸಿ ಮೇಲ್ವಿಚಾರಕ ಡಿ. ಮಂಜು, ಸಂಘದ ಸಿಇಒ. ಮಹದೇವಯ್ಯ, ಡೇರಿ ಮಾಜಿ ಅಧ್ಯಕ್ಷರಾದ ಶಿವರುದ್ರಸ್ವಾಮಿ, ಗಿರೀಶ್, ಮುಖಂಡರಾದ ಮಹದೇವಸ್ವಾಮಿ, ರಾಜು, ಮಹೇಶ್, ಶಿವಾನಂದಸ್ವಾಮಿ, ಪ್ರದೀಪ್, ಹಂಡ್ರಕಳ್ಳಿ ಯೋಗೇಶ್ ಮೊದಲಾದವರು ಅಭಿನಂದಿಸಿದರು.

■ಬಿ.ಎನ್.ರಮ್ಯ

ಚಾಮುಂಡಿಬೆಟ್ಟ –ಏರಲು ನಾನಾ ಕಾರಣವಿದೆ!

ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ಸನ್ನಿಧಿ ಚಾಮುಂಡಿಬೆಟ್ಟ ಭಕ್ತರು ಮಾತ್ರವಲ್ಲ, ಪ್ರವಾಸಿಗರ ಸೆಳೆಯುವ ರಮಣೀಯ ನಿಸರ್ಗ ತಾಣ. ಧಾರ್ಮಿಕ, ಐತಿಹಾಸಿಕ ಹಾಗೂ ಪಾರಂಪರಿಕ ಹಿನ್ನೆಲೆ ಒಳಗೊಂಡ ಪವಿತ್ರ ಕ್ಷೇತ್ರ, ಆಧ್ಯಾತ್ಮಿಕ ಕೇಂದ್ರ, ಪ್ರವಾಸಿ ತಾಣ, ಪ್ರಕೃತಿ ಮಡಿಲು, ಹೀಗೆ ವಿಭಿನ್ನ ಭಾವನೆಗಳಿಗೆ ನಿಲುಕುವ ವಿಶೇಷ ಸ್ಥಳವಿದು. ಹಾಗೆಯೇ ಅನೇಕ ಮೈಸೂರು ವಾಸಿಗಳಿಗೆ ಚಾಮುಂಡಿಬೆಟ್ಟ ಸ್ಫೂರ್ತಿಯ ಸೆಲೆ, ದೈಹಿಕ ಹಾಗೂ ಮಾನಸಿಕ ಸದೃಢತೆ, ಉತ್ತಮ ಆರೋಗ್ಯಕ್ಕೆ ನೆರವಾಗುವ ಪ್ರಾಕೃತಿಕ ಸಂಪತ್ತಾಗಿದೆ. ನಿತ್ಯ ಹಾಗೂ ವಾರಾಂತ್ಯದಲ್ಲಿ ಚಾಮುಂಡಿಬೆಟ್ಟದ ಸಾವಿರ ಮೆಟ್ಟಿಲೇರುವ ಸಂಪ್ರದಾಯವನ್ನು ಸಾವಿರಾರು ಮಂದಿ ರೂಢಿಸಿಕೊಂಡಿದ್ದಾರೆ. ಬೆಟ್ಟದ ತುದಿಯಲ್ಲಿ ನಿಂತು ಸೂರ್ಯೋದಯ ಹಾಗೂ ಸೂರ್ಯಾಸ್ತ ಕಣ್ತುಂಬಿಕೊಳ್ಳುತ್ತಾರೆ. ಹೀಗೆ ಚಾಮುಂಡಿಬೆಟ್ಟದೊಂದಿಗೆ ಅವಿನಾಭಾವ ನಂಟು ಹೊಂದಿರುವ ಚಾರಣಿಗರು ಅಮಿತಾನಂದದಿಂದ 'ಮೈಸೂರು ಮಿತ್ರ'ನೊಂದಿಗೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.






ಉತ್ತಮ ತೂಕ ನಷ್ಟ ಮಿಷನ್...!



ಹಿಟಾಚಿ ಕಂಪನಿಯ ಸುರಕ್ಷತಾ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುವ ಜೆ.ಪಿ.ನಗರ ನಿವಾಸಿ ಕೆ.ಆರ್.ವಿನಯ್(33 ವರ್ಷ), ಆರೇಳು ವರ್ಷಗಳಿಂದ ಮನೆಯಿಂದ ಸೈಕಲ್‌ನಲ್ಲಿ ಬಂದು ಚಾಮುಂಡಿಬೆಟ್ಟ ಹತ್ತುವುದನ್ನು ರೂಢಿಸಿಕೊಂಡಿದ್ದಾರೆ. ಈ ಬಗ್ಗೆ ಅವರು ಹೇಳಿದ್ದು, ನಾನು ಅಧಿಕ ತೂಕ ಹೊಂದಿದ್ದೆ. 80–85 ಕೆಜಿ ದೇಹದ ತೂಕವನ್ನು ನಿಯಮಿತವಾಗಿ ಇಳಿಸುವುದಕ್ಕಾಗಿ ನಾನು ಬೆಟ್ಟದ ಮೆಟ್ಟಿಲು ಏರಲಾರಂಭಿಸಿದೆ. ನನ್ನ ದೇಹದ ತೂಕ 15–20 ಕೆಜಿ ಕಡಿಮೆಯಾಗಿದೆ. ಆಗಾಗ್ಗೆ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿರುವ ನನ್ನ ಸೋದರ ಸಂಬಂಧಿ ಪವನ್ ಆತ್ರೇಯ ನನ್ನೊಂದಿಗೆ ಸೇರಿಕೊಳ್ಳುತ್ತಾನೆ.

ಬೆಟ್ಟ ಹತ್ತುವುದರಿಂದ ಆರೋಗ್ಯ ವೃದ್ಧಿ




ಅಶೋಕಪುರಂನ ಕುಮಾರ್(ಅಣ್ಣಯ್ಯ–54)) 1988–89ರಿಂದ ಸತತವಾಗಿ ಬೆಟ್ಟ ಹತ್ತುತ್ತಿದ್ದಾರಂತೆ. ನಾನು ಕಬಡ್ಡಿ ಮತ್ತು ಫುಟ್‌ಬಾಲ್‌ನಲ್ಲಿ ಭಾಗವಹಿಸುತ್ತಿದ್ದೆ. ಅಶೋಕ ಸ್ಪೋರ್ಟ್ಸ್ ಕ್ಲಬ್‌ನ ಎಲ್ಲಾ ಕಬಡ್ಡಿ ಆಟಗಾರರೂ ಬೆಟ್ಟವನ್ನು ಹತ್ತಲು ಪ್ರೋತ್ಸಾಹಿಸಿದಾಗ ಈ ಅಭ್ಯಾಸ ಪ್ರಾರಂಭವಾಯಿತು, ಅಂದಿನಿಂದಲೂ ಮುಂದುವರೆಸಿಕೊಂಡು ಬರುತ್ತಿದ್ದೇನೆ. ಎಲ್ಲಕ್ಕಿಂತ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಬೇಕು ಎಂಬುದು ಅವರ ಅಭಿಪ್ರಾಯ.

ಉತ್ತಮ ಸ್ನೇಹಿತರ ಸಾಂಗತ್ಯ



ವಿವಿ ಮೊಹಲ್ಲಾ ನಿವಾಸಿ, ಸಿವಿಲ್ ಇಂಜಿನಿಯರ್ ಎಚ್.ವಿಠ್ಠಲ್(72), 1992ರಿಂದ ಆರ್.ಎನ್.ಮೂರ್ತಿ, ಸೈಕಲ್ ಪ್ಯೂರ್ ಅಗರಬತ್ತೀಸ್‌ನ ಆರ್.ಗುರು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ವೈದ್ಯರು ಮತ್ತು ಉದ್ಯಮಿಗಳು ಸೇರಿದಂತೆ 14 ವ್ಯಕ್ತಿಗಳ ಗುಂಪಿನೊಂದಿಗೆ ಬೆಟ್ಟ ಹತ್ತುವ ಅಭ್ಯಾಸ ಆರಂಭವಾಯಿತು. ಕೋವಿಡ್ ಲಾಕ್‌ಡೌನ್ ವೇಳೆ ಪ್ರವೇಶ ನಿರ್ಬಂಧವಿದ್ದ ಕಾರಣದಿಂದಾಗಿ ತಾವರೆಕಟ್ಟೆ ಪ್ರವೇಶ ದ್ವಾರದಿಂದ ತೆರಳುತ್ತಿದ್ದೆ ಎಂದು ನೆನೆಯುತ್ತಾರೆ.

ಲಲಿತಮಹಲ್ ಹೆಲಿಪ್ಯಾಡ್‌ನಿಂದ ಆರಂಭ



ನನಗೀಗ 70 ವರ್ಷ. ಏಳೆಂಟು ಸ್ನೇಹಿತರೊಡಗೂಡಿ 2013ರಲ್ಲಿ ಬೆಟ್ಟವೇರುವ ಅಭ್ಯಾಸ ಪ್ರಾರಂಭಿಸಿದೆ. ಮುಂಜಾನೆ 5 ಗಂಟೆಗೆ ನಾನು ಲಲಿತಮಹಲ್ ಹೆಲಿಪ್ಯಾಡ್‌ನಿಂದ ಪ್ರಾರಂಭಿಸಿ, ಸಿದ್ದಾರ್ಥ ಲೇಔಟ್, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಪತಂಜಲಿ ಆರೋಗ್ಯ ಕೇಂದ್ರದ ಮೂಲಕ ಹಾದು ಬೆಟ್ಟಕ್ಕೆ ಹೋಗುತ್ತೇನೆ. ಹಿಂದೆ ಸ್ನೇಹಿತರೆಲ್ಲಾ ವಾಕಿಂಗ್ ಹೋಗುವಾಗ ಖೋಡೆ ಅತಿಥಿ ಗೃಹಕ್ಕೆ ಸಂಪರ್ಕ ಕಲ್ಪಿಸುವ ಸ್ಥಳದಲ್ಲಿ ಕೆಲಹೊತ್ತು ಕಳೆಯುತ್ತಿದ್ದೆವು. ನಂತರ ಒಂದೆರಡು ವರ್ಷಗಳ ಕಾಲ ನಾವು ಉತ್ತನಹಳ್ಳಿ ಬಳಿಯ ಮಹದೇಶ್ವರ ದೇವಸ್ಥಾನದ ಬಳಿಗೆ ನಮ್ಮ ಚರ್ಚಾಕೂಟ ಸ್ಥಳಾಂತರಗೊಳಿಸಿ, ಅಲ್ಲಿ ಯೋಗ ಮತ್ತು ವ್ಯಾಯಾಮ ಮಾಡುತ್ತಿದ್ದೆವು. ಹನ್ನೊಂದು ವರ್ಷಗಳಿಂದ ಮೆಟ್ಟಿಲುಗಳ ಮೂಲಕ ಬೆಟ್ಟವನ್ನೇರಿ ಇಳಿಯುವಾಗ ನಂದಿ ವಿಗ್ರಹ ಬಳಿ ರಸ್ತೆ ಮಾರ್ಗದಲ್ಲಿ ವಾಪಸ್ಸಾಗುತ್ತೇನೆ ಎಂದು ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಸಹಾಯಕ ಕಮಿಷನರ್, ಗುರುರಾಜ ಲೇಔಟ್ ನಿವಾಸಿ ರಾಜೇಂದ್ರ ಹರ್ಷದಿಂದ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ವಾರದಲ್ಲಿ ಕನಿಷ್ಠ ನಾಲ್ಕು ದಿನ ಚಾರಣ



ಮೈಸೂರು ವಿಶ್ವವಿದ್ಯಾನಿಲಯದ ಅನ್ವಯಿಕ ಜೀವಶಾಸ್ತ್ರದಲ್ಲಿ ದ್ವಿತೀಯ ವರ್ಷದ ಎಂಎಸ್ಸಿ ವ್ಯಾಸಂಗ ಮಾಡುತ್ತಿರುವ ಜೆ.ಪಿ.ನಗರದ ನಿವಾಸಿ ಎಲ್.ಪ್ರಜಿತ್, ವಾರದಲ್ಲಿ ನಾಲ್ಕು ದಿನ ಬೆಟ್ಟದ ತಪ್ಪಲಿಗೆ ಸೈಕಲ್‌ನಲ್ಲಿ ಬಂದು, ಮೆಟ್ಟಿಲು ಹತ್ತುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಈ ಅಭ್ಯಾಸ ನನ್ನ ಶಾಲಾ ಸ್ನೇಹಿತ ವಿಶಾಲ್‌ನಿಂದ ಪ್ರಾರಂಭವಾಯಿತು. ವಾರದಲ್ಲಿ ಕನಿಷ್ಠ ನಾಲ್ಕು ದಿನವಾದರೂ ಮೆಟ್ಟಿಲುಗಳನ್ನು ಹತ್ತುತ್ತೇನೆ. ಕೇವಲ 10 ನಿಮಿಷಗಳಲ್ಲಿ ಸಾವಿರ ಮೆಟ್ಟಿಲೇರಿದ್ದೇನೆ ಎಂದು ಸಂತಸ ಹಂಚಿಕೊಂಡರು.

ಇದೊಂದು ವಿಶೇಷ ಆಕರ್ಷಣೆ


ಕಳೆದ 7–8 ವರ್ಷಗಳಿಂದ ಬೆಟ್ಟದ ಮೆಟ್ಟಿಲುಗಳನ್ನು ಪ್ರತಿನಿತ್ಯ ಏರುತ್ತಿದ್ದೇನೆ. ನಾನು ಕೇವಲ ದೈಹಿಕ ಸದೃಢತೆಗಾಗಿ ಇಲ್ಲಿಗೆ ಬರುವುದಿಲ್ಲ; ಬೆಟ್ಟವು ನನಗೆ ವಿಶೇಷ ಆಕರ್ಷಣೆ. ನಾನು ದೀರ್ಘ ನಡಿಗೆಯನ್ನು ಆನಂದಿಸುತ್ತೇನೆ. ಹಲವಾರು ಚಾರಣಗಳಲ್ಲಿ ಭಾಗವಹಿಸಿದ್ದೇನೆ ಎಂಬುದು ನಿವೃತ್ತ ಬ್ಯಾಂಕ್ ಉದ್ಯೋಗಿ ಹಾಗೂ ದಟ್ಟಗಳ್ಳಿ ನಿವಾಸಿ ಕೃಷ್ಣಪ್ರಕಾಶ್(68) ವರ ಅನುಭವ ನುಡಿ.

ಚಾಮುಂಡಿಬೆಟ್ಟದೊಂದಿಗೆ ಬಿಡಿಸಲಾಗದ ನಂಟು




ಮೈಸೂರಿನ ಎಂಐಟಿಯಲ್ಲಿ ಮೂರನೇ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದಾಗಿನಿಂದ ಬೆಟ್ಟ ಹತ್ತುವ ಅಭ್ಯಾಸ ರೂಡಿಸಿಕೊಂಡಿರುವ ಶಿವಮೊಗ್ಗ ಮೂಲದ ಭರತ್ ಪಿ.ಗೌಡ(25), ಸದ್ಯ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೂ, ಮೈಸೂರು ಮತ್ತು ಚಾಮುಂಡಿ ಬೆಟ್ಟದ ಮೇಲಿನ ಅಪಾರ ಪ್ರೀತಿಯಿಂದ ಇಲ್ಲಿನ ವಿದ್ಯಾರಣ್ಯಪುರಂನಲ್ಲೇ ನೆಲೆಸಿದ್ದಾರೆ. 'ನಾನು ಫಿಟ್‌ನೆಸ್‌ಗಾಗಿ 2019ರಿಂದ ಏಕಾಂಗಿಯಾಗಿ ಬೆಟ್ಟವೇರಲು ಪ್ರಾರಂಭಿಸಿದೆ. ಬೆಟ್ಟದ ದೇವಸ್ಥಾನದ ಮುಂದೆ ಧ್ಯಾನ ಹಾಗೂ ವ್ಯಾಯಾಮದಲ್ಲಿ ತೊಡಗುತ್ತೇನೆ' ಎಂದು ತಿಳಿಸಿದ್ದಾರೆ.

ಈ ಸ್ನೇಹಿತರಿಗೆ ಬೆಟ್ಟ ಹತ್ತುವುದೇ ಸಂಭ್ರಮ



ಬರಹಗಾರ ಪಿ.ಎಂ.ಮನೋಜ್, ಕಾರ್ಮಿಕ ಇಲಾಖೆ ಉದ್ಯೋಗಿ ಹಾಗೂ ಅರ್ಚಕ ಎಚ್.ಎಸ್.ತೇಜಸ್ ಮತ್ತು ವಕೀಲ ಕೆ.ರಘುರಾಮ್ ಭಟ್ 2010ರಿಂದ ಬೆಟ್ಟ ಹತ್ತುವುದನ್ನು ರೂಢಿಸಿಕೊಂಡಿರುವ ಸ್ನೇಹಿತರು. ನಾವು ಮೂವರು ಪದವಿ ದಿನಗಳಲ್ಲಿ ಸಹಪಾಠಿಗಳು. 2010ರ ಮಾರ್ಚ್ 21ರ ಭಾನುವಾರ ನಾವು ಬೆಟ್ಟವನ್ನು ಹತ್ತಲು ಪ್ರಾರಂಭಿಸಿದೆವು. ಆರಂಭದಲ್ಲಿ ಪ್ರತಿ ಭಾನುವಾರ ಹೋಗುತ್ತಿದ್ದೆವು ಎಂದು ಕಲ್ಯಾಣಗಿರಿಯ ನಿವಾಸಿ ಮನೋಜ್ ಹೇಳಿದರೆ, ಎಲ್‌ಎಲ್‌ಬಿ ಓದುವಾಗ ಬೆಳಗ್ಗೆ ಬೇಗನೆ ಏಳುವ ಅಭ್ಯಾಸ ರೂಡಿಸಿಕೊಳ್ಳಲು ನಾನು ಬೆಟ್ಟಕ್ಕೆ ಹೋಗಲು ಯೋಚಿಸಿದೆ. ನಂತರ, ನನ್ನ ಸ್ನೇಹಿತರು ಈ ಅಭ್ಯಾಸವನ್ನು ಮುಂದುವರೆಸಿದರು. ರಸ್ತೆ ಅಪಘಾತದಲ್ಲಿ ಕಾಲಿಗೆ ಗಾಯವಾದ ಕಾರಣ, ನಾನು ವಿಶ್ರಾಂತಿ ಪಡೆಯಬೇಕಾಯಿತು. ಆದರೆ ಈಗ ನಾನು ಹಳೆಯ ನೆನಪುಗಳನ್ನು ಮೆಲುಕು ಹಾಕಲು ಸಾಂದರ್ಭಿಕವಾಗಿ ಅವರೊಂದಿಗೆ ಸೇರಿಕೊಳ್ಳುತ್ತೇನೆ ಎನ್ನುತ್ತಾರೆ ಖಜಾನೆ ಲೇಔಟ್‌ನ ನಿವಾಸಿ ರಘುರಾಮ್ ಭಟ್. ಬೆಟ್ಟ ಹತ್ತುವುದು ಒಂದು ವಿಶಿಷ್ಟ ಅನುಭವವನ್ನು ನೀಡುತ್ತದೆ. ಇಲ್ಲಿನ ಪ್ರಾಕೃತಿಕ ತಾಣ ವಾರದ ಆಯಾಸವನ್ನು ಮರೆಸುತ್ತದೆ. ಬೆಟ್ಟ ಹತ್ತಿ ಅಲ್ಲಿ ಚಹಾ ಸೇವಿಸುತ್ತಾ ನಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಳ್ಳುವುದು ದೊಡ್ಡ ಸಂಭ್ರಮ ಎಂಬುದು ಕೃಷ್ಣಮೂರ್ತಿಪುರಂನ ತೇಜಸ್ ಸಂತಸದ ನುಡಿ.

ಮೆಟ್ಟಿಲುಗಳಿಗೆ ಪೂಜಿಸಿ ಬೆಟ್ಟವೇರುವ ಆಧ್ಯಾತ್ಮಿಕ ಸಂಗತಿ



ಚಾಮುಂಡಿ ದೇವಿಗೆ ಸಂಕಲ್ಪ ಮಾಡಿಕೊಂಡು ತಮ್ಮ ಬೇಡಿಕೆ ಈಡೇರಿದ ಬಳಿಕ ಹರಕೆ ತೀರಿಸುವ ಭಕ್ತರ ಸಂಖ್ಯೆಯೂ ಅಪಾರವಾಗಿದೆ. ಹೀಗೆ ಸಂಕಲ್ಪ ಮಾಡಿಕೊಂಡವರು ಸಾವಿರ ಮೆಟ್ಟಿಲುಗಳಿಗೂ ಅರಿಶಿನ–ಕುಂಕಮ ಹಚ್ಚಿ, ಕರ್ಪೂರ ಬೆಳಗಿಸಿ, ಹೂಗಳನ್ನಿಟ್ಟು ಪೂಜಿಸುವ ಮೂಲಕ ಬೆಟ್ಟವೇರುತ್ತಾರೆ. ಕೆಲವರು ತಮ್ಮ ಮೊಣಕಾಲುಗಳ ಮೂಲಕ ಬೆಟ್ಟ ಹತ್ತುವ ಕಠಿಣ ವ್ರತ ಮಾಡುತ್ತಾರೆ. ಈ ಆಚರಣೆಗಳು ಆಷಾಢ ಮಾಸದಲ್ಲಿ ಹೆಚ್ಚಾಗಿದ್ದರೂ, ಎಲ್ಲಾ ಸಂದರ್ಭಗಳಲ್ಲೂ ಕಾಣಬಹುದಾಗಿದೆ. ಆಷಾಢಮಾಸದ ಶುಕ್ರವಾರಗಳು, ರಥೋತ್ಸವ, ದಸರಾ ಮಹೋತ್ಸವ ಸೇರಿದಂತೆ ವಿಶೇಷ ಸಂದರ್ಭ ಮತ್ತು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮೆಟ್ಟಿಲುಗಳ ಮೂಲಕ ಬೆಟ್ಟವೇರುವ ಭಕ್ತರು ಹಾಗೂ ಪರಿಸರ ಪ್ರಿಯರ ಸಂಖ್ಯೆ ಅಧಿಕವಾಗಿರುತ್ತದೆ. ಚಾಮುಂಡಿಬೆಟ್ಟವು ಕ್ರೀಡಾಪಟುಗಳು, ಚಾರಣಿಗರು, ಟ್ರೇನಿ ಪೊಲೀಸ್ ಅಧಿಕಾರಿಗಳು ಮತ್ತು ಜಿಮ್ ಉತ್ಸಾಹಿಗಳಿಗೆ ತರಬೇತಿ ಕಣವಾಗಿಯೂ ಬಳಕೆಯಾಗುತ್ತಿದೆ. ಅವರು ಹೆಚ್ಚು ಕಠಿಣ ಚಟುವಟಿಕೆಗಳನ್ನು ಕೈಗೊಳ್ಳುವ ಮೊದಲು ಬೆಟ್ಟದ ಮೆಟ್ಟಿಲುಗಳನ್ನು ಹತ್ತುತ್ತಾರೆ.

ವಿದ್ಯಾರ್ಥಿ ದೆಸೆಯಿಂದ ಬೆಟ್ಟವೇರುತ್ತಿರುವ ಕುಸ್ತಿಪಟು






[ಚಿತ್ರಗಳು: ಬಿ.ಎನ್.ರಮ್ಯ]

ರಾಮಾನುಜ ರಸ್ತೆಯ ನಿವಾಸಿ, ಅಖಿಲ ಭಾರತ ಮಟ್ಟದ ಕುಸ್ತಿ ಪದಕ ವಿಜೇತ ಪೊಲೀಸ್ ಸಿಬ್ಬಂದಿ ಮಹೇಶ್ ಪಂಡಿತ್ ಅವರು ಬಾಲ್ಯದಿಂದಲೂ ಚಾಮುಂಡಿಬೆಟ್ಟ ಹತ್ತುವುದನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಕುಸ್ತಿಪಟುಗಳ ಕುಟುಂಬದವರಾದ ಇವರು ಕ್ರೀಡಾ ಕೋಟಾದಡಿ ಪೊಲೀಸ್ ಇಲಾಖೆಗೆ ಸೇರಿದ್ದು ಪ್ರಸ್ತುತ ನರಸಿಂಹರಾಜ ಸಂಚಾರ ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೆಟ್ಟ ಹತ್ತುವ ಅಭ್ಯಾಸದ ಬಗ್ಗೆ ಅವರು, ನಾನು 4ನೇ ತರಗತಿಯಲ್ಲಿದ್ದಾಗ ಕುಸ್ತಿ ತರಬೇತಿ ಸಮಯದಲ್ಲಿ ಬೆಟ್ಟ ಹತ್ತಲು ಪ್ರಾರಂಭಿಸಿದೆ. ವಿಶ್ವವಿದ್ಯಾನಿಲಯದ ಕುಸ್ತಿ ತರಬೇತುದಾರ ಎಲ್.ಮಂಜಪ್ಪನವರು ನನಗೆ ಮಾರ್ಗದರ್ಶನ ನೀಡಿದರು. ಇತ್ತೀಚೆಗೆ ನಾನು 13 ನಿಮಿಷಗಳಲ್ಲಿ ಬೆಟ್ಟವೇರಿದ್ದೆ. ನನ್ನ ಸಹೋದರ ಪೈಲ್ವಾನ್ ಶಂಕರ್ ಚಕ್ರವರ್ತಿ ಆಗಾಗ ನನಗೆ ಎಚ್ಚರಿಕೆ ನೀಡುತ್ತಾರೆ. ಆದರೂ ರಾಗಿ ಮಾಲ್ಟ್ ಮತ್ತು ಹಣ್ಣುಗಳು ಸೇರಿದಂತೆ ಸಮತೋಲಿತ ಆಹಾರ ಸೇವನೆಯೊಂದಿಗೆ ಬೆಟ್ಟ ಹತ್ತುವ ಸ್ಪರ್ಧೆಗಳಲ್ಲಿ ಭಾಗವಹಿಸುತ್ತೇನೆ. ಒಂದೇ ಅವಧಿಯಲ್ಲಿ ಹತ್ತು ಸುತ್ತು ಪೂರೈಸಿದ ಅರಣ್ಯ ಇಲಾಖೆ ಸಿಬ್ಬಂದಿ ಸ್ಫೂರ್ತಿಯಿಂದ ನಾನು ಬೆಳಿಗ್ಗೆ 4.30 ರಿಂದ 9.20ರವರೆಗೆ ಎಂಟು ಸುತ್ತುಗಳ ಕ್ಲೈಂಬಿಂಗ್ ಅನ್ನು ಪೂರ್ಣಗೊಳಿಸಿದ್ದೆ. ನಾನು ಒಂದು ನಾಯಿಮರಿಯನ್ನು ಮನೆಗೆ ತಂದು ಅದಕ್ಕೆ ಜಿಮ್ಮಿ ಎಂದು ಹೆಸರಿಟ್ಟೆ ಅಂದಿನಿಂದ ಅವನು ನನ್ನ ಬೆಟ್ಟ ಹತ್ತುವ ಒಡನಾಡಿ. ದೇಸಿ ತಳಿಯ ಜಿಮ್ಮಿ ಒಂದೆರಡು ಶ್ವಾನ ಪ್ರದರ್ಶನದಲ್ಲೂ ಬಹುಮಾನ ಗೆದ್ದಿದೆ. ಬೆಳಗಿನ ಉಪಾಹಾರ ಅಥವಾ ಊಟವನ್ನು ಬಿಟ್ಟುಬಿಡುವುದಿಲ್ಲವೋ ಹಾಗೆ, ನಾನು ಬೆಟ್ಟ ಹತ್ತುವುದನ್ನು ಬಿಟ್ಟುಬಿಡುವುದಿಲ್ಲ ಎಂದಿದ್ದಾರೆ.



ವಾರಭವಿಷ್ಯ

6.10.2024 ರಿಂದ 12.10.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕನ್ಯಾ, ಚಂದ್ರ–ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ–ಮಿಥುನ, ಬುಧ–ಕನ್ಯಾ, ತುಲಾ, ಗುರು–ವೃಷಭ, ಶುಕ್ರ–ತುಲಾ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಕರ್ಮ ಸಿದ್ಧಿಯಾಗಿ, ಭಾಗ್ಯೋದಯವಾಗುವ ಕಾಲ. ಸ್ಥಾನ–ಮಾನಗಳು ಲಭಿಸುವುದು. ನಿಪುಣತೆಯಿಂದ ಸಫಲತೆಯನ್ನು ಕಾಣುವಿರಿ. ವ್ಯಯಸ್ಥಾನ ಸ್ಥಿತ ರಾಹುವಿನಿಂದ ಕೆಲವು ವಿಷಯಗಳು ನಿಮ್ಮ ಮನಸ್ಸಿಗೆ ವಿರುದ್ಧವಾಗಿ ನಡೆಯುತ್ತವೆ. ಅಚಾನಕ್ ಘಟನೆಗಳಿಂದ ಮನಸ್ಸು ವಿಚಲಿತವಾಗುವುದು. ಮನಸ್ಸು ಉದ್ವೇಗಕ್ಕೆ ಒಳಗಾಗುವುದು. ಶಾರೀರಿಕ ಪೀಡೆ, ಉದರ ಕಾಯಿಲೆ ಕಾಡುತ್ತದೆ.

ಶ್ರೀ ಮಹಾಮೃತ್ಯುಂಜಯ ಮಂತ್ರ ಜಪಿಸಿ. ಶುಭ ಸಂಖ್ಯೆ–1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದ ಆದಿಗೆ ಸ್ಥಾನ ಲಾಭ, ಸಂಪತ್ತು ಗಳಿಕೆ, ಸುವಾರ್ತೆಯೂ ಬಂದೀತು. ಉತ್ತಮ ಸ್ತ್ರೀ ಸಂಗ, ಮಾನಸಿಕ ಹರ್ಷ, ವ್ಯಾಪಾರ–ವ್ಯವಹಾರಗಳು ಕೈಹತ್ತದು. ಕೈಗೊಂಡ ಕಾರ್ಯಗಳು ಕೈಗೂಡದೆ ನಿರಾಸೆಯನ್ನು ಅನುಭವಿಸುತ್ತೀರಿ. ಸರ್ಕಾರಿ ನೌಕರರು ಅಪ್ರಾಮಾಣಿಕ ಕಾರ್ಯವನ್ನು ಮಾಡಿ ಸಂಕಷ್ಟಕ್ಕೆ ಗುರಿಯಾಗುವರು. ಕೆಟ್ಟ ಜನರ ಸಹವಾಸಕ್ಕೆ ಕೇತುಗ್ರಹ ಪ್ರೇರಣೆ.

ಶ್ರೀದುರ್ಗಾಸ್ತುತಿ. ಶುಭ ಸಂಖ್ಯೆ–5

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸ್ಥಿರಾಸ್ತಿಗೆ ಸಂಬಂಧಿಸಿದ ಒಪ್ಪಂದಗಳು ಧನಾತ್ಮಕವಾಗಿರುತ್ತವೆ. ಚಂದ್ರ ಬಲದ ಪರಿಣಾಮ ಕೈಗೆತ್ತಿಕೊಂಡ ಕೆಲಸಗಳು ಪೂರ್ಣಗೊಳ್ಳುತ್ತವೆ. ಬಂಧು ವರ್ಗದವರಿಂದ ಶುಭ ಕಾರ್ಯಕ್ಕೆ ಆಹ್ವಾನಗಳು ಬರುತ್ತವೆ. ಆದಾಯಗಳು ಹೆಚ್ಚಾದಂತೆ ಖರ್ಚು–ವೆಚ್ಚಗಳು ಮಿತಿ ಮೀರುವುದು. ಕುಟುಂಬ ಸದಸ್ಯರೊಂದಿಗೆ ಸೈರಣೆಯಿಂದ ವರ್ತಿಸಿ. ಸರ್ಕಾರಿ ಅಧಿಕಾರಿಗಳೊಂದಿಗೆ ಘರ್ಷಣೆ ಉಂಟಾಗುವುದು.

ಶ್ರೀ ವಿಷ್ಣು ಅರ್ಚನೆ. ಶುಭ ಸಂಖ್ಯೆ–2

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ಸ್ಥಾನ ಲಾಭ. ಸಾಮಾಜಿಕ ಗೌರವ ಪ್ರಾಪ್ತಿ. ಸುವಾರ್ತೆ ಬಂದೀತು. ಮನೆಯಲ್ಲಿ ಸುಖ, ಶಾಂತಿ, ನೆಮ್ಮದಿ. ವಾರ ಸರಿದಂತೆ ಬೇಳೆಕಾಳು, ಧಾನ್ಯ ವ್ಯಾಪಾರಗಳಲ್ಲಿ ನಷ್ಟ, ಶನಿ ಪ್ರಭಾವದಿಂದ ಕೈಗೊಂಡ ಕಾರ್ಯಗಳು ಕೈಗೂಡದೆ ನಿರಾಸೆಯನ್ನು ಹೊಂದುತ್ತೀರಿ. ಸರ್ಕಾರಿ ನೌಕರರು ಅಪ್ರಾಮಾಣಿಕ ಕೆಲಸ ಮಾಡಿ ಸಂಕಷ್ಟಕ್ಕೆ ಗುರಿಯಾಗುವರು. ದುರ್ಮಾರ್ಗಿಗಳ ಸಹವಾಸದಿಂದ ದೂರವಿರಿ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–4

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸರ್ಕಾರಿ ಕೆಲಸ ಕಾರ್ಯಗಳು ಕೈಗೂಡುತ್ತವೆ. ಬರಬೇಕಾದ ಹಣ ಕೈ ಸೇರುವುದು. ಯೋಚನೆ ಮಾಡದೆ ಮಾಡಿದ ಕೆಲಸಗಳಿಂದ ಆರ್ಥಿಕ ನಷ್ಟವನ್ನು ಅನುಭವಿಸಬೇಕಾದೀತು. ಅನ್ಯಾಯ ಮಾರ್ಗದ ಲಾಭಕ್ಕೆ ಆಸೆ ಪಟ್ಟರೆ ಸಂಪತ್ತಿನ ಅವನತಿ. ದೀರ್ಘ ಪ್ರಯಾಣಗಳಿಂದ ಬಳಲುತ್ತೀರಾ. ಮಕ್ಕಳ ಅನುಚಿತ ವರ್ತನೆ ಮನಸ್ಸಿಗೆ ಬೇಸರ ತರುವುದು. ವಾರಾಂತ್ಯಕ್ಕೆ ಜ್ಯೋತಿಷಿಗಳ ಭೇಟಿ.

ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ–2

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಹತ್ತಿರದವರ ವಿಶ್ವಾಸ ಗಳಿಸುವಿರಿ. ಇದರಿಂದ ಸ್ಥಗಿತವಾಗಿದ್ದ ಕೆಲಸ–ಕಾರ್ಯಗಳು ಪುನರಾರಂಭವಾಗಲು ಸಹಾಯವಾಗುವುದು. ಅವಿವಾಹಿತರಿಗೆ ಕಂಕಣಬಲ ಕೂಡಿ ಬರುವುದು. ನೂತನ ವಸ್ತ್ರಾಭರಣ ಪ್ರಾಪ್ತಿ. ನ್ಯಾಯ ಮಾರ್ಗದಲ್ಲಿ ನಡೆದರೆ ಸಫಲತೆ ಪ್ರಾಪ್ತಿ, ಅನ್ಯಥಾ ಹಾನಿ. ಕೇತು–ರಾಹು ಅವಯೋಗದ ಕಾರಣ ಮನೆಯ ಶಾಂತಿಗೆ ಭಂಗ, ಸರ್ಕಾರಕ್ಕೆ ದಂಡ ಪಾವತಿ.

ಶ್ರೀ ಮನ್ನಾರಾಯಣ ಆರಾಧನೆ, ಶುಭ ಸಂಖ್ಯೆ–5

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಮ್ಮ ರಾಶಿಗೆ ಚಂದ್ರ ಪ್ರವೇಶದಿಂದ ಧನಲಾಭ, ಕೀರ್ತಿ, ನೂತನ ಗೃಹ ಸಂಬಂಧಿ ಐಷಾರಾಮಿ ವಸ್ತುಗಳ ಖರೀದಿ. ದೃಢ ಮನಸ್ಸಿನಿಂದ ಕೆಲಸ ಕಾರ್ಯಗಳ ನಿರ್ವಹಣೆ. ಪರ ಧನ ಲಭಿಸುವುದು. ಆದರೆ ದುಃಖಕ್ಕೆ ಗುರಿಯಾಗುವಿರಿ. ಎಲೆಕ್ಟ್ರಿಕ್ ವಸ್ತು ವ್ಯಾಪಾರದಲ್ಲಿ ನಷ್ಟವನ್ನು ಎದುರಿಸಬೇಕಾದೀತು. ಕುಟುಂಬದಲ್ಲಿ ಕಲಹಗಳು ಉಂಟಾಗದಂತೆ ಎಚ್ಚರವಹಿಸಿ. ಗ್ಯಾಸ್ ಟ್ರಬಲ್ ಕಾಡುವುದು.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–6

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ಸಪ್ತಾಹದ ಪ್ರಾರಂಭಕ್ಕೆ ವಾಂಛಿತ ಕೆಲಸ ಕಾರ್ಯಗಳಲ್ಲಿ ಸಫಲತೆ. ವಸ್ತ್ರ, ಭೋಜನ, ಶಯನ ಸುಖ. ಆದರಣೀಯರ ಸಾಂಗತ್ಯ. ನೆರೆಹೊರೆಯವರಿಗೆ ಸಹಾಯ ಹಸ್ತ ನೀಡಿ ಪ್ರೀತಿಗೆ ಪಾತ್ರರಾಗುವಿರಿ. ವಿದ್ವಾಂಸರ ಭೇಟಿಯಿಂದ ಜ್ಞಾನ ವೃದ್ಧಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಉನ್ನತ ಸ್ಥಾನ. ಮನೆಯಲ್ಲಿ ಮಂಗಳ ಕಾರ್ಯಗಳಿಗೆ ನಾಂದಿ ವಾಯು ಸಂಬಂಧಿ ಕಾಯಿಲೆ ಕಾಡಿಸಿತು.

ಶ್ರೀ ಸುಬ್ರಮಣ್ಯ ದರ್ಶನ. ಶುಭ ಸಂಖ್ಯೆ–8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಪೂರ್ವಾರ್ಧಕ್ಕೆ ಅಲ್ಪಸ್ವಲ್ಪ ನೆಮ್ಮದಿ. ಹಣಕಾಸು ಪರಿಸ್ಥಿತಿಯಲ್ಲಿ ಕೊಂಚ ಮಾತ್ರ ಸುಧಾರಣೆ. ಸಾಲ ತರಬೇಕಾದ ಪರಿಸ್ಥಿತಿ. ತದನಂತರ ಕೆಲಸ ಕಾರ್ಯಗಳು ಕೈಗೂಡದೆ ಮನಸ್ಸು ಘಾಸಿಯನ್ನು ಅನುಭವಿಸಬೇಕಾದೀತು. ಅನವಶ್ಯಕ ವಿಷಯಗಳಿಗೆ ಹಣ ವ್ಯಯವಾಗುವುದು. ಅಪವಾದಗಳಿಗೂ ಗುರಿಯಾಗುವಿರಿ. ವಾರದ ಕಡೆಗೆ ಇಷ್ಟ ಬಂಧು ಮಿತ್ರರ ಮಿಲನದಿಂದ ಹರ್ಷಚಿತ್ತರಾಗಿರುತ್ತೀರಾ.

ಶ್ರೀ ಶಿವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–3

ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)

ವಾರದಾರಂಭಕ್ಕೆ ವಿಜಯ, ಸೌಖ್ಯಗಳು ದೊರೆಯುವುದು. ಮಿತ್ರರಿಂದ ಕಾರ್ಯ ಲಾಭ ಹಾಗೂ ಮಿತ್ರರೊಂದಿಗೆ ಉಂಟಾಗಿದ್ದ ಜಗಳಗಳು ನಿವಾರಣೆ ಆಗುವುದು. ಸಾಡೇಸಾತಿ ಪ್ರಭಾವವೂ ಇದ್ದು, ಪರಸ್ಥಳ ವಾಸ. ಅಕಾಲ ಭೋಜನಗಳಿಂದ ಶರೀರಕ್ಕೆ ಅನಾನುಕೂಲಗಳು ಉಂಟಾಗುವುದು. ಸಂಚಾರಗಳಲ್ಲಿ ಎಚ್ಚರ ವಹಿಸಿ, ಜೂಜು, ರೇಸುಗಳಂತಹ ವಿಚಾರಗಳು ತಲೆಯಲ್ಲಿ ಸುಳಿಯದಿರಲಿ.

ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ–7

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆದಿಗೆ ನೆಮ್ಮದಿಯ ವಾತಾವರಣ, ಹಣಕಾಸು ಪರಿಸ್ಥಿತಿ ಸುಧಾರಿಸುತ್ತದೆ. ನೂತನ ವಸ್ತ್ರಾಭರಣ ಖರೀದಿ. ಪಾಪ ಕಾರ್ಯಗಳಲ್ಲಿ ತೊಡಗಿ ನಂತರ ಕಷ್ಟಕ್ಕೆ ಗುರಿಯಾಗುವಿರಿ. ನಿಮಗೆ ಬೇಕಾದವರೇ ನಿಷ್ಠುರವಾಗಿ ವರ್ತಿಸಬಹುದು. ಅಷ್ಟಮ ಕೇತುವಿನಿಂದ ಧರ್ಮಲೋಪ ಕಾರ್ಯವನ್ನು ಎಸಗುವಿರಿ. ಉದ್ಯಮಪತಿಗಳಿಗೆ ನೌಕರ ವರ್ಗದವರಿಂದ ಕಿರಿಕಿರಿ.

ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ರಾಜದರ್ಶನ–ಶರೀರ ಪೋಷಣೆ ಮಾಡಿಕೊಳ್ಳುವಿಕೆ. ಅಭಿಷ್ಟ ಕಾರ್ಯ ಸಿದ್ಧಿಸುವುದು. ನೆರೆಹೊರೆಯಲ್ಲಿ ಮನಃಕ್ಲೇಶ, ಮಾನಕ್ಕೆ ಹಾನಿ. ದಾರಿದ್ರ್ಯ ಪ್ರಬಲತೆ. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ. ಅನ್ಯಥಾ ಶ್ರೀಮತಿಯ ಅಪಮಾನಕ್ಕೆ ಎಡೆಮಾಗುವುದು. ಮಿಷಿನರಿ ಕೆಲಸಗಳನ್ನು ಉಪಯೋಗಿಸುವಾಗ ಜಾಗ್ರತೆಯಾಗಿರಿ. ಉದರ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ–3

ಉತ್ತರ ಪ್ರದೇಶದಲ್ಲಿ ನಾಲ್ವರ ಭೀಕರ ಹತ್ಯೆ ಖಂಡಿಸಿ

ತಿ.ನರಸೀಪುರದಲ್ಲಿ ದಸಂಸ ಪಂಜಿನ ಮೆರವಣಿಗೆ



ಉತ್ತರ ಪ್ರದೇಶದಲ್ಲಿ ದಲಿತ ಕುಟುಂಬದ ನಾಲ್ವರನ್ನು ಹತ್ಯೆ ಮಾಡಿರುವುದನ್ನು ಖಂಡಿಸಿ ಪೆಂಜಿನ ಮೆರವಣಿಗೆ ಮಾಡಲಾಯಿತು.

ತಿ.ನರಸೀಪುರ, ಅ.5– ಉತ್ತರ ಪ್ರದೇಶದ ಅಮೇಠಿ ಜಿಲ್ಲೆಯ ಭವಾನಿ ನಗರದಲ್ಲಿ ಗುರುವಾರ ರಾತ್ರಿ ದಲಿತ ಕುಟುಂಬದ ನಾಲ್ವರನ್ನು ಗುಂಡಿಕ್ಕಿ ಭೀಕರವಾಗಿ ಹತ್ಯೆ ಮಾಡಿರುವುದನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿ ಸದಸ್ಯರು ಪಟ್ಟಣದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಜಮಾಯಿಸಿದ ದಲಿತ ಸಂಘರ್ಷ ಸಮಿತಿ ಸದಸ್ಯರು ಅಲ್ಲಿಂದ ತಾಲೂಕು ಆಡಳಿತ ಸೌಧ ಮುಂಭಾಗದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆವರೆಗೆ ಪಂಜಿನ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಮೃತರು ಮೂಲತಃ ಉತ್ತರ ಪ್ರದೇಶದ ರಾಯ್ ಬರೇಲಿಯ ಸುಧಾಮಪುರಿ ಗ್ರಾಮದ ಉಂಚಾಹಾರ್ ಪ್ರದೇಶದವರಾಗಿದ್ದು, ಅಮೇಠಿ ಜಿಲ್ಲೆಯ ಪನ್‌ಹೌನಾ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಸುನೀಲ್ ಕುಮಾರ್, ಅವರ ಪತ್ನಿ ಪೂನಂ, ಮಕ್ಕಳಾದ ಲಾಡೂ, ಸೃಷ್ಟಿ ಎಂದು ಗುರುತಿಸಲಾಗಿದೆ.

ತನ್ನನ್ನು ಚುಡಾಯಿಸಿದ ಕಾರಣಕ್ಕಾಗಿ ಆ.18ರಂದು ರಾಯ್ ಬರೇಲಿ ಮೂಲದ ಚಂದನ್ ವರ್ಮಾ ವಿರುದ್ಧ ಶಿಕ್ಷಕ ಸುನೀಲ್ ಪತ್ನಿ ಪೂನಂ ಅವರು ಎಸ್ಸಿ, ಎಸ್ಟಿ ಕಾಯ್ದೆ ಅಡಿ ಮತ್ತು ತಮ್ಮ ಕುಟುಂಬಕ್ಕೆ ಏನೇ ಅಪಾಯ ಆದರೂ ವರ್ಮಾನೇ ಕಾರಣ ಎಂದು ಪೊಲೀಸರಿಗೆ ದೂರು ನೀಡಿದ್ದರು. ಈ ಹಿನ್ನಲೆಯಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಇಡೀ ಕುಟುಂಬವನ್ನು ಗುಂಡಿಕ್ಕಿ ಕೊಂದಿರುವುದು ಆಘಾತಕಾರಿಯಾಗಿದೆ ಎಂದರು.

ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ದಲಿತರ ಮೇಲೆ ನಿರಂತರವಾಗಿ ಹಲ್ಲೆ, ಕೊಲೆ–ಸುಲಿಗೆ, ಅತ್ಯಾಚಾರ, ದೌರ್ಜನ್ಯದಂತ ಪ್ರಕರಣಗಳು ಮೇಲಿಂದ ಮೇಲೆ ಘಟಿಸುತ್ತಿರುವುದು ಆತಂಕಕಾರಿ. ಅದರಲ್ಲಿಯೂ ಉತ್ತರ ಪ್ರದೇಶದಲ್ಲಿ ಪ್ರತಿನಿತ್ಯ ಒಂದಲ್ಲ ಒಂದು ಕ್ಷುಲ್ಲಕ ಕಾರಣಗಳಿಗಾಗಿ ದಲಿತರ ಹತ್ಯೆಗಳು ನಡೆಯುತ್ತಿದೆ. ದಲಿತರ ರಕ್ಷಣೆ ಮಾಡುವಲ್ಲಿ ಅಲ್ಲಿನ ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ ಎಂದರು.

ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಬೇಟಿ ಬಚಾವೋ, ಬೇಟಿ ಪಡಾವೋ ಎನ್ನುವ ಪ್ರಭುತ್ವದ ನಾಯಕರಿರುವ ದೇಶದಲ್ಲಿ ದಲಿತರು, ಮಹಿಳೆಯರು ಪ್ರಾಣ ಕೈಯಲ್ಲಿ ಹಿಡಿದು ಜೀವಿಸುವ ಸ್ಥಿತಿ ಕಳೆದ 10 ವರ್ಷಗಳಲ್ಲಿ ದುಪ್ಪಟ್ಟಾಗಿದೆ. ಅದರಲ್ಲಿಯೂ 3ನೇ ಬಾರಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲಂತೂ ಮತ್ತಷ್ಟು ಹೆಚ್ಚಾಗಿದೆ. ದೇಶದಲ್ಲಿ ದಲಿತರ ಮೇಲೆ ದೌರ್ಜನ್ಯ ಮತ್ತು ಹತ್ಯೆ ನಡೆಯುವುದನ್ನು ತಡೆಯಲಾಗದ ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಅವರನ್ನು ಸೇವೆಯಿಂದ ವಜಾಗೊಳಿಸುವ ಕಾನೂನು ದೇಶಾದ್ಯಂತ ಜಾರಿಗೊಳಿಸಬೇಕು. ದಲಿತರ ಹತ್ಯೆಗೈಯುವ ದುರುಳರಿಗೆ ಕಠಿಣ ಶಿಕ್ಷೆ ಜಾರಿಗೊಳಿಸಬೇಕು. ಮೃತರ ಕುಟುಂಬಗಳಿಗೆ ಸರ್ಕಾರಿ ನೌಕರಿ ಕಡ್ಡಾಯಗೊಳಿಸಬೇಕು. ಮೃತರ ಕುಟುಂಬಗಳಿಗೆ ನೀಡುವ ಪರಿಹಾರವನ್ನು ದುಪ್ಪಟ್ಟು ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಸಂಸ ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಕುಕ್ಕೂರು ರಾಜು, ಕಿರಗಸೂರು ರಜನಿ, ಹಿರಿಯೂರು ಸೋಮಣ್ಣ, ಯಡದೊರೆ ನಾರಾಯಣ್, ಶಿವರಾಜು, ಸುಜ್ಜಲೂರು ಶಿವಯ್ಯ, ಬನ್ನಹಳ್ಳಿಹುಂಡಿ ಉಮೇಶ್, ಆಲಗೂಡು ನಾಗರಾಜ್ ಮೂರ್ತಿ, ರವಿ, ಅರುಣ್ ಪ್ರಸಾದ್, ಸಂಜಯ್, ಆನಂದ, ಉಕ್ಕಲಗೆರೆ ರಾಜು, ರವಿ, ಮೂರ್ತಿ, ಕುರುಬೂರು ನಾರಾಯಣ್, ಇಂಡವಾಳು ಹೊನ್ನಯ್ಯ, ನಾಗರಾಜು, ಕೇತುಪುರ ಶಿವನಂಜ, ಡಣಾಯಕನಪುರ ವಸಂತ, ವಾಟಾಳ್ ಸಿದ್ದೇಶ್, ಪ್ರಭು, ಮನು, ಮಾದೇಶ, ಮುತ್ತತ್ತಿ ನಾಗರಾಜು, ದಾವಣಗೆರೆ ಕಾಲೋನಿ ರಾಜು ಇತರರಿದ್ದರು.

ಗಾಂಜಾ ಬೆಳೆದಿದ್ದ ಆರೋಪಿ ಬಂಧನ



ಗಾಂಜಾ ಬೆಳೆದಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದರು.

ಹಿರೀಕ್ಯಾತನಹಳ್ಳಿ, ಅ.5– ಮನೆ ಹಿತ್ತಲಿನಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದ ಆರೋಪಿಯನ್ನು ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇಲ್ಲಿಗೆ ಸಮೀಪದ ಜಾಬಗೆರೆ ಗ್ರಾಮದ ನಿವಾಸಿ ತಿಮ್ಮಪ್ಪನಾಯಕ ಬಂಧಿತ ಆರೋಪಿ. ಈತ ಮನೆ ಹಿತ್ತಲಿನಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದ ಎನ್ನಲಾಗಿದೆ. ಈ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ತಿಮ್ಮಪ್ಪ ನಾಯಕನನ್ನು ಬಂಧಿಸಿ, ಸುಮಾರು 4 ಕೆಜಿ 95 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಕಾರ್ಯಾಚರಣೆ ವೇಳೆ ಹುಣಸೂರು ಉಪವಿಭಾಗ ಪೊಲೀಸ್ ಉಪಾಧೀಕ್ಷಕ ಗೋಪಾಲಕೃಷ್ಣ, ಹುಣಸೂರು ಗ್ರಾಮಾಂತರ ಠಾಣೆ ಪೊಲೀಸ್ ನಿರೀಕ್ಷಕ ಎನ್.ಮುನಿಯಪ್ಪ, ಸಿಬ್ಬಂದಿಗಳಾದ ಮಂಜುನಾಥ, ವಿ.ಜೆ.ರೇವಣ್ಣ, ಇಮ್ರಾನ್ ಷರೀಫ್, ನಂದೀಶ್, ನಾರಾಯಣಶೆಟ್ಟಿ, ಚಾಲಕರಾದ ಸುಂದರ್ ರಾಜು, ಜಾಬಗೆರೆ ಗ್ರಾಪಂ ಬಿಲ್ ಕಲೆಕ್ಟರ್ ಮಂಜು.ಸಿ, ವಿಎ ಸಿದ್ದರಾಮ ಎಳಸಂಗಿ ಭಾಗವಹಿಸಿದ್ದರು. ಬಳಿಕ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಎಸ್.ಕೆ.ರಾಜೂಗೌಡರಿಗೆ ಸೇವಾ ಭೂಷಣ ಪ್ರಶಸ್ತಿ



ತಿ.ನರಸೀಪುರ, ಅ.5– ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ 13ನೇ ವಾರ್ಷಿಕೋತ್ಸವ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೀಸಲಾತಿ ಜಾರಿಗೊಳಿಸಿ 105 ವರ್ಷವಾದ ಹಿನ್ನಲೆಯಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸಾಮಾಜಿಕ ಚಿಂತಕ, ಸೀಹಳ್ಳಿಯ ಎಸ್.ಕೆ. ರಾಜೂಗೌಡರಿಗೆ ಸೇವಾ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಳೆದ 15 ವರ್ಷಗಳಿಂದ ಎಸ್.ಕೆ. ರಾಜೂಗೌಡರು ತಾಲೂಕು, ಜಿಲ್ಲೆ, ರಾಜ್ಯ ಮತ್ತು ಅಂತರರಾಜ್ಯ ಮಟ್ಟದಲ್ಲಿ ಸಕ್ರಿಯವಾಗಿ ಕನ್ನಡ, ರೈತ, ಶೋಷಿತರು, ಸರ್ಕಾರಿ ಕನ್ನಡ ಶಾಲೆಗಳ ಉಳಿವಿಗಾಗಿ ನಡೆದ ಹೋರಾಟ ಮತ್ತು ಕಾವೇರಿ ಹೋರಾಟ ಸೇರಿದಂತೆ ಸಾಂಸ್ಕೃತಿಕ, ಸಾಮಾಜಿಕ, ವೈಚಾರಿಕ, ವೈಜ್ಞಾನಿಕ, ಜನಪರ, ಸಂವಾದ ಮತ್ತು ಹೋರಾಟಗಳಲ್ಲಿ ಹಾಗೂ ವೈಜ್ಞಾನಿಕ, ವೈಚಾರಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಇವರು ಬುದ್ಧ, ಬಸವಣ್ಣ, ಅಂಬೇಡ್ಕರ್, ಕುವೆಂಪು ವಿಚಾರಧಾರೆಗಳ ಪ್ರಚಾರ ಮತ್ತು ಅನುಷ್ಠಾನಕ್ಕಾಗಿ ವಿಶ್ವಮಾನವ ಸೇವಾ ಸಂಸ್ಥೆ ಮತ್ತು ಬುದ್ಧ ಲಿವಿಂಗ್ ಸೆಂಟರ್ ಅನ್ನು ಸ್ಥಾಪಿಸಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಸಾಮಾಜಿಕ ಸೇವೆ ಪರಿಗಣಿಸಿ ಕಳೆದ ಸ್ವಾತಂತ್ರ್ಯ ದಿನಾಚರಣೆಯಂದು ತಾಲೂಕು ಆಡಳಿತ ಗೌರವಿಸಿತ್ತು. ಪ್ರಸ್ತುತ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಸೇವಾ ಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

ಈ ವೇಳೆ ವೇದಿಕೆ ಅಧ್ಯಕ್ಷೆ ಹೆಚ್.ಎಲ್. ಯಮುನಾ, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಕನ್ನಡಪರ ಹೋರಾಟಗಾರ ಸ.ರ.ಸುದರ್ಶನ್ ಹಾಗೂ ಅಬಕಾರಿ ನಿರೀಕ್ಷಕ ನಾರಾಯಣ್ ಉಪಸ್ಥಿತರಿದ್ದರು.

ಬೆಟ್ಟದಪುರ: ಬೆಳೆ ಸಮೀಕ್ಷೆಗೆ ಚಾಲನೆ

ಬೆಟ್ಟದಪುರ, ಅ.5– ರೈತರು ಮೊಬೈಲ್ ಆ್ಯಪ್ ಮೂಲಕ ಬೆಳೆ ಸಮೀಕ್ಷೆ ಮಾಡಿಕೊಳ್ಳಬೇಕು ಎಂದು ಸಚಿವ ಕೆ.ವೆಂಕಟೇಶ್ ಮನವಿ ಮಾಡಿದರು.

ಇಲ್ಲಿಗೆ ಸಮೀಪದ ಮೇಗಲಕೊಪ್ಪಲು ಗ್ರಾಮದಲ್ಲಿ ಬೆಳೆ ಸಮೀಕ್ಷೆ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಬಾರಿ ರಾಗಿ ಬೆಳೆ ಸಮೀಕ್ಷೆ ಮಾಡದ ರೈತರಿಂದ ರಾಗಿ ಖರೀದಿಸಲು ಅವಕಾಶವಿಲ್ಲ. ಎಲ್ಲಾ ರೈತರು ತಮ್ಮ ತಮ್ಮ ಬೆಳೆಗಳ ಸಮೀಕ್ಷೆ ಮಾಡಿ ವರದಿ ನೀಡಬೇಕೆಂದು ತಿಳಿಸಿದರು.

ಕೃಷಿ ಸಹಾಯಕ ನಿರ್ದೇಶಕ ಪ್ರಸಾದ್ ಮಾತನಾಡಿ, ರೈತರು ಮೊಬೈಲ್ ಆ್ಯಪ್‌ನಲ್ಲಿ ಬೆಳೆ ಸಮೀಕ್ಷೆ ಮಾಡಿಕೊಳ್ಳಬಹುದು. ಇಲ್ಲದಿದ್ದರೆ ನಮ್ಮ ಇಲಾಖೆಯಿಂದ ನೇಮಿಸಿರುವ ಸಿಬ್ಬಂದಿ ಸಂಪರ್ಕಿಸಿದರೆ ಹೆಚ್ಚಿನ ಮಾಹಿತಿ ತಿಳಿಸಿಕೊಡಲಿದ್ದಾರೆ. ಅಲ್ಲದೇ ಸಮೀಪದ ಬೆಟ್ಟದಪುರ, ರಾವಂದೂರು, ಪಿರಿಯಾಪಟ್ಟಣ, ಹಾರನಹಳ್ಳಿ ರೈತ ಸಂಪರ್ಕ ಕೇಂದ್ರದಲ್ಲಿ ಮಾಹಿತಿ ಪಡೆದು ಬೆಳೆ ಸಮೀಕ್ಷೆ ಮಾಡಬೇಕೆಂದು ಮನವಿ ಮಾಡಿದರು.



ಬೆಳೆ ಸಮೀಕ್ಷೆಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ಸರಗೂರಲ್ಲಿ ಪೌರಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕಪ್



ಸರಗೂರಲ್ಲಿ ಪೌರ ಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಲಾಯಿತು.

ಸರಗೂರು, ಅ.5– ಪಟ್ಟಣದ ಸ್ವಚ್ಛತೆಗೆ ಹಗಲಿರುಳು ಶ್ರಮಿಸುವ ಪೌರಕಾರ್ಮಿಕರಿಗೆ ಸರ್ಕಾರದ ಆದೇಶದಂತೆ ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಹೆಚ್.ಡಿ. ಕೋಟೆ ಪುರಸಭೆ ಪೌರ ಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಲಾಯಿತು.

ವಿವೇಕಾನಂದ ಸ್ಮಾರಕ ಆಸ್ಪತ್ರೆ ತಜ್ಞ ವೈದ್ಯ ಡಾ.ಪ್ರಶಾಂತ್ ಬಿಂಜಲ್‌ಬಾವಿ ಮಾತನಾಡಿ, ಪ್ರತಿನಿತ್ಯ ಪೌಷ್ಠಿಕ ಆಹಾರ ಸೇವಿಸುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಪ್ರತಿಯೊಬ್ಬರೂ ಉತ್ತಮ ಜೀವನ ಶೈಲಿ ಮೂಲಕ ಆರೋಗ್ಯ ಕಾಪಾಡಿಕೊಳ್ಳಲು ಒಳ್ಳೆಯ ಹವ್ಯಾಸಗಳಾದ ವಾಕಿಂಗ್, ಯೋಗ, ವ್ಯಾಯಾಮ ಸೇರಿದಂತೆ ಇನ್ನಿತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಹೃದಯ, ಕಿಡ್ನಿ, ಲಿವರ್, ಕೊಬ್ಬಿನ ಅಂಶ ಸ್ಕ್ಯಾನಿಂಗ್, ಕಣ್ಣಿನ ತಪಾಸಣೆ ಸೇರಿದಂತೆ ವಿವಿಧ ರೋಗಿಗಳಿಗೆ ಸಂಬಂಧಿಸಿದಂತೆ ರಕ್ತ ಪರೀಕ್ಷೆ ಮಾಡಲಾಯಿತು. ಈ ಸಂದರ್ಭ ವೈದ್ಯರಾದ ಡಾ.ನಾಗೇಶ್, ಡಾ.ಪ್ರಶಾಂತ್ ಬಿಂಜಲ್ ಬಾವಿ ಹಾಗೂ ನೇತ್ರ ತಜ್ಞ ಡಾ.ಆರ್. ನರೇಂದ್ರ ರಾಮಕೃಷ್ಣ ತಪಾಸಣೆ ನಡೆಸಿ, ವೈದ್ಯಕೀಯ ಚಿಕಿತ್ಸೆ ಮತ್ತು ಸಲಹೆ ನೀಡಿದರು.

ಹೆಚ್.ಡಿ.ಕೋಟೆ ಪುರಸಭೆ ಮುಖ್ಯಾಧಿಕಾರಿ ಪಿ.ಸುರೇಶ್, ಆರೋಗ್ಯ ನಿರೀಕ್ಷಣಾಧಿಕಾರಿ ಸಂತೋಷ್ ಕುಮಾರ್ 41 ಪೌರ ಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಿದರು.

ವಿವೇಕಾನಂದ ಸ್ಮಾರಕ ಆಸ್ಪತ್ರೆ ವ್ಯವಸ್ಥಾಪಕ ಸಂಧ್ಯಾ ಬಿ.ಜಿ, ಆಸ್ಪತ್ರೆ ಉಪ ನಿರ್ದೇಶಕರು ಮತ್ತು ಸ್ತ್ರೀರೋಗ ತಜ್ಞ ಡಾ.ಶಂಕರ್, ಆಸ್ಪತ್ರೆ ನರ್ಸಿಂಗ್ ವಿಭಾಗದ ಮೇಲ್ವಿಚಾರಕರಾದ ಪುಟ್ಟಮ್ಮ ನಾಗರತ್ನ, ಗೋಪಾಲಕೃಷ್ಣ, ರೂಪೇಶ್, ಸುರೇಂದ್ರ, ಪ್ರಮೋದ್, ಲ್ಯಾಬ್ ಟೆಕ್ನಿಷಿಯನ್ ಮಂಜುಳ, ಆನಂದ್, ಸಚಿನ್, ಪ್ರೇಮ, ಚೇತನ್, ಮಮತಾ, ರೇಚಣ್ಣ ಪ್ರಸಾದ್, ಮಂಜುಳ, ಸಂಗೀತ, ಸಾರ್ವಜನಿಕ ಸಂಪರ್ಕ ವ್ಯವಸ್ಥಾಪಕ ಬಂಗಾರಶೆಟ್ಟಿ ಮತ್ತು ವೈದ್ಯರು ಹಾಜರಿದ್ದರು.

ಪೌರ ಕಾರ್ಮಿಕರಿಗೆ ಸನ್ಮಾನ



ನಂಜನಗೂಡು ತಾಲೂಕಿನ ನೇರಳೆ ಗ್ರಾಮದಲ್ಲಿ ನಡೆದ ಗಾಂಧಿ ಜಯಂತಿಯಲ್ಲಿ ಗ್ರಾಮದ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷ ಬಿ.ಆರ್.ಗಿರೀಶ್, ಪಿಡಿಓ ಗುರುಸ್ವಾಮಿ, ಶಿವಸ್ವಾಮಿ ಸೇರಿದಂತೆ ಇತರರಿದ್ದರು.

ಎಡಿಜಿಪಿ ಚಂದ್ರಶೇಖರ್ ಅಮಾನತಿಗೆ ಆಗ್ರಹ



ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ನೇತೃತ್ವದಲ್ಲಿ ಪಟ್ಟಣದಲ್ಲಿ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆ, ಅ.5– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಲೋಕಾಯುಕ್ತ ಎಡಿಜಿಪಿ ಚಂದ್ರಶೇಖರ್ ಅವರನ್ನು ಕೂಡಲೇ ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿ ಪಟ್ಟಣದಲ್ಲಿ ಶನಿವಾರ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಜೆಡಿಎಸ್ ಕಚೇರಿ ಬಳಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ನೇತೃತ್ವದಲ್ಲಿ ಜಮಾಯಿಸಿದ ಕೋಟೆ, ಸರಗೂರು ತಾಲೂಕಿನ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಅಲ್ಲಿಂದ ತಾಲೂಕು ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಮಾತನಾಡಿ, ಜೆಡಿಎಸ್ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟದಲ್ಲಿ ಗೌರವಯುತವಾದ ಸ್ಥಾನ ಪಡೆದಿದ್ದು, ಅವರ ವಿರುದ್ಧ ಅವಹೇಳನಕಾರಿ ಮಾತುಗಳನ್ನಾಡಿರುವ ಎಡಿಜಿಪಿ ಚಂದ್ರಶೇಖರ್ ಅವರು ರಾಜ್ಯದ ಜನತೆಯ ಎದುರು ಕ್ಷಮೆಯಾಚಿಸಬೇಕು. ಸರ್ಕಾರ ಈ ಕೂಡಲೇ ಸೇವೆಯಿಂದ ಅವರನ್ನು ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು. ಬಳಿಕ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಕೈಬಿಡಲಾಯಿತು.

ಪ್ರತಿಭಟನೆಯಲ್ಲಿ ಕೋಟೆ, ಸರಗೂರು ತಾಲೂಕಿನ ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ ಗೋಪಾಲಸ್ವಾಮಿ, ತಾಲೂಕು ನಾಯಕ ಸಮಾಜದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ, ಮುಖಂಡರಾದ ನರಸಿಂಹೇಗೌಡ, ಹೂ.ಕೆ. ಮಹೇಂದ್ರ, ಪುರಸಭಾ ಸದಸ್ಯ ಮಿಲ್ ನಾಗರಾಜು, ಎಂ.ಡಿ.ಮಂಚಯ್ಯ, ಎ.ಟಿ.ನಾಗರಾಜು, ಶಾಮಣ್ಣ, ನಾಗನಾಯಕ, ಎಂ.ಡಿ. ಮಂಚಯ್ಯ, ಶಿವಕುಮಾರ, ರಾಜೇಶ್, ಪಟೇಲ್ ರಾಜೇಗೌಡ, ಯೋಗನರಸಿಂಹೇಗೌಡ, ಆರ್.ಲಕ್ಷ್ಮಣ, ಚಲುವೇಗೌಡ, ಗುರುಸ್ವಾಮಿ, ಸುರೇಂದ್ರ, ಮಹೇಶ, ಪ್ರಕಾಶ, ಚಾಕಹಳ್ಳಿ ಕೃಷ್ಣ, ಮಹದೇವ, ರಾಮಚಂದ್ರ, ಪ್ರಸಾದ್, ಭೈರೇಗೌಡ, ಶಿವರಾಜು, ಜವರೇಗೌಡ, ಸುಧೀರ್, ರವಿಗೌಡ, ಗೋವಿಂದೇಗೌಡ, ಅನು, ಗೋವಿಂದರಾಜು, ಶ್ರೀನಿವಾಸ, ಪುಟ್ಟಿ ನಾಗೇಂದ್ರ ಕಾಂತಪ್ಪಾಯ್ಕ ಇತರರಿದ್ದರು.

ಭಾರೀ ಗಾಳಿ ಮಳೆ: ಜನಜೀವನ ಅಸ್ತವ್ಯಸ್ತ

ಹೆಚ್.ಡಿ.ಕೋಟೆ, ಅ.5– ಪಟ್ಟಣದಲ್ಲಿ ಶನಿವಾರ ಮಧ್ಯಾಹ್ನ ಸುರಿದ ಭಾರೀ ಗಾಳಿ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿತು.

ಸುಮಾರು 2 ಗಂಟೆಗಳ ಕಾಲ ಸುರಿದ ಭಾರೀ ಗಾಳಿ ಮಳೆಗೆ ಪಟ್ಟಣದ ಮುಸ್ಲಿಂ ಬ್ಲಾಕ್ ನಿವಾಸಿ ಗೋಪಾಲ್ ಶೆಟ್ಟಿ ಸೇರಿದಂತೆ ಇನ್ನಿತರರ ಮನೆಗಳಿಗೆ ನೀರು ನುಗ್ಗಿ ದಿನಬಳಕೆಯ ವಸ್ತುಗಳೆಲ್ಲಾ ಹಾನಿಯಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಅಲ್ಲದೇ ಮನೆ ಮುಂದೆ ನಿಲ್ಲಿಸಿದ್ದ ಕಾರು ನೀರಿನಲ್ಲಿ ಸಿಲುಕಿವೆ. ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕೋಟೆ ಅರ್ಜುನ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಹಾಕಲಾಗಿದ್ದ ಶಾಮಿಯಾನ ತೂರಿ ಹೋಗಿದೆ.

ಮುಸ್ಲಿಂ ಬ್ಲಾಕ್ ನಿವಾಸಿ ರಾಜೇಶ್ವರಿ ಮಾತನಾಡಿ, ನಮ್ಮ ಬಡಾವಣೆಯಲ್ಲಿ ಪುರಸಭೆ ವತಿಯಿಂದ ನೂತನವಾಗಿ ನಿರ್ಮಿಸಿರುವ ಚರಂಡಿ ಕಾಮಗಾರಿ ಅವೈಜ್ಞಾನಿಕವಾಗಿದೆ. ಮಳೆ ನೀರು ಮನೆಗಳಿಗೆ ನುಗ್ಗುತ್ತಿದೆ. ಈ ಬಗ್ಗೆ ಹಲವು ಬಾರಿ ಪುರಸಭಾಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಭಾರೀ ಮಳೆಯಾದರೆ ಮುಸ್ಲಿಂ ಬ್ಲಾಕ್‌ನಲ್ಲಿ ನೀರು ಹರಿದು ಹೋಗಲು ಸೂಕ್ತ ವ್ಯವಸ್ಥೆ ಮಾಡದ ಕಾರಣ ಮನೆಗಳಿಗೆ ನೀರು ನುಗ್ಗುತ್ತಿವೆ. ಇನ್ನಾದರೂ ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.



ಕೋಟೆ ಅರ್ಜುನ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಹಾಕಲಾಗಿದ್ದ ಶಾಮಿಯಾನ ಕುಸಿದಿರುವುದು.

ಪಂಜಿನ ಕವಾಯಿತು ಉಪಸಮಿತಿ ಅಧ್ಯಕ್ಷರಾಗಿ ಆಯ್ಕೆ



ತಿ.ನರಸೀಪುರ, ಅ.5– ಮೈಸೂರು ದಸರಾ ಪಂಜಿನ ಕವಾಯಿತು ಉಪ ಸಮಿತಿ ಅಧ್ಯಕ್ಷರಾಗಿ ಮಹದೇಶ್ವರ ಬಸ್ ಮಾಲೀಕ ಹಾಗೂ ಪಿಕಾರ್ಡ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಅವರನ್ನು ಆಯ್ಕೆ ಮಾಡಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಆದೇಶಿಸಿದ್ದಾರೆ. ಆಯ್ಕೆ ಸಹಕರಿಸಿದ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್‌ಗೆ ಅಭಿನಂದನೆ ಸಲ್ಲಿಸಿದ್ದಾರೆ.

ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಿಗೆ ಸನ್ಮಾನ



ತಿ.ನರಸೀಪುರ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಗ್ರೂಪ್ ಮಾಲೀಕ ಸಿ.ಎಂ.ಪ್ರಕಾಶ್ ಅವರನ್ನು ಶ್ರೀಶಾರದಾ ನೃತ್ಯ ಶಾಲಾ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಕೆಇಬಿ ಸಿದ್ದಲಿಂಗಸ್ವಾಮಿ, ಕುಬಸವೇಶ್ವರ ರೈಸ್‌ಮಿಲ್ ಮಾಲೀಕ ಸುಗಂಧರಾಜು, ಬೃಂದಾ ಆಸ್ಪತ್ರೆ ಮಾಲೀಕ ಗುರು, ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ರಾಜೇಶ್, ಕಾರ್ಮಿಕರ ಸಂಘದ ಅಧ್ಯಕ್ಷ ಪುಟ್ಟಮಲ್ಲಯ್ಯ, ಪ್ರಕಾಶ್, ಉಪನ್ಯಾಸಕ ಕುಮಾರಸ್ವಾಮಿ, ಸೇವಾಶ್ರಯ ಫೌಂಡೇಷನ್ ಅಧ್ಯಕ್ಷ ಆರ್.ಮಣಿಕಂಠ ರಾಜ್‌ಗೌಡ, ಕಳ್ಳಿಪುರ ಪಂಚಾಯಿತಿ ಸದಸ್ಯ ಶಿವು, ಸಮಾಜ ಸೇವಕ ಶಿವು, ಪ್ರಸನ್ನ ಹಾಜರಿದ್ದರು.

ಹಾವು ಕಚ್ಚಿ ಯುವಕ ಸಾವು



ಹಿರೀಕ್ಯಾತನಹಳ್ಳಿ, ಅ.5– ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹಾವು ಕಚ್ಚಿ ಯುವಕ ಸಾವನ್ನಪ್ಪಿರುವ ಘಟನೆ ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಕಾರ್ತಿಕ್ (23) ಸಾವನ್ನಪ್ಪಿದ ಯುವಕ. ಈತ ಶನಿವಾರ ಬೆಳಗ್ಗೆ ಎಂದಿನಂತೆ ತಮ್ಮ ಜಮೀನಿನಲ್ಲಿ ಬೆಳೆದಿದ್ದ ಬೆಳೆಗೆ ನೀರು ಹಾಯಿಸಲು ಹೋದ ವೇಳೆ ಹಾವು ಕಚ್ಚಿದೆ. ತಕ್ಷಣ ಕಾರ್ತಿಕ್‌ಗೆ ಹುಣಸೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ಬೆಟ್ಟಮ್ಮ ನಿಧನ



ಭೇರ್ಯ, ಅ.5– ಭೇರ್ಯ ಗ್ರಾಮದ ನಿವಾಸಿ ಬೆಟ್ಟಮ್ಮ(86) ನಿಧನರಾದರು. ಮೃತರು ಗ್ರಾಪಂ ಸದಸ್ಯ ಬಿ.ಕೆ.ಕುಮಾರ್ ಸೇರಿದಂತೆ ಐವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ಪುಟ್ಟಮ್ಮ



ಹುಣಸೂರು, ಅ.5– ತಾಲೂಕಿನ ಶ್ಯಾನಭೋಗನಹಳ್ಳಿ ನಿವಾಸಿ ಶತಾಯುಷಿ ಪುಟ್ಟಮ್ಮ (101) ಶನಿವಾರ ನಿಧನರಾದರು. ಮೃತರು ಪತ್ರಕರ್ತ ರಾಮಕೃಷ್ಣ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರಿಶ್ರಮದಿಂದ ಅಭ್ಯಾಸ ಮಾಡಿ ಭವಿಷ್ಯ ರೂಪಿಸಿಕೊಳ್ಳಿ

ಶಾಸಕ ಡಿ.ರವಿಶಂಕರ್ ಸಲಹೆ



ಕೆ.ಆರ್.ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ ಸಮಿತಿ, ವಿವಿಧ ಸಮಿತಿಗಳನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಿದರು.

ಕೆ.ಆರ್.ನಗರ, ಅ.5– ಕಾಲೇಜು ಶಿಕ್ಷಣ ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಮುಖ ಘಟ್ಟವಾಗಿದ್ದು, ಈ ಸಮಯದಲ್ಲಿ ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡಿ ಬದುಕು ಮತ್ತು ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಶಾಸಕ ಡಿ.ರವಿಶಂಕರ್ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ 2024–25ನೇ ಸಾಲಿನ ಸಾಂಸ್ಕೃತಿಕ ಸಮಿತಿ ಹಾಗೂ ವಿವಿಧ ಸಮಿತಿಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು ದೇಶದ ಭವಿಷ್ಯದ ಆಧಾರ ಸ್ತಂಭಗಳಾದ ವಿದ್ಯಾರ್ಥಿಗಳು ಅತ್ಯಂತ ಜವಬ್ದಾರಿಯಿಂದ ನಡೆದುಕೊಳ್ಳಬೇಕೆಂದು ತಿಳಿಸಿದರು.

ಶಾಲೆ ಮತ್ತು ಕಾಲೇಜುಗಳಿಗೆ ವಿದ್ಯಾರ್ಥಿಗಳು ಬರುವುದು ಕಲಿಕೆಗೆ ಮಾತ್ರವಲ್ಲ. ಜೊತೆಗೆ ಸುಂದರ ಮತ್ತು ಸುಭದ್ರ ಜೀವನ ರೂಪಿಸಿಕೊಂಡು ಇದರೊಂದಿಗೆ ಮಾನಸಿಕ ವಿಕಾಸ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಾಬಲ್ಯ ಮತ್ತು ಪ್ರಭುತ್ವ ಸಾಧಿಸಿದ್ದು, ಜಗತ್ತಿನಲ್ಲಿ ಯಾವ ದೇಶದಲ್ಲಿ ಮಹಿಳಾ ಶಕ್ತಿ ಮಂಚೂಣಿ ಹಾಗೂ ಸಾಧನೆಯ ಹಾದಿಯಲ್ಲಿ ಇರುತ್ತದೆಯೋ ಅಂತಹ ದೇಶ ಸರ್ವಾಂಗೀಣ ಪ್ರಗತಿ ಸಾಧಿಸಲು ಸಾಧ್ಯ ಎಂದರು.

ಮಾಜಿ ಪ್ರಧಾನಿ ದಿ.ಇಂದಿರಾ ಗಾಂಧಿಯವರು ಇಡೀ ಮಹಿಳಾ ಕುಲಕ್ಕೆ ಮಾದರಿಯಾಗಿದ್ದು, ನೀವು ಅವರ ಧೈರ್ಯ ಮತ್ತು ಆತ್ಮಸ್ಥೈರ್ಯವನ್ನು ಮೈಗೂಡಿಸಿಕೊಂಡು ಮುನ್ನಡೆದು ಸಾಧನೆಯ ಹಾದಿ ಕ್ರಮಿಸಬೇಕೆಂದು ಕಿವಿಮಾತು ಹೇಳಿದರು.


ಕಾಲೇಜಿನ ಸುತ್ತ ಕಾಂಪೌಂಡ್ ನಿರ್ಮಾಣ ಮಾಡಲು ಅಗತ್ಯ ಅನುದಾನ ನೀಡಲಿದ್ದು, ಪ್ರಾಂಶುಪಾಲರು ಜಾಗದ ಅಳತೆ ಮಾಡಿಸಿ ಸ್ಥಳ ನಿಗದಿ ಮಾಡಿ ಮಾಹಿತಿ ಹಾಗೂ ದಾಖಲೆ ನೀಡಬೇಕೆಂದು ಸೂಚಿಸಿದ ಅವರು ಈಗಾಗಲೇ ಶೌಚಾಲಯ ನಿರ್ಮಾಣಕ್ಕೆ ಹಣ ಬಿಡುಗಡೆಯಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುತ್ತದೆ ಎಂದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಕಾರ್ಯದರ್ಶಿ ವೈ.ಎಸ್.ಜಯಂತ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ ಮಾತನಾಡಿದರು. ಈ ವೇಳೆ ಯುವ ಸಂಭ್ರಮದಲ್ಲಿ ಭಾಗವಹಿಸಿ ಯುವ ದಸರಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಯ್ಕೆಯಾದ ವಿದ್ಯಾರ್ಥಿನಿಯರನ್ನು ಶಾಸಕರು ಸನ್ಮಾನಿಸಿದರು.

ಕಾಲೇಜು ಪ್ರಾಂಶುಪಾಲ ಬಿ.ಟಿ.ವಿಜಯ್, ಸಾಂಸ್ಕೃತಿಕ ಸಂಚಾಲಕ ಪಿ.ಪ್ರಶಾಂತ್, ಕ್ರೀಡಾ ಸಮಿತಿ ಸಂಚಾಲಕ ಡಾ.ಬಿ.ವಿ. ಗಣೇಶ್, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಡಾ.ಸಿ.ಆರ್.ಕಿರಣ್ ಕುಮಾರ್, ರೆಡ್‌ಕ್ರಾಸ್ ಘಟಕ ಸಂಚಾಲಕ ಡಾ.ಎಸ್.ಶಂಕರ್, ಪ್ರಾಧ್ಯಾಪಕರಾದ ಪಿ.ನಂದೀಶ್, ಡಾ.ಕೆ.ರೇಣುಕಾದೇವಿ, ವಿದ್ಯಾರ್ಥಿ ಅಧ್ಯಕ್ಷೆ ಆರ್.ಚೈತ್ರ, ಕಾರ್ಯದರ್ಶಿ ಆರ್.ಪವಿತ್ರ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಇದ್ದರು.

ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ: 8 ಲಕ್ಷ ದಾಖಲಾತಿ ನೀಡುವಂತೆ ನ್ಯಾ. ದೇಸಾಯಿ ಆಯೋಗ ಸೂಚನೆ

● 2005 ರಿಂದ 2024 ರವರೆಗಿನ ದಾಖಲಾತಿಗೆ ಬೇಡಿಕೆ: 19 ಲಕ್ಷ ಮೌಲ್ಯದ 9 ಜೆರಾಕ್ಸ್ ಮೆಷಿನ್ ಖರೀದಿಸಿರುವ ಮುಡಾ ● ದಾಖಲಾತಿ ಶೋಧನೆಯೇ ದೊಡ್ಡ ಟಾಸ್ಕ್; ಮುಡಾ ಸಿಬ್ಬಂದಿಗೆ ಈಗ ರಾತ್ರಿ ಬಹುಹೊತ್ತಿನವರೆಗೆ ಡ್ರಿಲ್



ಜೆರಾಕ್ಸ್ ಮೆಷಿನ್



Mysore Urban Development Authority
JLB Road Mysore
State Name : Karnataka, Code : 29
E-Mail : commissioner@mudamysore.gov.in

Journal Voucher

No. : 09 Dated : 2-May-2024

Particulars		Debit	Credit
FA-Xerox Machine	Dr	19,12,125.00	
To Star Technologies -BGKPK7433C			18,47,308.00
To Tds on Contractors 2%			32,409.00
To C Gst 1%			16,204.00
To S Gst 1%			16,204.00
		₹19,12,125.00	₹19,12,125.00

On Account of :
CH NO.612145,STAR TECHNOLOGIES - PURCHASE OF XEROX MACHINE

Authorised Signatory

ಹೊಸದಾಗಿ ಖರೀದಿಸಿದ ಜೆರಾಕ್ಸ್ ಮೆಷಿನ್ ಬಿಲ್

ಮುಡಾದಲ್ಲಿ ನಿರಂತರ ದಾಖಲಾತಿ ತಲಾಷ್

ಮುಡಾದಲ್ಲಿ ಶನಿವಾರ ಕೂಡ ಲೋಕಾಯುಕ್ತ ಡಿವೈಎಸ್ಪಿ ಮಾಲ್ತೇಶ್, ಮ್ಯಾಥ್ಯೂ ಥಾಮಸ್ ನೇತೃತ್ವದ 20 ಕ್ಕೂ ಹೆಚ್ಚು ಅಧಿಕಾರಿಗಳ ತಂಡ ದಾಖಲಾತಿಗಳ ಶೋಧ ಕಾರ್ಯ ನಡೆಸಿದರು.

ಈ ವೇಳೆ ಮುಡಾ ಆಯುಕ್ತ ರಘುನಂದನ್ ಅವರಿಂದ ಪ್ರಕರಣ ಸಂಬಂಧ ಹಲವು ಮಾಹಿತಿ ಪಡೆದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ವಿಜಯನಗರದಲ್ಲಿ 14 ನಿವೇಶನ ಮಂಜೂರಾತಿಗೆ ಸಂಬಂಧಿಸಿದಂತೆ ಕಳೆದ ಮೂರು ದಿನಗಳಿಂದ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ದಸರಾ ಮುಗಿಯುವ ತನಕ ಸಿದ್ದರಾಮಯ್ಯ ಫುಲ್ ರಿಲ್ಯಾಕ್ಸ್

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಮುಗಿಯುವ ತನಕ ಲೋಕಾಯುಕ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿದಂತೆ ಇತರರಿಗೆ ನೋಟಿಸ್ ನೀಡುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಪಾರ್ವತಿ ಅವರಿಗೆ ದಾನವಾಗಿ ಬಂದಿರುವ ಕೆಸರೆ ಭೂಮಿ, ಅದಕ್ಕೆ ಪರಿಹಾರವಾಗಿ ವಿಜಯನಗರದಲ್ಲಿ ಅವರಿಗೆ ಮಂಜೂರಾಗಿದ್ದ 14 ನಿವೇಶನಗಳ ಬಳಿ ಮಹಜರು ಪೂರ್ಣಗೊಳಿಸಿರುವ ಲೋಕಾಯುಕ್ತ ಪೊಲೀಸರು ಈಗ ದಾಖಲಾತಿ ಸಂಗ್ರಹದಲ್ಲಿ ತೊಡಗಿದ್ದಾರೆ. ನಂತರವಷ್ಟೆ ಸಿದ್ದರಾಮಯ್ಯ, ಪಾರ್ವತಿ ಸೇರಿದಂತೆ ಇತರರಿಗೆ ನೋಟಿಸ್ ನೀಡಿ ವಿಚಾರಣೆ ಮಾಡುತ್ತಾರೆ ಎಂದು ಹೇಳಲಾಗುತ್ತಿದೆ.

ಸಿದ್ದರಾಮಯ್ಯ, ಪಾರ್ವತಿ, ಮಲ್ಲಿಕಾರ್ಜುನ ಅವರನ್ನು ಲೋಕಾಯುಕ್ತ ಕಚೇರಿಗೆ ಕರೆಸಿ, ವಿಚಾರಣೆ ಮಾಡುತ್ತಾರೋ ಇಲ್ಲ ಅವರ ಮನೆಗೇ ಹೋಗಿ ವಿಚಾರಣೆ ಮಾಡುತ್ತಾರೋ ಎಂಬ ತೀವ್ರ ಕುತೂಹಲವಿದೆ. ಡಿಸೆಂಬರ್ 24 ರೊಳಗೆ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರದಿ ನೀಡಬೇಕಿರುವ ಕಾರಣ ಉಳಿದಿರುವ ಎರಡೂವರೆ ತಿಂಗಳಲ್ಲಿ ತನಿಖಾ ಪ್ರಕ್ರಿಯೆ ಪೂರ್ಣಗೊಳಿಸಿ, ವರದಿ ನೀಡಲು ಲೋಕಾಯುಕ್ತರು ತ್ವರಿತ ತನಿಖೆಗಿಳಿಯುವ ಸಾಧ್ಯತೆ ಇದೆ.

ಮೈಸೂರು, ಅ.5(ಬಿಎಲ್‌ಯು)– ಮುಡಾ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುತ್ತಿರುವ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಆಯೋಗಕ್ಕೆ 8 ಲಕ್ಷ ದಾಖಲಾತಿ ನೀಡಬೇಕಿರುವ ಕಾರಣ ಮುಡಾ ಹೊಸದಾಗಿ 19 ಲಕ್ಷ ಮೌಲ್ಯದ 9 ಜೆರಾಕ್ಸ್ ಮೆಷಿನ್ ಖರೀದಿಸಿದೆ.

ಬಹುಕೋಟಿಯ ಹಗರಣದ ಬಗ್ಗೆ ತನಿಖೆ ನಡೆಸುತ್ತಿರುವ ನ್ಯಾ. ದೇಸಾಯಿ ಆಯೋಗದ ದಾಖಲೆ ಬೇಡಿಕೆ ಮುಡಾ ಅಧಿಕಾರಿಗಳಿಗೆ ದೊಡ್ಡ ಚಾಲೆಂಜ್ ಆಗಿದೆ.


ಶೇಕಡ 50:50ರ ಅನುಪಾತದಡಿ ನಿವೇಶನ, ಪ್ರೋತ್ಸಾಹದಾಯಿಕ ನಿವೇಶನ, ಬದಲಿ ನಿವೇಶನ ಸೇರಿದಂತೆ ಅಕ್ರಮ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಸಮಗ್ರ ದಾಖಲಾತಿಗಳನ್ನು ಆಯೋಗಕ್ಕೆ ನೀಡಬೇಕಿದೆ. 2005 ರಿಂದ 2024 ರವರೆಗೆ ದೇಸಾಯಿ ಆಯೋಗ ಸೂಚಿಸಿರುವ ಎಲ್ಲಾ ದಾಖಲಾತಿ ನೀಡುವುದು ಮುಡಾಗೆ ದೊಡ್ಡ ಸವಾಲಾಗಿದೆ. ಆ ಎಲ್ಲಾ ದಾಖಲಾತಿಗಳು ಸರ್ಟಿಫೈಡ್ ಆಗಿರಬೇಕು ಎಂದು ದೇಸಾಯಿ ಆಯೋಗ ಮುಡಾ ಆಯುಕ್ತ ರಘುನಂದನ್ ಅವರಿಗೆ ತಾಕೀತು ಮಾಡಿದೆ.

ಈ ಹಿನ್ನೆಲೆಯಲ್ಲಿ ಮುಡಾ 19,12,125 ರೂ. ಮೌಲ್ಯದ 9 ಜೆರಾಕ್ಸ್ ಮೆಷಿನ್ ಖರೀದಿ ಮಾಡಲಾಗಿದೆ. ಈಗಾಗಲೇ ಮುಡಾದಲ್ಲಿ 4 ಜೆರಾಕ್ಸ್ ಮೆಷಿನ್‌ಗಳಿದ್ದು, ಹೊಸ 9 ಮೆಷಿನ್‌ಗಳಿಂದ ಜೆರಾಕ್ಸ್ ಪ್ರತಿ ತೆಗೆಯುವ ಕಾರ್ಯ ಆರಂಭವಾಗಿದೆ.

ದಾಖಲಾತಿಗಳ ಜೆರಾಕ್ಸ್ ಮಾಡಿ, ದೃಢೀಕರಿಸಿ, ತರುವಾಯ ಬೆಂಗಳೂರಿನ ಕುಮಾರಕೃಪಾದಲ್ಲಿ ತನಿಖೆ ನಡೆಸುತ್ತಿರುವ ಆಯೋಗಕ್ಕೆ ಸಲ್ಲಿಸಬೇಕಿದೆ. ಜೊತೆಗೆ ಲೋಕಾಯುಕ್ತಕ್ಕೂ ಎಲ್ಲವನ್ನೂ ಒಂದು ಪ್ರತಿ ನೀಡಬೇಕಿದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರ ಕೆಸರೆಯ 3.16 ಎಕರೆ ಭೂಮಿಗೆ ಬದಲಾಗಿ ವಿಜಯನಗರದಲ್ಲಿ ಮಂಜೂರಾಗಿರುವ 14 ನಿವೇಶನಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಲೋಕಾಯುಕ್ತಕ್ಕೆ ನೀಡಬೇಕಿದೆ

ಬೆಳಿಗ್ಗೆ 10.30 ಗಂಟೆಗೋ 11 ಗಂಟೆಗೋ ಬಂದು ಸಂಜೆ 5 ಗಂಟೆಗೆ ಕಚೇರಿಯಿಂದ ಕೈ ಬೀಸಿಕೊಂಡು ಹೋಗುತ್ತಿದ್ದ ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಈಗ ರಾತ್ರಿಯೆಲ್ಲಾ ಕೆಲಸ ಮಾಡುವ ಅನಿವಾರ್ಯತೆ ಎದುರಾಗಿದೆ

ಸುತ್ತೂರಿಗೆ ಸಿಜೆಐ ಡಿ.ವೈ.ಚಂದ್ರಚೂಡ್ ದಂಪತಿ ಭೇಟಿ



ಮೈಸೂರಿಗೆ ಭೇಟಿ ನೀಡಿದ್ದ ಭಾರತದ ಸುಪ್ರಿಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಪತ್ನಿ ಕಲ್ಪನಾ ದಾಸ್ ಅವರೊಂದಿಗೆ ಗುರುವಾರ ರಾತ್ರಿ ಸುತ್ತೂರು ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಗಳನ್ನು ಭೇಟಿ ಮಾಡಿ, ಆಶೀರ್ವಾದ ಪಡೆದರು.

ಎದೆ ಝಲ್ ಎನ್ನುವಂತಹ ಸಾಹಸ ಪ್ರದರ್ಶನ..



ಮೈಸೂರಿನ ನಜರ್‌ಬಾದಿನ ಕಾರಂಜಿ ಕೆರೆ ಬಳಿ ಇಂದು ಆರಂಭವಾದ ಜೆಮಿನಿ ಸರ್ಕಸ್‌ನಲ್ಲಿ ಶನಿವಾರ ಕಲಾವಿದರು ಪ್ರೇಕ್ಷಕರ ಎದೆ ಝಲ್ ಎನ್ನುವಂತೆ ಸಾಹಸ ಪ್ರದರ್ಶಿಸಿದರು.


ರಾಜ್ಯದ ಜನತೆಗೆ ಮುಖ್ಯಮಂತ್ರಿ ಪ್ರಚೋದನೆ
ಸಿದ್ದರಾಮಯ್ಯ ಬಂಧಿಸಲು ಸ್ನೇಹಮಯಿ ಕೃಷ್ಣ ಮನವಿ



ಮೈಸೂರು, ಅ.5–ಮುಡಾ ಪ್ರಕರಣದ ವಿರುದ್ಧ ರಾಜ್ಯದ ಜನತೆಗೆ ಬಹಿರಂಗವಾಗಿ ಪ್ರಚೋದನೆ ನೀಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೂಡಲೇ ಬಂಧಿಸಬೇಕು ಎಂದು ದೂರುದಾರರಾದ ಸ್ನೇಹಮಯಿ ಕೃಷ್ಣ ಅವರು ಲೋಕಾಯುಕ್ತ ಎಸ್ಪಿ ಉದೇಶ್ ಅವರಿಗೆ ವಾಟ್ಸಾಪ್ ಸಂದೇಶದ ಮೂಲಕ ಮನವಿ ಸಲ್ಲಿಸಿದ್ದಾರೆ.

ಮಾನ್ವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯನವರು, ಬಿಜೆಪಿ–ಜೆಡಿಎಸ್‌ನ ಸುಳ್ಳು ಮತ್ತು ಕಪಟ ಷಡ್ಯಂತ್ರಕ್ಕೆ ಪಾಠ ಕಲಿಸಲು ಸಿದ್ಧರಾಗಿ ಎಂದು ಕರೆ ನೀಡಿರುವ ಸುದ್ದಿಯ ತುಣುಕನ್ನು ಉಲ್ಲೇಖಿಸಿರುವ ಸ್ನೇಹಮಯಿ ಕೃಷ್ಣ, ಸಿದ್ದರಾಮಯ್ಯನವರ ಇಂತಹ ಪ್ರಚೋದನೆಯಿಂದ ದೂರುದಾರನಾದ ನನ್ನ ಮತ್ತು ನನ್ನ ಕುಟುಂಬಕ್ಕೆ ತೊಂದರೆಯಾಗುವ ಸಾಧ್ಯತೆ ಇದೆ ಹಾಗೂ ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ ಹೀಗಾಗಿ ಕೂಡಲೇ ಅವರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಬೇಕು ಎಂದು ಮನವಿ ಮಾಡಿರುವುದಲ್ಲದೇ, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದಾರೆ

ನಾಡಕುಸ್ತಿಯಲ್ಲಿ ಮೈನವಿರೇಳಿಸುವ ಹಣಾಹಣಿ





ಮೈಸೂರು, ಅ.5(ಎಂಕೆ)– ನಗರದ ದೊಡ್ಡಕೆರೆ ಮೈದಾನ ಆವರಣದ ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಸರಾ ನಾಡಕುಸ್ತಿ ಪಂದ್ಯಾವಳಿಯಲ್ಲಿ ರೋಚಕತೆ ಮುಂದುವರೆದಿದ್ದು, ಶನಿವಾರ 33 ಜೋಡಿ ಪೈಲ್ವಾನರು ಗೆಲುವಿಗಾಗಿ ತೊಡೆ ತಟ್ಟಿದರು.

12 ವರ್ಷದ ಪೈ.ಚೇತನ್ ತನ್ನ ಪ್ರತಿಸ್ಪರ್ಧಿ ಪೈ.ಜಿ.ಸಿ.ವಿಜಯ್‌ಗೌಡ ವಿರುದ್ಧ ಕೇವಲ 20 ಸೆಕೆಂಡ್‌ಗಳಲ್ಲಿ ಜಯಗಳಿಸಿ ಅಚ್ಚರಿ ಮೂಡಿಸಿದರು. ಸೆಣಸಾಟ ಶುರುವಾಗಿ ಇನ್ನೇನು ಪಟ್ಟು ಹಾಕಬೇಕು ಎನ್ನುವಷ್ಟರಲ್ಲಿ ಪ್ರತಿ ಪಟ್ಟು ಹಾಕಿ ಕೆಡವಿದ ಪೈ.ಚೇತನ್ ಅಚ್ಚರಿಯ ಜಯ ಗಳಿಸಿ ನೆರೆದಿದ್ದವರಿಂದ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.

ಹಾಗೆಯೇ ಪೈ.ಪುರುಷೋತ್ತಮ್ ವಿರುದ್ಧ ಪೈ.ರಾಮಚಂದ್ರ, ಪೈ.ಸತೀಶ್ ವಿರುದ್ಧ ಪೈ.ಜಿ.ಪೃತ್ವಿಕ್, ಪೈ.ಬಿ.ಎನ್. ರಾಜೇಂದ್ರ ವಿರುದ್ಧ ಪೈ.ಎ.ಚಿರಂಜೀವಿ, ಪೈ.ಭುವನ್ ವಿರುದ್ಧ ಪೈ.ಚಿರಂತ್, ಪೈ.ಬಿ. ಆರ್.ಯೋಗೇಶ್ ವಿರುದ್ಧ ಪೈ.ಉಮ್ಮರ್, ಪೈ.ಹೆಚ್.ಎಸ್.ಪ್ರೀತಂ ವಿರುದ್ಧ ಪೈ.ಎಸ್. ಹರ್ಷ, ಪೈ.ಅನೀಸ್ ಮೊಹಮ್ಮದ್ ಖಾನ್ ವಿರುದ್ಧ ಪೈ.ಕೆ.ಎನ್.ನವೀನ್, ಪೈ.ಮೊಹಮ್ಮದ್ ಅಯಾನ್ ವಿರುದ್ಧ ಪೈ.ವರುಣ್, ಪೈ.ವಿ.ದಿಗಂತ್ ರಾವ್ ವಿರುದ್ಧ ಪೈ.ಮೊಹಮ್ಮದ್ ದಸ್ತಗಿರ್ ಷರೀಫ್, ಪೈ.ಪಿ.ಧ್ರುವ ವಿರುದ್ಧ ಪೈ.ಸಿ.ಭುವನ್, ಪೈ.ಕೆ.ಹರ್ಷ ವಿರುದ್ಧ ಪೈ.ಸಿ.ಮೋಹನ್, ಪೈ.ಜೀವನ್ ವಿರುದ್ಧ ಪೈ.ಎಂ.ಪುನೀತ್, ಪೈ.ಭುವನ್ ನಾಯ್ಕ ವಿರುದ್ಧ ಪೈ.ಆರ್. ದಿಗಂತ್, ಪೈ.ಜಿ.ನಾಗೇಶ್ ವಿರುದ್ಧ ಪೈ.ಭೈರವಸ್ವಾಮಿ ಹಾಗೂ ಪೈ.ಪಾಟೀಲ್ ಪಾಷ ವಿರುದ್ಧ ಪೈ.ಯಶ್ವಂತ್ ಗೆಲುವು ಸಾಧಿಸಿದರು.

ಇಂದು ಪಂಜಕುಸ್ತಿ: ದಸರಾ ಕುಸ್ತಿ ಪಂದ್ಯಾವಳಿಯ ಜೊತೆಗೆ ತೋಳ್ಬಲ ಪ್ರದರ್ಶಿಸುವ ಪಂಜಕುಸ್ತಿ ಪಂದ್ಯಾವಳಿ ನಾಳೆ(ಅ.6) ಬೆಳಗ್ಗೆ 10 ಗಂಟೆಯಿಂದ ನಡೆಯಲಿದ್ದು, ಸಂಜೆ ವೇಳೆಗೆ ಫೈನಲ್ ಪಂದ್ಯಗಳು ನಡೆಯಲಿವೆ. ಪಂಜ ಕುಸ್ತಿಯಲ್ಲಿ ವಿಶೇಷ ಚೇತನರಿಗೂ ಅವಕಾಶ ನೀಡಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	1+3 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರಾದೇವಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಭೈರಾದೇವಿ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	2 ಪ್ರದರ್ಶನಗಳು
ರಾಜಯೋಗ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಬೆ.10.05ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ರಾ.10ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10.05ಕ್ಕೆ, ದೇವರ 1 (ತೆ): ಮ.1ಕ್ಕೆ, ಅನ್ನ (ಕ): ಸಂ.4.30ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಕಳಿಂಗ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಕ ವಿಮಾನಂ (ಮ): ಬೆ.10.20ಕ್ಕೆ, ಭೈರಾದೇವಿ (ಕ): ಮ.1.05ಕ್ಕೆ, ದೇವರ 1 (ತೆ): ಮ.3.45ಕ್ಕೆ, ರಾ.7.05ಕ್ಕೆ, ತೆಕ್ಕು ವಡಕ್ಕು (ಮ): ರಾ.10.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸ್ವಾಗ್ (ತೆ): ಸಂ.4.10ಕ್ಕೆ, ತೆಕ್ಕು ವಡಕ್ಕು (ಮ): ರಾ.7.10ಕ್ಕೆ, ಗುಮಾಸ್ತಾನ್ (ಮ): ರಾ.9.40ಕ್ಕೆ.
ಸ್ಕ್ರೀನ್ 2	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಮ.1.45ಕ್ಕೆ, ದೇವರ 1 (ತೆ): ಸಂ.4.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 3	ಭೈರಾದೇವಿ (ಕ): ಮ.1.40ಕ್ಕೆ, ಸಂ.4.15ಕ್ಕೆ, ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಸಂ.6.50ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ದೇವರ 1 (ಕ): ಮ.1.30ಕ್ಕೆ, ದೇವರ 1 (ತೆ): ಸಂ.6.05ಕ್ಕೆ, ರಾ.9.20ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅರಮನೆ ಅಂಗಳದಲ್ಲಿ ಕಳೆಗಟ್ಟಿದ ಕಥಕ್ ನೃತ್ಯ

● ತುಂತುರು ಮಳೆಯ ಸಿಂಚನ ನಡುವೆ ಕಲಾರಸಿಕರ ಕಣ್ಣಿಗೆ ಕಂಪು, ಕಿವಿಗೆ ಇಂಪು ● ಗಾನ ಮಾಧುರ್ಯದೊಂದಿಗೆ ನೃತ್ಯದ ಸೊಬಗು



ಅರಮನೆ ವೇದಿಕೆಯಲ್ಲಿ ಮಾನಸ ಜೋಷಿ ಮತ್ತು ತಂಡ ಕಥಕ್ ನೃತ್ಯ ಸಾದರಪಡಿಸಿತು.



ಆದಿತ್ಯ ಶ್ರೀನಿಧಿ ತಾಯೂರು ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸಿದರು.



ವಯೋಲಿನ್‌ನಲ್ಲಿ ವಿದ್ವಾನ್ ಮೈಸೂರು ಎನ್.ಕಾರ್ತಿಕ್ ಮತ್ತು ಸರೋದ್‌ನಲ್ಲಿ ಇಂದ್ರಾಯುಧ್ ಮಜುಂದಾರ್ ಅವರು ಜುಗಲ್‌ಬಂದಿ ಕಾರ್ಯಕ್ರಮ ನಡೆಸಿಕೊಟ್ಟರು.

ಮೈಸೂರು,ಅ.5(ಪಿಎಂ)– ಅರಮನೆ ಅಂಗಳದಲ್ಲಿ ಮೋಹಕ ಭಾವ–ಭಂಗಿ ಕಥಕ್ ನೃತ್ಯದ ಅನಾವರಣ ಕಳೆಗಟ್ಟಿದರೆ, ಗಾನ ಮಾಧುರ್ಯದ ಇಂಪು ಮತ್ತು ನೃತ್ಯದ ಸೊಬಗಿನ ಕಂಪು ತುಂತುರು ಮಳೆ ನಡುವೆಯೂ ಕಲಾರಸಿಕರನ್ನು ತನ್ಮಯಗೊಳಿಸಿತು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಇಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ಮೂರನೇ ದಿನವಾದ ಶನಿವಾರ ಸಂಜೆ ಇಂತಹ ಸಂಗೀತ–ನೃತ್ಯದ ಸೊಬಗು ಮೂಡಿ ಬಂದು ಸಭಿಕರ ಮನಮುದಗೊಳಿಸಿ, ಸಂಭ್ರಮಿಸುವಂತೆ ಮಾಡಿತು.

ರಂಗಭೂಮಿ, ಕಿರಿ–ಹಿರಿತೆರೆ ನಟಿಯೂ ಆದ ಮಾನಸ ಜೋಷಿ ಮತ್ತು ಅವರ ತಂಡ ಸಾದರಪಡಿಸಿದ ಕಥಕ್ ನೃತ್ಯವು ನೆರೆದವರ ಮನಸೂರೆಗೊಂಡಿತು. 'ತರಾನ' ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಗೆಜ್ಜೆನಾದದೊಂದಿಗೆ ಹೆಜ್ಜೆ ಹಾಕಿ ಕಲಾ ಕೌಶಲ ಮೆರೆದು ಸಭಿಕರಲ್ಲಿ ಮೋಡಿ ಮಾಡಲಾಯಿತು. ಬಳಿಕ 'ಕೃಷ್ಣಾಷ್ಟಕಂ' ಶ್ಲೋಕಗಳ ಗೀತೆಗೆ ನೃತ್ಯ ಪ್ರಸ್ತುತಪಡಿಸಿದರು. ಆ ಮೂಲಕ ಶ್ರೀಕೃಷ್ಣನ ಬಹುವ್ಯಕ್ತಿತ್ವ ವರ್ಣನೆಯನ್ನು ತಮ್ಮ ಕಥಕ್ ನೃತ್ಯದ ಭಾವಭಂಗಿಯಲ್ಲಿ ಅನಾವರಣಗೊಳಿಸಿದರು.

ಶ್ರೀ ಬಸವಪ್ಪ ಶಾಸ್ತ್ರಿಗಳ 'ಕಾಯೌ ಶ್ರೀ ಗೌರಿ' ಗೀತೆಗೆ ನರ್ತಿಸಿ ಸಭಿಕರಿಗೆ ಪುಳಕವಿಟ್ಟರು. ಈ ಕಲಾಕೌಶಲಕ್ಕೆ ಸಭಿಕರು ಬೆರಗಾಗಿ ಚಪ್ಪಾಳೆಯ ಮಳೆ ಸುರಿಸಿದರು. ಸಂಗೀತ ನಿರ್ದೇಶಕ ಪ್ರವೀಣ್ ಡಿ.ರಾವ್ ಸದರಿ ಕಾಯೌ ಶ್ರೀಗೌರಿ ಗೀತೆಯನ್ನು ಕಥಕ್ ನೃತ್ಯಕ್ಕೆ ಪೂರಕವಾಗಿ ಮರುವಿನ್ಯಾಸಗೊಳಿಸಿದ್ದು, ಇದಕ್ಕೆ ಮಾನಸ ಜೋಷಿ ಮತ್ತು ತಂಡ ನೃತ್ಯ ಸಾದರಪಡಿಸಿ ದೃಶ್ಯ ಕಾವ್ಯ ಮೂಡಿಸಿತು.

ಇದಕ್ಕೂ ಮುನ್ನ ಮಂಡ್ಯದ ಕುಮಾರಿ ಕೆ.ಎಲ್.ಹಂಸಲೇಖ ಮತ್ತು ತಂಡ ಭರತನಾಟ್ಯ ಸಾದರಪಡಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿತು. ಹಂಸಲೇಖ ಮತ್ತು ಅವರ ತಂಡ ವಿವಿಧ ರಾಗ–ತಾಳಗಳನ್ನು ಒಳಗೊಂಡ ಶಾಸ್ತ್ರೀಯ ಸಂಗೀತಕ್ಕೆ ಮನಮೋಹಕ ಭಾವ ಭಂಗಿಯಲ್ಲಿ ಹೆಜ್ಜೆ ಹಾಕಿತು. ಅಲ್ಲದೆ, ಉಷಾ ಯು.ಕಾರಂತ ಮತ್ತು ತಂಡದ ಸುಗಮ ಸಂಗೀತವು ಸಭಿಕರನ್ನು ಸಂಗೀತದ ಅಲೆಯಲ್ಲಿ ತೇಲಿಸಿತು. ಜೊತೆಗೆ ಆದಿತ್ಯ ಶ್ರೀನಿಧಿ ತಾಯೂರು ಅವರ ಕರ್ನಾಟಕ ಶಾಸ್ತ್ರೀಯ ಸಂಗೀತವು ಸಭಿಕರು ಮಂತ್ರಮುಗ್ಧರಾಗಿ ಮೈಮರೆಯುವಂತೆ ಮಾಡಿತು.

ವಿದ್ವಾನ್ ಮೈಸೂರು ಎನ್.ಕಾರ್ತಿಕ್ ಮತ್ತು ಇಂದ್ರಯುಧ್ ಮಜುಂದಾರ್ ಅವರ ವಯೋಲಿನ್–ಸರೋದ್ ಜುಗಲ್ ಬಂದಿಯು ನಾದಮಯ ಲೋಕ ಸೃಷ್ಟಿಸಿ ಸಭಿಕರು ತಲೆದೂಗುವಂತೆ ಮಾಡಿತು. ಇದಲ್ಲದೆ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ವಾದ್ಯ ಸಂಗೀತವೂ ಗಾನ ಸುಧೆ ಹರಿಸಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ, ಸಾಂಸ್ಕೃತಿಕ ಉಪಸಮಿತಿ ಅಧ್ಯಕ್ಷ ಅಹಿಂದ ಜವರಪ್ಪ ಮತ್ತಿತರರು ಹಾಜರಿದ್ದರು. ಸ್ನೇಹ ನೀಲಪ್ಪಗೌಡ ಕಾರ್ಯಕ್ರಮ ನಿರೂಪಿಸಿದರು.

ಜಿಟಿಡಿಗೆ ಭಯ ಕಾಡುತ್ತಿರಬಹುದು: ಅಲುಗಾಡುತ್ತಿದೆ ಮುಖ್ಯಮಂತ್ರಿ ಕುರ್ಚಿ



ಬೆಂಗಳೂರು: ತಮ್ಮ ನಿವೇಶನಗಳಿಗೂ ಸಂಚಕಾರ ಬರಬಹುದು ಎಂಬ ಭಯ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಅವರನ್ನು ಕಾಡುತ್ತಿರಬಹುದು. ಹಾಗಾಗಿಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ನಿಂತಿದ್ದಾರೆ ಎಂದು ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಶನಿವಾರ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿ.ಟಿ.ದೇವೇಗೌಡರು, ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಕೊಡುವ ಅಗತ್ಯವಿಲ್ಲ. ಎಫ್‌ಐಆರ್ ದಾಖಲಾದ ಎಲ್ಲರೂ ರಾಜೀನಾಮೆ ನೀಡಬೇಕು ಎಂದಿದ್ದಾರೆ. ಅವರ ಹೇಳಿಕೆ ಅವರನ್ನು ರಕ್ಷಿಸಿಕೊಳ್ಳುವ ರೀತಿ ಇದೆ. ಮುಡಾ ನಿವೇಶನ ಹಂಚಿಕೆಯ ಎಲ್ಲ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿದರೆ ಸತ್ಯಾಂಶ ಹೊರಬರಲಿದೆ ಎಂದರು.

ದಸರಾ ಮಹೋತ್ಸವ ಉದ್ಘಾಟಿಸಿದ ಸಾಹಿತಿ ಹಂಪ ನಾಗರಾಜಯ್ಯ ಅವರು, ಸಿದ್ದರಾಮಯ್ಯ ಹಾಗೂ ಸರ್ಕಾರದ ಹೊಗಳುಭಟ್ಟರಂತೆ ಭಾಷಣ ಮಾಡಿದ್ದಾರೆ ಇದು ದಸರಾ ಇತಿಹಾಸಕ್ಕೆ ಕಪ್ಪುಚುಕ್ಕಿ ಎಂದು ಟೀಕಿಸಿದರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿ 28 ವರ್ಷ ಜೈಲುವಾಸ ಅನುಭವಿಸಿದ ಸಾವರ್ಕರ್ ಅವರನ್ನು ಕುರಿತು ಟೀಕಿಸಿದ ಸಚಿವ ದಿನೇಶ್ ಗುಂಡೂರಾವ್ ಕ್ಷಮೆ ಯಾಚಿಸಬೇಕು. ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದೂ ಆಗ್ರಹಪಡಿಸಿದರು.

ಅಲುಗಾಡುತ್ತಿದೆ ಮುಖ್ಯಮಂತ್ರಿ ಕುರ್ಚಿ: ವಿರೋಧಪಕ್ಷಗಳ ಮಾತಿಗೆ 'ಜಗ್ಗಲ್ಲ ಬಗ್ಗಲ್ಲ' ಎನ್ನುತ್ತಿದ್ದ ಸಿದ್ದರಾಮಯ್ಯ ಈಗ ಆತ್ಮಸಾಕ್ಷಿ ಮಾತು ಆಡುತ್ತಿರುವುದು ಸಿ.ಎಂ ಕುರ್ಚಿ ಅಲುಗಾಡುತ್ತಿರುವುದರ ಸಂಕೇತ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಿದ್ದರಾಮಯ್ಯ ಕೆಳಗೆ ಇಳಿಯುವುದು ಅವರ ಪಕ್ಷದವರಿಗೂ ಮನವರಿಕೆಯಾಗಿದೆ. ಅದಕ್ಕಾಗಿ ಕಾಂಗ್ರೆಸ್‌ನಲ್ಲಿ ಕುರ್ಚಿ ಯುದ್ಧ ಆರಂಭವಾಗಿದೆ ಎಂದರು. ಗ್ರಾಮ ಪಂಚಾಯಿತಿ ಅಧಿಕಾರಿಗಳು ಪ್ರತಿಭಟನೆಗೆ ಕುಳಿತಿದ್ದಾರೆ. ಗ್ರಾಮಗಳಲ್ಲಿ ಅರಾಜಕತೆ ಸೃಷ್ಟಿಯಾಗಿದೆ. ಇಲಾಖೆಯ ಆಡಳಿತ ನಿಭಾಯಿಸುವಲ್ಲಿ ಪ್ರಿಯಾಂಕ್ ಖರ್ಗೆ ಸಂಪೂರ್ಣ ವಿಫಲರಾಗಿದ್ದಾರೆ ಎಂದು ದೂರಿದರು.

ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ: ಸವಾರ ಸಾವು

ಕೆ.ಆರ್.ಪೇಟೆ: ರಸ್ತೆ ಬದಿ ನಿಂತಿದ್ದ ಲಾರಿಗೆ ಬೈಕೊಂದು ಡಿಕ್ಕಿ ಹೊಡೆದ ಪರಿಣಾಮ ಯುವಕ ನೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಬೂಕನಕೆರೆ ಗ್ರಾಮದ ಮೋದೂರು ಬಳಿ ಸಂಭವಿಸಿದೆ. ಶ್ರೀರಂಗಪಟ್ಟಣ ತಾಲೂಕಿನ ಬಲ್ಲೇನಹಳ್ಳಿ ಗ್ರಾಮದ ಶ್ರೇಯಸ್ ಗೌಡ (27)ಮೃತ ದುರ್ದೈವಿ. ಶ್ರೇಯಸ್ ಗೌಡ ತನ್ನ ಬೈಕಿನಲ್ಲಿ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ರಸ್ತೆ ಬದಿ ನಿಂತಿದ್ದ ಲಾರಿಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡು ಸಾವನ್ನಪ್ಪಿದ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್.ಪೇಟೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು. ಲಾರಿ ಮತ್ತು ಬೈಕನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.